"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

24ನೇ ಸೆಪ್ಟೆಂಬರ್ 2021
ಶುಕ್ರವಾರ

**ವಿಷಯಾನುಕ್ರಮಣಿಕೆ (Index)**


1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1485– ಜಲ-ಜೀವನ್ ಮಿಷನ್ ಅಡಿ ಪ್ರತಿ ಮನೆಗೆ ಕುಡಿಯುವ ನೀರಿನ ನಳ ಜೋಡಣೆ ಕುರಿತು**
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**1553– ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಪ್ರವಾಹದಿಂದಾಗಿ ಆಸ್ತಿ-ಪಾಸ್ತಿಗಳು ಹಾನಿಗೊಳಗಾದ ಬಗ್ಗೆ.**
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**1488- ಬೀದರ್ ಜಿಲ್ಲೆಯಲ್ಲಿ ಕೃಷಿ ಮಹಾವಿದ್ಯಾಲಯ ಪ್ರಾರಂಭಿಸುವ ಬಗ್ಗೆ**
- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಬಿ.ಸಿಪಾಟೀಲ್(ಕೃಷಿ ಸಚಿವರು)

**1478- ರಾಜ್ಯದಲ್ಲಿ ಕಮಾಡಿಟಿ ಬೋರ್ಡ್(Commodity Board) ಸ್ಥಾಪನೆ ಕುರಿತು**
- ಶ್ರೀ ಎಸ್.ವೀಣಾ ಅಚ್ಚಯ್ಯ
- ಶ್ರೀ ಮುನಿರತ್ನ(ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)


"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1573– ಸಾರಿಗೆ ಇಲಾಖೆಯ ತಪಾಸಣಾ ಕೇಂದ್ರಗಳನ್ನು ಬಲಪಡಿಸುವುದು ಹಾಗೂ ವರ್ಗಾವಣೆ/ಪದೋನ್ನತಿಯಲ್ಲಿ ನಿಯಮಾವಳಿ ಪಾಲಿಸುವ ಕುರಿತು**

- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು, ಡಾ. ಕೆ.ಗೋವಿಂದರಾಜ್‌ರವರ ಪರವಾಗಿ)
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**1410- ರಾಜ್ಯದ ಹಿಪ್ಪುನೇರಳೆ ಕೃಷಿ ತೋಟದ ಬಗ್ಗೆ**

- ಶ್ರೀ ಎಸ್.ರವಿ
- ಡಾ.ನಾರಾಯಣಗೌಡ(ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

**1493- ಸೇವಾ ಸಿಂಧು ಮಾಹಿತಿ ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸ್ ನೀಡುವಲ್ಲಿ ವಿಳಂಬವಾಗುತ್ತಿರುವ ಕುರಿತು.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**1450+1419- ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸದಸ್ಯತ್ವದ ಕುರಿತ ಮಾಹಿತಿ**

- ಶ್ರೀ ಎಸ್.ರುದ್ರೇಗೌಡ ಮತ್ತು
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಮುನಿರತ್ನ(ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**1566- ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಬಗ್ಗೆ**

- ಶ್ರೀ ವಿಜಯ ಸಿಂಗ್
- ಶ್ರೀ ಮುನಿರತ್ನ(ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**1581- ಎಸ್.ಸಿ./ಎಸ್.ಟಿ. ಉದ್ಯೋಗ ವಿನಿಮಯ ಕೇಂದ್ರದ ಬಗ್ಗೆ**

- ಶ್ರೀ ಆರ್.ಬಿ.ತಿಮ್ಮಾಪೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1535- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಬಗ್ಗೆ**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**1534- ಜಲಧಾರೆ ಯೋಜನೆ ಕುರಿತು**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ತಜ್ಞ ವೈದ್ಯಾಧಿಕಾರಿ ಮತ್ತು ಸಾಮಾನ್ಯ ತಜ್ಞ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಕಾಲಾವಕಾಶ ನೀಡುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಆ) ಮಂಡ್ಯ ವಿಶ್ವವಿದ್ಯಾಲಯದಲ್ಲಿ ಮೂಲ ಸೌಕರ್ಯಗಳ ಕೊರತೆ ಹಾಗೂ ಸಿಬ್ಬಂದಿಗಳ ಹುದ್ದೆಗಳ ಮಂಜೂರಾತಿ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳ ಸಚಿವರ ಪರವಾಗಿ)

**ಇ) ಬಿಇಎಂಎಲ್ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘದವರು ೨೦೦೨-೨೦೦೩ನೇ ಸಾಲಿನಲ್ಲಿ ಕೆ.ಆರ್.ಪುರಂನ ತಣಿಸಂದ್ರ, ಗೆದ್ದನಹಳ್ಳಿ, ಭೈರತಿ ಅಮಾನಿಖಾನೆ ಪ್ರದೇಶಗಳಲ್ಲಿ ಖರೀದಿಸಿದ ಜಮೀನಿನಲ್ಲಿ ಮಾಡಲಾದ ನಿವೇಶನವನ್ನು ಖಾಸಗಿಯವರಿಗೆ ಹಂಚಿಕೆ ಮಾಡಿರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಸಹಕಾರ ಸಚಿವರ ಪರವಾಗಿ)

**ಈ) ಕೋವಿಡ್-19 ರ ಸಾಂಕ್ರಾಮಿಕದ ಪ್ರಯುಕ್ತ ದೇಶಾದ್ಯಂತ ಲಾಕ್‌ಡೌನ್ ಘೋಷಣೆ ಮಾಡಿದ ಕಾರಣ 2019-20ನೇ ಸಾಲಿನಲ್ಲಿ ಪದವಿ ಪೂರ್ವ (ಪಿ.ಯು.ಸಿ.) ಫಲಿತಾಂಶ ಪ್ರಕಟಣೆಯಲ್ಲಿ ವಿಳಂಬವಾಗಿರುವುದರಿಂದ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಅನುಕಂಪ ಆಧಾರದ ನೇಮಕಾತಿಗೆ ವಿನಾಯಿತಿ ನೀಡಿ ಗಣನೆಗೆ ತೆಗೆದುಕೊಳ್ಳಬೇಕೆಂಬ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು. ಮುಖ್ಯಮಂತ್ರಿಗಳ ಪರವಾಗಿ)

**ಉ) ಕೊರೋನಾ ವಾರಿಯರ್ಸ್‌ಗಳಿಗೆ ವೇತನ ಮತ್ತು ಪ್ರೋತ್ಸಾಹ ಭತ್ಯೆ ನೀಡದಿರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿವಿ ಪರೀಕ್ಷೆ ವಿಳಂಬದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದೇಶಿ ವಿಶ್ವವಿದ್ಯಾನಿಲಯಗಳ ಉನ್ನತ ವ್ಯಾಸಂಗಕ್ಕೆ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಆರ್.ಬಿ.ತಿಮ್ಮಾಪೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚವರು)

**ಆ) ಮರಾಠ ಜನಾಂಗವನ್ನು ಪ್ರವರ್ಗ ೩ಬಿ ಯಿಂದ ೨ಎ ಗೆ ಸೇರಿಸುವ ಕುರಿತು**

- ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಬೆಂಗಳೂರು ನಗರದ ವಾಹನ ದಟ್ಟಣೆಯಿಂದ ಉಂಟಾಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಿ ಜನರ ಸ್ವಾಸ್ತ್ಯವನ್ನು ಉತ್ತೇಜಿಸುವ ದೃಷ್ಟಿಯಿಂದ ನಿರ್ಮಾಣ ಮಾಡಿರುವ ಸೈಕಲ್ ಪಥಗಳು ಸರ್ಕಾರದ ನಿರ್ಲಕ್ಷ್ಯ ಹಾಗೂ ನಿರ್ವಹಣೆಯ ಕೊರತೆ ಜೊತೆಗೆ ಕಳಪೆ ಕಾಮಗಾರಿಗಳಿಂದ ಪದೇಪದೇ ದುರಸ್ತಿಗೊಳಗಾಗುತ್ತಿರುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಹೊಸದಾಗಿ ರಚನೆಯಾಗಿರುವ 57 ತಾಲ್ಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗಳನ್ನು ಸೃಜಿಸುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)

**4. ವರದಿಯನ್ನೊಪ್ಪಿಸುವುದು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಸರ್ಕಾರದಿಂದ ಉತ್ತರ ಬಾರದಿರುವ ಬಗ್ಗೆ**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ**

**ಮೈಸೂರು ಜಿಲ್ಲೆಯ ಚಾಮುಂಡಿಪುರದ ರಿಂಗ್ ರಸ್ತೆಯ ಬಳಿ ದಿನಾಂಕ: 24.08.2021ರಂದು ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ತನಿಖೆಯಲ್ಲಿ ಪೊಲೀಸರು ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳ ಅನ್ವಯ ಕ್ರಮ ವಹಿಸದಿರುವ ಕುರಿತು.**

- ಶ್ರೀ ಜೆ.ಸಿ. ಮಾಧುಸ್ವಾಮಿ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಸಿ.ಎಂ.ಲಿಂಗಪ್ಪ
- ಶ್ರೀಮತಿ ಭಾರತಿಶೆಟ್ಟಿ
- ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್(ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು)
- ಡಾ.ವೈ.ಎ.ನಾರಾಯಣಸ್ವಾಮಿ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ

**7. ಶಾಸನ ರಚನೆ**

ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗಿಕಾರ

**ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕ, 2021**

- ಶ್ರೀ ಜೆ.ಸಿ. ಮಾಧುಸ್ವಾಮಿ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಪಿ.ಆರ್.ರಮೇಶ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ರವಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಊ) ಕಳೆದ 2-3 ದಿವಸಗಳ ಹಿಂದೆ ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ವೈರಲ್ ಆಗಿರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಗೃಹ ಸಚಿವರ ಪರವಾಗಿ)

**ಋ) ಜಾನುವಾರುಗಳ ಆರೋಗ್ಯಕ್ಕೆ ಲಸಿಕೆಗಳ ಪೂರೈಕೆಯನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿರುವ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಪಶು ಸಂಗೋಪನಾ ಸಚಿವರ ಪರವಾಗಿ)

**ಎ) ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**9. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**10. ನಿಯಮ 72 ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು, ನಿಯಮ 330ರ ಸೂಚನೆಗಳಿಗೆ ಮತ್ತು ನಿಯಮ 58ರ ಅಡಿಯಲ್ಲಿ ಸಲ್ಲಿಕೆಯಾದ ಅರ್ಧ ಗಂಟೆ ಕಾಲಾವಧಿ ಸೂಚನೆಗಳಿಗೆ ಸರ್ಕಾರದಿಂದ ನೀಡಲಾದ ಉತ್ತರಗಳ ಮಂಡನೆ**

**ಅ) ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

**ಆ) ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಸೂಚನೆಗಳು**

**ಇ) ನಿಯಮ 58ರ ಮೇರೆಗೆ ಅರ್ಧಗಂಟೆ ಕಾಲಾವಧಿ ಚರ್ಚೆಯ ಸೂಚನೆಗಳು**

**11. ಸಾರಾಂಶ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

<><><>

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(1003) 24-09-2021/10.10/ಎಂ.ಎಂ-ಆರ್.ಎನ್**

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 24ನೇ ಸೆಪ್ಟೆಂಬರ್ 2021**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**

**ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ... ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇಂದು ಮಂತ್ರಿಗಳಿದ್ದಾರೆ ಮೊದಲು ನನಗೆ ನಿಯಮ 68ಕ್ಕೆ ಉತ್ತರ ಕೊಡಿಸಿ.

**ಸಭಾಪತಿಯವರು**:- ಮಂತ್ರಿಗಳಿದ್ದರು, ನೀವೇ ಇರಲಿಲ್ಲ. ನಾವು ನಿಮ್ಮನ್ನು ಕಾಯುತ್ತಿದ್ದೆವು.

**ಶ್ರೀಮತಿ ಭಾರತಿ ಶೆಟ್ಟಿ:-** ನಿನ್ನೆ ಇಡೀ ರಾತ್ರಿ . . .

**ಸಭಾಪತಿಯವರು**:- ಆಯಿತು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಸದಸ್ಯರ ವಿಷಯಕ್ಕೆ ಉತ್ತರ ಕೊಡಿಸಿ.

**ಸಭಾಪತಿಯವರು**:- ಈಗ ಒಂದು ಕೆಲಸ ಮಾಡೋಣ. ನಿಯಮ 68ಕ್ಕೆ ಉತ್ತರ ಕೊಡಿಸೋಣ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರು ಬಹಳ ಪ್ರಮುಖವಾದ, ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಸದನದಲ್ಲಿ ಒಳ್ಳೆಯ ಚರ್ಚೆಯಾಯಿತು. ದುರಾದೃಷ್ಟವೆಂದರೆ, ಮೈಸೂರು ಕೂಡ ಅದರಲ್ಲಿ ಸೇರಿಕೊಂಡಿತು. ಅದರಲ್ಲಿ ರಾಜಕೀಯ ಕೂಡ ಮಿಕ್ಸ್ ಆಯಿತು. ಇದು ಗಂಭೀರವಾದ ವಿಚಾರವಾಗಿರುವುದರಿಂದ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್ ಆರ್. ಪಾಟೀಲ್ಲರು ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ನೀವು ಮತ್ತು ಇಬ್ಬರೂ ಇದ್ದಾಗ ನಿಯಮ 68ಕ್ಕೆ ಉತ್ತರ ಕೊಡುವುದು ಒಳ್ಳೆಯದು ಎಂದು ನಾನು ಸಹ ಮಾನ್ಯ ಸಚಿವರಾದ ಮಾಧುಸ್ವಾಮಿಯವರ ಹತ್ತಿರ ಹೇಳಿದೆ.

**ಸಭಾಪತಿಯವರು**:- ನಿನ್ನೆ ದಿವಸ ಅವರು ಬರುವುದಿಲ್ಲವೆಂದು ನನಗೆ ಹೇಳಿದರು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಯಾವುದೋ ಕಾರ್ಯಕ್ರಮದಲ್ಲಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ನಮ್ಮದೊಂದು ಪ್ರೊಟೆಸ್ಟ್ ಇತ್ತು ಆದ್ದರಿಂದ ಅವರು ಒಂದು ಗಂಟೆ ತಡವಾಗಿ ಬರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಪೊಲೀಸರು ಅಡ್ಡ ಹಾಕಿದ್ದಾರೆ, ಆದ್ದರಿಂದ ಅವರು ಬರುವುದು ಕಷ್ಟವಾಗುತ್ತದೆ.

**ಸಭಾಪತಿಯವರು**:- ಪೊಲೀಸರು ಅಡ್ಡ ಹಾಕಿದ್ದಾರೋ ಅಥವಾ ನೀವೇ ಅವರನ್ನು ಅಡ್ಡ ಹಾಕಿದ್ದೀರೋ ಗೊತ್ತಿಲ್ಲ. ಹಾಗಾದರೆ ಮೊದಲು ವಿಧೇಯಕವನ್ನು ತೆಗೆದುಕೊಳ್ಳೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಬಿಲ್ ತೆಗೆದುಕೊಳ್ಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-:-** ಮಾನ್ಯ ಸಭಾಪತಿಯವರೇ, ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ. ಆಮೇಲೆ ಬಿಲ್ ತೆಗೆದುಕೊಳ್ಳೋಣ.

**ಸಭಾಪತಿಯವರು**:- ಈಗ ಪ್ರಶ್ನೋತ್ತರಗಳು. ಶ್ರೀ ಕೆ.ಸಿ. ಕೊಂಡಯ್ಯನವರ ಪ್ರಶ್ನೆ. ಶ್ರೀಮತಿ ಭಾರತಿ ಶೆಟ್ಟಿಯವರೇ, ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ. ಶ್ರೀ ಮುನಿರಾಜುಗೌಡರವರ ಪ್ರಶ್ನೆಯು ವರ್ಗಾವಣೆಯಾಗಿದೆ. ಶ್ರೀ ಕೆ. ಗೋವಿಂದರಾಜು, ಇಲ್ಲ. ಅವರ ಪರವಾಗಿ ಮಾನ್ಯ ಎಂ. ನಾರಾಯಣಸ್ವಾಮಿಯವರು.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 1573ನ್ನು ಸಾರಿಗೆ ಸಚಿವರಿಗೆ ಕೇಳಬಯಸುತ್ತೇನೆ.

**ಸಭಾಪತಿಯವರು**:- ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮ ಪ್ರಶ್ನೆಗೆ ಉತ್ತರ ಬರುತ್ತಿದೆ, ಮತ್ತೆ ಕರೆಯುತ್ತೇನೆ. ಈಗ ಮಾನ್ಯ ಎಸ್. ರವಿ. ಮಾನ್ಯ ಮರಿತಿಬ್ಬೇಗೌಡರು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 1493 ಅನ್ನು ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಸಚಿವರು 10 ನಿಮಿಷ ಬಿಟ್ಟು ಬರುತ್ತೇನೆ ಎಂದು ಹೇಳಿದ್ದಾರೆ.

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ನಿಮಗೆ ನಾನು ಹೇಳುತ್ತೇನೆ, ಯಾವ ಮಂತ್ರಿಗಳು ಸದನಕ್ಕೆ ಬರುವುದಿಲ್ಲ ಎಂಬುದನ್ನು ನನಗೆ ತಿಳಿಸಬೇಕು. ಪ್ರಶ್ನೆ ಕೇಳಿದಾಗ ನೀವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ ಬರುತ್ತಾರೆ, ಈಗ ಬರುತ್ತಾರೆ ಎಂದು ಹೇಳಿದರೆ, ನಾವು ಸದನದಲ್ಲಿ ಎಷ್ಟು ಸಲ ಹೇಳಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗಷ್ಟೇ ಸುದ್ದಿ ಕೊಟ್ಟರು. ದಾರಿಯಲ್ಲಿ ಬರುತ್ತಿದ್ದೇನೆ, ಪ್ರಶ್ನೋತ್ತರ ಅವಧಿಯೊಳಗೆ ಬರುತ್ತೇನೆ ಎಂದು ಹೇಳಿದರು.

**ಸಭಾಪತಿಯವರು**:- ಸದನವು ಇವತ್ತು ಬೆಳಗ್ಗೆ 10 ಗಂಟೆಗೇ ಇದೆ ಎಂದು ಅವರಿಗೆ ಗೊತ್ತಿದೆ ಅಲ್ಲವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪ್ರಶ್ನೋತ್ತರ ಅವಧಿಯೊಳಗೆ ಅವರು ಬಾರದಿದ್ದರೆ ನಾನೇ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು**:- ಮಾನ್ಯ ಸಭಾನಾಯಕರೆ, ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳುವುದಿಲ್ಲ. ಹೇಳಿದರೆ ಕಷ್ಟವಾಗುತ್ತದೆ. ಮಾನ್ಯ ಮರಿತಿಬ್ಬೇಗೌಡರೇ ಮಾನ್ಯ ಸಚಿವರು ಬರಲಿ.

**ಶ್ರೀ ಮರಿತಿಬ್ಬೇಗೌಡ:-** ಆಗಲಿ ಸ್ವಾಮಿ.

**ಸಭಾಪತಿಯವರು**:- ಈಗ ಮಾನ್ಯ ರುದ್ರೇಗೌಡರು.

**ಶ್ರೀ ಎಸ್. ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 1450 ಮತ್ತು 1419 ಅನ್ನು ಒಟ್ಟಿಗೇ ಕೇಳಿದ್ದೇನೆ.

**ಸಭಾಪತಿಯವರು**:- ಇದು ರೆಕಾರ್ಡ್ ಆಗಲಿ ಎಂದು ಕರೆದಿದ್ದೇನೆ. ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಉತ್ತರ ಬಂದ ನಂತರ ಮತ್ತೆ ಕರೆಯುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಗೋವಿಂದರಾಜುರವರ ಪ್ರಶ್ನೆಗೆ ಉತ್ತರ ಇಲ್ಲಿಲ್ಲ. ಮಾನ್ಯ ಗೋವಿಂದರಾಜುರವರ ಪವಾಗಿ ಪ್ರಶ್ನೆಯನ್ನು ಕೇಳಲು ನಾನು ತಯಾರಾಗಬೇಕಾದರೆ ಉತ್ತರ ಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಗೋವಿಂದರಾಜುರವರ ಪ್ರಶ್ನೆಗೆ ಉತ್ತರ ಈಗ ಬಂತು. ಮಾನ್ಯ ನಾರಾಯಣಸ್ವಾಮಿಯವರಿಗೆ ಉತ್ತರದ ಪ್ರತಿಯನ್ನು ಕೊಡಿ. ಈಗ ಶ್ರೀ ಅರವಿಂದ ಕುಮಾರ್ ಅರಳಿಯವರ ಪ್ರಶ್ನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಚುಕ್ಕೆ ಪ್ರಶ್ನೆ ಸಂಖ್ಯೆ 1488 ಅನ್ನು ಮಾನ್ಯ ಕೃಷಿ ಸಚಿವರಿಗೆ ಕೇಳಬಯಸುತ್ತೇನೆ. ಕೃಷಿ ಸಚಿವರೆಲ್ಲಿ?

**ಸಭಾಪತಿಯವರು**:- ನಮಗೆ ಏನಾದರೂ ಹೇಳಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಕೆಳಗಿದ್ದಾರಂತೆ, ನನಗೆ ಒಂದೈದು ನಿಮಿಷ ಸಮಯ ಕೊಡಿ ಎಲ್ಲಾ ಸಚಿವರನ್ನೂ ಕರೆಸುತ್ತೇನೆ.

**ಸಭಾಪತಿಯವರು**:- ಒಂದು 10 ನಿಮಿಷ ಸದನವನ್ನು ಮುಂದೂಡಲೇ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬೇಡ, ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳಿ.

(ಮುಂದು)

(1004) 24-09-2021/ 10-20/ ಕೆಹೆಚ್-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಯಾವ ಮಂತ್ರಿಗಳು ಸದನದಲ್ಲಿದ್ದಾರೆಂದು ಹೇಳಿ, ಆ ವಿಷಯವನ್ನೇ ತೆಗೆದುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಯನ್ನು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ತೆಗೆದುಕೊಳ್ಳಿ. ನಾನು ಸಿದ್ಧನಿದ್ದೇನೆ.

**ಸಭಾಪತಿಯವರು:-** ಈಗ ಹೇಗಾಗಿದೆ ಎಂದರೆ, ನಾವು ಮಂತ್ರಿಗಳನ್ನು ನೋಡಿ ನೋಡಿ ಪ್ರಶ್ನೆಯನ್ನು ಕರೆಯಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಯನ್ನು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಪ್ರಶ್ನೋತ್ತರ

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1485**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಜಲ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ **"ಮನೆ ಮನೆಗೆ ಗಂಗೆ"** "Har Ghar Nal Se Jal" ಎನ್ನುವಂತಹ ಒಂದು ಘೋಷಣೆಯಿಂದ ಪಂಚವಾರ್ಷಿಕ ಯೋಜನೆಯಾಗಿ ಪರಿವರ್ತನೆಯಾಗಿದೆ. ಬಹುಶಃ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಯವರಿಗೆ ಇದು ಬಹು ಇಷ್ಟವಾದಂತಹ ಕಾರ್ಯಕ್ರಮ. ಇದರಲ್ಲಿ ಸಾಕಷ್ಟು ಹಣ ಬರುತ್ತದೆ. ಇದು ಕೇಂದ್ರ ಪರಿಷ್ಕೃತ ಯೋಜನೆಯಡಿ 50:50 ಅನುಪಾತದಲ್ಲಿ ಸಾಕಷ್ಟು ಹಣ ಬರುತ್ತಿದೆ. ಇದರಲ್ಲಿ ಪ್ರತಿಯೊಂದು ಗ್ರಾಮಾಂತರ ಕೌಟುಂಬಿಕ ಮನೆಗೆ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಪ್ರತಿದಿನ 55 ಲೀಟರ್ ಕುಡಿಯುವ ನೀರಿನ ಪೂರೈಕೆ FHTC (Functional Household Tap Connection) ಎಂದು ಮಾನ್ಯ ಸಚಿವರು ಏನು ಹೇಳುತ್ತಾರೆ. ಅದರ ಮೂಲಕವೂ ಕುಡಿಯುವ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಸಾಕಷ್ಟು ಕಾರ್ಯಕ್ರಮಗಳು ನಡೆಯುತ್ತಿವೆ. ಮಾನ್ಯ ಮಂತ್ರಿಗಳಲ್ಲಿ ಕೋರುವುದೇನೆಂದರೆ, ತಾವು ಕೊಟ್ಟಂತಹ ಉತ್ತರದಲ್ಲಿ ರಾಜ್ಯದಲ್ಲಿ ಸುಮಾರು 564 ಗ್ರಾಮಗಳಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಇವೆ. ಇವುಗಳಲ್ಲಿ ಎಷ್ಟು functional ಆಗಿವೆ. ಮಾನ್ಯ ಸಚಿವರು ಜಲಸಂಪನ್ಮೂಲ source ಗೆ ಏನು ಲಭ್ಯತೆಯ ಆಧಾರದ ಮೇಲೆ ಮಾಡಿದ್ದಾರೆ. ಇದುವರೆಗೂ ಕೂಡ function ಆಗಿಲ್ಲ. ನಮ್ಮ ಶಿರಾ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ Kallembella ಆಗಿರಬಹುದು ಅಥವಾ Madalur ಕೆರೆಗೆ ನೀರು ಹರಿಸುವಂತಹದ್ದು ಇರಬಹುದು. ಸುಮಾರು 50 ರಿಂದ 60 ಕೋಟಿ ರೂಪಾಯಿ ವೆಚ್ಚದಲ್ಲಿ National Rural Drinking Water Programme ಮಾಡಿದ್ದಾರೆ. ಇವತ್ತಿನವರೆಗೂ ಇದು ಚಾಲನೆ ಆಗಿಲ್ಲ. ಇದು ಒಂದು minimum based ಆಗಿದೆ. ಇದರ ಬಗ್ಗೆ ಸರ್ಕಾರ rejuvenate ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಎರಡನೆಯದಾಗಿ, ರಾಜ್ಯದಲ್ಲಿ 7-8 ಜಿಲ್ಲೆಗಳು grey area ದಲ್ಲಿ ಬರುತ್ತದೆ. ಅದು ಕೂಡ ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಚಿತ್ರಾದುರ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕಲಬುರ್ಗಿ, ಬೀದರ್ ಇಂತಹ ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆ ಇದೆ. ಇಲ್ಲಿ Nitrate-

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

nitrogen, Ammonium-nitrogen, Fluoride content ಜಾಸ್ತಿಯಾಗಿ ಕುಡಿಯುವ ನೀರಿನ ಲಭ್ಯತೆ ಇದ್ದರೂ ಕೂಡ ಕೆಲವಡೆ ಇದು ಮನುಷ್ಯನ ಸ್ವೀಕಾರಕ್ಕೆ ಅನರ್ಹವಾಗಿದೆ. ಈ ದೃಷ್ಟಿಯಲ್ಲಿ ಪಕ್ಕದ ತೆಲಂಗಾಣ ರಾಜ್ಯದಲ್ಲಿ Kaleshwaram Lift Irrigation Project, ಗೋದಾವರಿ ನದಿ ನೀರಿನಲ್ಲಿ ಕಟ್ಟಿರುವುದರಲ್ಲಿ ಸುಮಾರು ಒಂದು ಸಾವಿರ ಅಡಿ ಎತ್ತರದಲ್ಲಿ 7-8 ಹಂತದವರೆಗೂ ಮಾಡಿ ಸುಮಾರು 240 ಟಿ.ಎಂ.ಸಿ., ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದೊಂದು ಯಶಸ್ವಿ ಯೋಜನೆಯಾಗಿದೆ. ಇದು pride of India ಇರಬಹುದು or pride of Telangana ಇರಬಹುದು. ಇದೇ ಮಾದರಿಯಲ್ಲಿ ಮಾನ್ಯ ಸಚಿವರು ಏನಾದರೂ ಮಾಡುತ್ತಾರೆಯೇ, ಏಕೆಂದರೆ, ನಮ್ಮ ಶಿರಾ ತಾಲ್ಲೂಕು ಆಂಧ್ರದ ಗಡಿ ಭಾಗದಲ್ಲಿ ಬರುತ್ತದೆ. ನಮ್ಮ ಗ್ರಾಮಗಳಲ್ಲಿಯೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಆದರೆ, ಪಕ್ಕದ Madakasira ತಾಲ್ಲೂಕಿಗೆ ಆ ಯೋಜನೆಯಿಂದ ನೀರನ್ನು ಉಣಿಸುತ್ತಿದ್ದಾರೆ. ಆದ್ದರಿಂದ ಈ ಕಾರ್ಯಕ್ರಮ ಏನು ಎಂಬುದನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಜಲ ಜೀವನ್ ಮಿಷನ್ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಕೇಂದ್ರ ಸರ್ಕಾರದ ಮಾನ್ಯ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾದ ನಂತರ ಜಲ ಜೀವನ್ ಮಿಷನ್ ಯೋಜನೆಯನ್ನು ಜಾರಿಗೆ ತರಬೇಕೆಂದು ಉತ್ಸುಕತೆಯನ್ನು ತೋರಿಸಿರುವಂತಹ ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ನಾವು 2023ರ ಕೊನೆಗೆ ರಾಜ್ಯದ ಎಲ್ಲಾ ಹಳ್ಳಿಗಳ ಎಲ್ಲಾ ಮನೆಗಳಿಗೂ ಕೂಡ ಕುಡಿಯುವ ನೀರಿನ ನಳ ವ್ಯವಸ್ಥೆ ಮಾಡಬೇಕೆನ್ನುವಂತಹ ತೀರ್ಮಾನ ಮಾಡಿ, ಅದಕ್ಕೆ ತಕ್ಕಂತೆ ಯೋಜನೆಗಳನ್ನು ಪ್ರಾರಂಭ ಮಾಡಿಕೊಂಡಿದ್ದೇವೆ. 2021-22ನೇ ಸಾಲಿನಲ್ಲಿ 25.17 ಲಕ್ಷ ರೂಪಾಯಿಗಳು ಮತ್ತು 2022-23ನೇ ಸಾಲಿನಲ್ಲಿ 27.14 ಲಕ್ಷ ರೂಪಾಯಿಗಳು, ಇನ್ನು ಉಳಿದಂತೆ 17.45 ಲಕ್ಷ ರೂಪಾಯಿಗಳನ್ನು 2023-24ನೇ ವರ್ಷದ ಕೊನೆಯಲ್ಲಿ ಮುಗಿಸಬೇಕೆಂದು ತೀರ್ಮಾನ ತೆಗೆದುಕೊಂಡು ಆ ದಿಕ್ಕಿನಲ್ಲಿ ಎಲ್ಲೆಲ್ಲಿ ನೀರಿನ ಲಭ್ಯತೆ ಇದೆ, ಅದನ್ನು ನೋಡಿಕೊಂಡು ಮಾಡಬೇಕು. ಇದು ಬಹಳ ಮುಖ್ಯ. ನೀರಿನ ಲಭ್ಯತೆ ಇಲ್ಲದೇ ಇರುವ ಕಡೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಏಕೆ ಚಾಲನೆಯಾಗಿಲ್ಲ ಎನ್ನುವ ಪ್ರಶ್ನೆಯನ್ನು ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಕೇಳಿದರು. ಇದರ ಬಗ್ಗೆ ನಂತರ ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಇದು ಒಂದು ರೀತಿಯ ಸವಾಲಾಗಿದೆ. ಹಾಗಾಗಿ ಕೇಂದ್ರ ಸರ್ಕಾರ ಶೇಕಡ 50 ರಷ್ಟು ಹಣ ಬಿಡುಗಡೆ ಮಾಡುತ್ತದೆ. ರಾಜ್ಯ ಸರ್ಕಾರ ಶೇಕಡ 50 ರಷ್ಟು ಹಣವನ್ನು ಹಾಕಿಕೊಂಡು ಇಡೀ ರಾಜ್ಯದ ಎಲ್ಲಾ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಗಳಿಗೂ ಕೂಡ ಕುಡಿಯುವ ನೀರನ್ನು ಕೊಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಈ ಮೂರು ವರ್ಷಗಳಲ್ಲಿ ಇಡೀ ರಾಜ್ಯದ ಪ್ರತಿ ಮನೆಗೂ ಕೂಡ ನಳ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆನ್ನುವ ಯೋಜನೆಯನ್ನು ಮಾಡಿಕೊಂಡಿದ್ದೇವೆ. ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಬಹಳ ವೇಗವಾಗಿ ಈ ಕೆಲಸವಾಗುತ್ತಿದೆ. ಈಗ ನಾನು ಸರ್ವೆ ಮಾಡಿಸಿ ವರದಿ ತರಿಸಿರುವ ಪ್ರಕಾರ ಪ್ರತಿದಿನ ಕನಿಷ್ಠ 6 ರಿಂದ 8 ಸಾವಿರ ಮನೆಗಳಿಗೆ ನಳ ಮುಖಾಂತರ ಕುಡಿಯುವ ನೀರನ್ನು ಕೊಡುತ್ತಿದ್ದೇವೆ. ಒಟ್ಟಾರೆ ನಾನು ಹೇಳಿರುವ ಪ್ರಕಾರ ಮೂರು ವರ್ಷಗಳಲ್ಲಿ ಸಂಪೂರ್ಣವಾಗಿ ಮುಗಿಸುವಂತಹ ಪ್ರಯತ್ನವನ್ನು ನಡೆಸುತ್ತಿದ್ದೇವೆ ಮತ್ತು ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಮನೆಗಳಿಗೆ ಕುಡಿಯುವ ನೀರನ್ನು ಕೊಡುತ್ತೇವೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಬಹಳ ಮುಖ್ಯವಾಗಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಈ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಕೂಡ ಎಲ್ಲೆಲ್ಲಿ ನೀರಿನ ಲಭ್ಯತೆ ಇದೆ, ಅಲ್ಲಿ ಮಾತ್ರ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸುವುದಕ್ಕೆ ಸಾಧ್ಯ. ಆದರೆ, ಹಿಂದೆ ಏನಾಗಿದೆ ಎಂದರೆ, ಎಲ್ಲೆಲ್ಲಿ ನೀರು ಇದೆ, ನೀರು ಇಲ್ಲ. ಒಂದರಿಂದ ಎರಡು ತಿಂಗಳವರೆಗೆ ನೀರು ಸಿಗುವಂತಹ ಜಾಗದಲ್ಲೂ ಕೂಡ ಈ ಯೋಜನೆಗಳನ್ನು ಮಂಜೂರು ಮಾಡಿ ಕೆಲಸವನ್ನು ಮುಗಿಸಿಬಿಟ್ಟಿದ್ದಾರೆ. ಈಗ ಅಲ್ಲಿ ನೀರು ಇಲ್ಲ. ನೀರು ಇಲ್ಲದೆ ಇರುವುದಕ್ಕೋಸ್ಕರ ಅಷ್ಟು ಹಣ ಕೂಡ ವ್ಯರ್ಥವಾಗುತ್ತಿದೆ. ಅದಕ್ಕೋಸ್ಕರ ಎಲ್ಲೆಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ವ್ಯರ್ಥವಾಗಿದೆ. ಎಲ್ಲಿ ನೀರು ಸಿಗಬಹುದು. ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಏನು ಮಾಡಿದ್ದಾರೆ ಎಂದರೆ, ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆ. ಒಂದು ಕಂಪನಿಯ ಪೈಪ್ ತೋರಿಸಿ Estimate ಮಾಡಿ, ಪೈಪ್ ಹಾಕುವಾಗ ಕಳಪೆ ಪೈಪ್ ಹಾಕಿದ್ದಾರೆ. ಇದರ ಮೇಲೆ ಲಾರಿ ಹೋದರೆ ಒಂದೇ ದಿನಕ್ಕೆ ಆ ಪೈಪ್‌ಗಳು ಔಟ್ ಆಗುತ್ತದೆ. ಅದರ ಬಗ್ಗೆ ಕೂಡ ವಿಚಾರಣೆ ಮಾಡಿಸುತ್ತಿದ್ದೇವೆ. ವಿಚಾರಣೆ ಮಾಡಿಸಿ, ಒಟ್ಟಾರೆಯಾಗಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಎಲ್ಲೆಲ್ಲಿ ಪೂರ್ಣಗೊಳಿಸಬೇಕೆಂದು ಯೋಚನೆ ಮಾಡಿ, ಅದನ್ನು ಕೂಡ ಪೂರ್ಣಗೊಳಿಸುವಂತಹ ದಿಕ್ಕಿನಲ್ಲಿ ಗಮನಹರಿಸುತ್ತಿದ್ದೇವೆ. ವಿಶೇಷವಾಗಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಎತ್ತಿನ ಹೊಳೆ ನೀರು ಬಂದ ಕೂಡಲೇ ಅಲ್ಲಿ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ನಾವು ಯೋಚನೆ ಮಾಡಿದ್ದೇವೆ. Water source ಇಲ್ಲದೇ ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. Kallembella ಹಾಗೂ ಇತರೆ ಯೋಜನೆಗಳನ್ನು ಕಾಲುವೆಗಳ ಸುಸ್ಥಿರತೆ ಇಲ್ಲದೆ ಇದ್ದುದರಿಂದ, ಕಾರ್ಯ ನಿರ್ವಹಿಸುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯಾಗಿದೆ. ಇಂತಹ ಯೋಜನೆಗಳಿಗೆ ಸುಸ್ಥಿರ ಮೂಲಗಳನ್ನು ಪಡೆಯಲು ಮತ್ತು ಯೋಜನೆ ಸರಿಪಡಿಸಲು ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ನಾನು ಇಡೀ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಜಲ ಜೀವನ್ ಮಿಷನ್‌ನಲ್ಲಿ ಅಗತ್ಯತೆಗನುಗುಣವಾಗಿ ಸುಸ್ಥಿರ ಜಲ ಮೂಲದ ಲಭ್ಯತೆ, ಅನುದಾನದ ಲಭ್ಯತೆ, ತಾಂತ್ರಿಕ ಮತ್ತು ಆರ್ಥಿಕ ಕಾರ್ಯದ ಸಾಧ್ಯತೆ, ಅನುಷ್ಠಾನದ ಸಾಮರ್ಥ್ಯ ಈ ದಿಕ್ಕಿನಲ್ಲಿ ಯೋಚನೆ ಮಾಡಿ, ಹಣದ ಕೊರತೆ ರಾಜ್ಯ ಸರ್ಕಾರದ್ದು ಇರಬಹುದು, ಕೇಂದ್ರ ಸರ್ಕಾರದ್ದು ಇರಬಹುದು. ಬಿಲ್‌ಕುಲ್ ಇಲ್ಲ. ನಾವು ಬಹಳ ವೇಗವಾಗಿ ಜಲ ಜೀವನ್ ಮಿಷನ್ ಅನ್ನು ಮನೆ ಮನೆಗೆ ಗಂಗೆ, ಪವಿತ್ರವಾದ ಗಂಗೆಯನ್ನು ಪ್ರತಿ ಮನೆಗೂ ತಲುಪಿಸಬೇಕೆಂಬ ಅಪೇಕ್ಷೆ ರಾಜ್ಯ ಸರ್ಕಾರದ್ದಾಗಿದೆ. ಈ ದಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಡೀ ರಾತ್ರಿ ನಾವು ಹೊಸ ರಾಷ್ಟ್ರೀಯ ಯೋಜನೆಯನ್ನು ಹೇಗೆ ಜಾರಿಗೆ ತರಬೇಕೆನ್ನುವ ಬಗ್ಗೆ ಮತ್ತು ಎಷ್ಟು ಕ್ರಮಬದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ಇರಬೇಕೆನ್ನುವ ಬಗ್ಗೆ ಚರ್ಚೆ ಮಾಡಿದ್ದೇವೆ. ಪ್ರಮುಖವಾಗಿ ಶಾಲಾ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಯಾರು ಕೂಡ ಚರ್ಚೆ ಮಾಡಲಿಲ್ಲ. ಮೂಲಭೂತ ಸೌಕರ್ಯಗಳಾದ ಬಾಲವಾಡಿ, ಅಂಗನವಾಡಿ, ಬಾಲಮಂದಿರ ಆಗಿರಬಹುದು. ಇಂತಹವುಗಳನ್ನು activate ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ ಆಗಬೇಕು. ಜಲ ಜೀವನ್ ಮಿಷನ್‌ನಲ್ಲಿಯೂ ಕೂಡ ಅಂಗನವಾಡಿ ಕೇಂದ್ರಗಳಿಗೆ, ಆರೋಗ್ಯ ಕೇಂದ್ರಗಳಿಗೆ ಪಂಚಾಯಿತಿ ಕಟ್ಟಡಗಳಿಗೆ ನೀರು ಕೊಡಬೇಕಾದಂತಹ ವ್ಯವಸ್ಥೆ ಇದೆ. ಇದಕ್ಕೂ ಸಹ ಪ್ರಾಧ್ಯಾನತೆಯ ಮೇಲೆ ಕೊಟ್ಟು, ಇದರೊಟ್ಟಿಗೆ ಸೇರಿಸಬೇಕೆಂದು ಹೇಳುತ್ತೇನೆ. ಅದರಲ್ಲೂ ಕೂಡ ಬಾಲ ವಿಕಾಸ ಅಂಗನವಾಡಿ ಕೇಂದ್ರಗಳಿವೆ, ಅವುಗಳನ್ನು ಉತ್ತೇಜನ ಮಾಡಬೇಕು. ಅವುಗಳನ್ನು activate ಮಾಡಬೇಕು. ಸುಮಾರು 56 ರಿಂದ 60 ಸಾವಿರ ಅಂಗನವಾಡಿ ಕೇಂದ್ರಗಳಿವೆ. ಅದರಲ್ಲಿ ಸುಮಾರು ಕಡೆ ಬಚ್ಚಲು ಮನೆ ಇದ್ದರೆ ನೀರಿನ ವ್ಯವಸ್ಥೆ ಇಲ್ಲ. ನೀರಿನ ವ್ಯವಸ್ಥೆ ಇದ್ದರೆ ಬಚ್ಚಲು ಮನೆ ಇಲ್ಲ. ಆ ರೀತಿಯ ವ್ಯವಸ್ಥೆ ಇದೆ. ಮಾನ್ಯ ಸಚಿವರು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಕೋರುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯರಾದ ಕೆ.ಎ.ತಿಪ್ಪೇಸ್ವಾಮಿಯವರು ಹೇಳುತ್ತಿರುವುದು ಸರಿ ಇದೆ. ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಮತ್ತು ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಗೆ ಮೊದಲನೆ ಆದ್ಯತೆ ಕೊಟ್ಟಿದ್ದೇವೆ. ಈಗಾಗಲೇ ಬಹುತೇಕ ಕಡೆ ಕೆಲಸ ಮಾಡಿ ಮುಗಿಸಿದ್ದೇವೆ.

(ಮುಂದು)

**(1005) 10:30 ಎಸ್‌ಪಿಆರ್-ವಿಕೆ 24/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ಇನ್ನು ಎಲ್ಲೆಲ್ಲಿ ಕೆಲಸಗಳು ಬಾಕಿ ಉಳಿದಿವೆಯೋ ಅಂದರೆ ಅಂಗನವಾಡಿ ಮತ್ತು ಶಾಲೆಗಳಿಗೆ ಖಂಡಿತವಾಗಿಯೂ ಸಹ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಮತ್ತು ಶೌಚಾಲಯಗಳಿಗೆ ನಮ್ಮ ಸರ್ಕಾರವು ಮೊದಲನೆ ಆದ್ಯತೆಯನ್ನು ನೀಡಿ, ಅವುಗಳನ್ನು ಪೂರ್ಣಗೊಳಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1553**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಸುಮಾರು 25 ಪುಟಗಳಷ್ಟು ಉತ್ತರವನ್ನು ಒದಗಿಸಿದೆ. ಇಲ್ಲಿ 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ' ಎನ್ನುವ ರೀತಿಯ ಪರಿಸ್ಥಿತಿಯಾಗಿದೆ. ನಾನು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಕೇವಲ ರಸ್ತೆ, ಮೋರಿ, ಸೇತುವೆ ಇವುಗಳ ಬಗ್ಗೆ ವಿಸ್ತಾರವಾದ ಉತ್ತರವನ್ನು ಒದಗಿಸಿದ್ದಾರೆ. ಇದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ, ಆಸ್ತಿ-ಪಾಸ್ತಿ ನಷ್ಟ ಅಂದರೆ ಜೀವ, ಮನೆಗಳನ್ನು ಏನು ಕಳೆದುಕೊಂಡಿದ್ದಾರೆ, ಇದರ ಬಗ್ಗೆ ಹೆಚ್ಚು ವಿವರಣೆಯನ್ನು ನೀಡಿರುವುದಿಲ್ಲ. ನಮ್ಮ ರಾಜ್ಯದಲ್ಲಿ ಅದರಲ್ಲೂ ಕಳೆದೆರಡು ವರ್ಷಗಳಲ್ಲಿ ಪ್ರವಾಹ, ಭೂ ಕುಸಿತ ಮತ್ತು ಮಳೆಗಾಲದಲ್ಲಾಗುವ ಇನ್ನಿತರೆ ಅನಾಹುತಗಳು ಮತ್ತು ಕೋವಿಡ್-19ರಂತಹ ಸಾಂಕ್ರಾಮಿಕ ಕಾಯಿಲೆಯು ನಿರಂತರವಾಗಿ ಘಟಿಸುತ್ತಲೇ ಇವೆ. ಇದಕ್ಕೆ ಸರ್ಕಾರವು ತಾತ್ಕಾಲಿಕವಾದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆಯೇ ವಿನಾ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿದುಕೊಳ್ಳಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಪ್ರಾಣ ಮತ್ತು ಮನೆ ಹಾನಿಯ ಸಂದರ್ಭದಲ್ಲಿ ರಾಷ್ಟ್ರೀಯ ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪಡೆಯವರು ಅಷ್ಟೊಂದು ಪರಿಹಾರವನ್ನು ನೀಡುವುದಿಲ್ಲ. ಏಕೆಂದರೆ, ಅವರಿಗೆ ಅವರದ್ದೇ ಆದ ಮಾರ್ಗಸೂಚಿಗಳಿವೆ; ಅದರನ್ವಯ ಮಾತ್ರವೇ ಪರಿಹಾರ ಬಿಡುಗಡೆಯಾಗುತ್ತದೆ. ಒಂದು ವೇಳೆ ಪ್ರಾಣ ಹಾನಿಯಾಗಿದ್ದರೆ, ಎರಡೂ ವಿಪತ್ತು ನಿರ್ವಹಣಾ ಪಡೆಗಳನ್ನೂ ಮೀರಿ ರಾಜ್ಯ ಸರ್ಕಾರವು ಪ್ರತ್ಯೇಕವಾದ ಪರಿಹಾರ ಘೋಷಿಸುತ್ತಿತ್ತು. ಆದರೆ ಇತ್ತೀಚೆಗೆ ಇದು ಎಲ್ಲಿಯೂ ಸಹ ಕಾಣಸಿಗುತ್ತಿಲ್ಲ. ರಾಜ್ಯ ಸರ್ಕಾರವು ರಾಷ್ಟ್ರೀಯ ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ನೆಪ ಮಾಡಿಕೊಂಡು ಪರಿಹಾರ ಮೊತ್ತದ ಬಿಡುಗಡೆಯು ನಿಧಾನವಾಗುತ್ತಿದೆ. ಪ್ರಾಣ ಮತ್ತು ಮನೆ ಹಾನಿಯಾದವರಿಗೆ ರಾಜ್ಯ ಸರ್ಕಾರವು ಎಷ್ಟು ಪರಿಹಾರವನ್ನು ನೀಡಿದೆ ಎನ್ನುವ ಮಾಹಿತಿಯನ್ನು ನೀಡಿದರೆ, ಬಹಳ ಅನುಕೂಲವಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರು ಗಾದೆಯೊಂದನ್ನು ಪ್ರಸ್ತಾಪಿಸಿದ್ದು, ಅದನ್ನು ನಾನು ಪುನರಾವರ್ತಿಸುವುದಿಲ್ಲ. ಏಕೆಂದರೆ, ನಮ್ಮ ಆಡಳಿತದಲ್ಲಿ ಎಮ್ಮೆಗೆ ಜ್ವರ ಬಂದರೆ ಎಮ್ಮೆಗೆ ಔಷಧಿ ಮತ್ತು ಎತ್ತಿಗೆ ಜ್ವರ ಬಂದರೆ ಎತ್ತಿಗೆ ಔಷಧಿ ನೀಡಲಾಗುತ್ತದೆ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಣ ಮತ್ತು ಮನೆ ಹಾನಿಯಾದರೆ, ಅದಕ್ಕೆ ಯಾವ ರೀತಿಯ ಪರಿಹಾರ ನೀಡಲಾಗುತ್ತದೆ ಎನ್ನುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ.

**ಸಭಾಪತಿಯವರು:-** ಒಂದು ವೇಳೆ ಪ್ರಶ್ನೆಗೆ ಜ್ವರ ಬಂದರೆ ಏನು ಮಾಡುವುದು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಯಾವ ಪ್ರಶ್ನೆಗೆ ಜ್ವರ ಬಂದಿದೆಯೋ ಆಯಾ ಇಲಾಖೆಯವರೇ ಉತ್ತರಿಸುವ ಮೂಲಕ ಔಷಧಿ ನೀಡುತ್ತಾರೆ. ಪ್ರಶ್ನೆಗೆ ಸಂಬಂಧಿತ ಇಲಾಖೆಯವರು ಉತ್ತರಿಸಬೇಕು. ಮನೆ ಮತ್ತು ಜೀವ ಹಾನಿ ಇವೆರಡೂ ನನ್ನ ಇಲಾಖೆಯ ವ್ಯಾಪ್ತಿಗೊಳಪಡುವುದಿಲ್ಲ. ಕಂದಾಯ ಇಲಾಖೆಯವರು ಇದಕ್ಕೆ ಉತ್ತರಿಸುತ್ತಾರೆ. ಸದಸ್ಯರು ಕೇಳಿರುವ ಪ್ರಶ್ನೆಗೆ, ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಜಾಸ್ತಿ ಉತ್ತರವನ್ನು ನೀಡಿದ್ದೇನೆ, ಏಕೆಂದರೆ, ಅವರು ಬುದ್ಧಿವಂತರಾಗಿದ್ದು, ರಾಜ್ಯಸಭೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ; ಅವರಿಗೆ ರಾಜ್ಯದ ಬಗ್ಗೆ ಕಳಕಳಿ ಇದೆ . . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಲೆನಾಡಿನವರು ಬಹಳ ಬುದ್ಧಿವಂತರಿರುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ನಾವೇ ಜಾಸ್ತಿ ಬುದ್ಧಿವಂತರೆಂದು ನಾನು ಭಾವಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮೀನು ತಿನ್ನುವವರು ಹೆಚ್ಚು ಬುದ್ಧಿವಂತರಾಗಿರುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮೀನು ತಿನ್ನುವವರು ಜಾಸ್ತಿ ಬುದ್ಧಿವಂತರೆಂದು ಸದಸ್ಯರು ಹೇಳುತ್ತಿದ್ದು, ಈ ಮಾತನ್ನೂ ಸಹ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಹರಿಪ್ರಸಾದ್‌ರವರು ಏನು ತಿನ್ನುತ್ತಾರೆಂದು ಸದಸ್ಯರಿಗೆ ತಿಳಿದಿದೆ. ನಮ್ಮ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನ; ಎಷ್ಟೆಷ್ಟು ನಷ್ಟವುಂಟಾಗಿದೆ ; ಎಷ್ಟು ಪರಿಹಾರ ನೀಡಲಾಗಿದೆ ಎನ್ನುವ ಅಂಶಗಳ ಬಗ್ಗೆ ಸ್ಪಷ್ಟತೆಯನ್ನು ನೀಡಲಾಗಿದೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಯಾವ ಮಾಹಿತಿಯನ್ನು ಕೇಳಿದರೂ ಸಹ ನಾನು ಪುನಃ ಕೊಡುತ್ತೇನೆ. ಪ್ರಾಣ ಮತ್ತು ಮನೆ ಹಾನಿಯ ಬಗ್ಗೆ ಸದಸ್ಯರಿಗಿರುವ ಕಳಕಳಿಯು ನನಗೆ ಅರ್ಥವಾಗಿದೆ. ಸದಸ್ಯರು ಬಯಸಿದಲ್ಲಿ ಕಂದಾಯ ಇಲಾಖೆಯ ಮುಖಾಂತರ ಉತ್ತರವನ್ನು ತರಿಸಿಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಚಿವರಿಗೆ ಧನ್ಯವಾದಗಳು. ಎಮ್ಮೆಗೆ ಜ್ವರ ಬಂದರೆ, ಎಮ್ಮೆಗೆ ಔಷಧಿ ನೀಡುವುದಾಗಿ ಸಚಿವರು ತಿಳಿಸಿದರು. ಎಲ್ಲರಿಗೂ ತಿಳಿದಿರುವಂತೆ, ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಹಾನಿಗಳುಂಟಾಗುತ್ತವೆ. ಪರಿಹಾರ ಶಿಬಿರ ಮತ್ತು ಗಂಜೀ ಕೇಂದ್ರಗಳ ಬಗ್ಗೆ ಈಗಾಗಲೇ ಮಾತನಾಡಿದ್ದು, ಇಲ್ಲಿ ನಡೆಯುವ ಭ್ರಷ್ಟಾಚಾರ ಇನ್ನೆಲ್ಲಿಯೂ ಸಹ ನಡೆಯುವುದಿಲ್ಲ. ಆ ಪ್ರದೇಶದಲ್ಲಿ ಪ್ರವಾಹ, ಬಿರುಗಾಳಿ, ಭೂಕುಸಿತ ಮತ್ತು ಚಂಡ ಮಾರುತಗಳುಂಟಾಗುತ್ತವೆ ಎಂದು ಮೊದಲೇ ತಿಳಿದಿರುತ್ತದೆ. ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದ ಕೊಡಗು ಜಿಲ್ಲೆಯು ಬಹಳವಾಗಿ ಬಾಧಿತವಾಗುತ್ತದೆ. ಬಹಳ ಸುಂದರವಾದ ಜಿಲ್ಲೆಯನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಒಂದು ಬಾರಿ ಭೂಕುಸಿತವಾದರೆ, ನೂರಾರು ಮನೆಗಳು ಹಾನಿಗೊಳ್ಳುತ್ತವೆ. ಸಚಿವರು ಈ ವಿಷಯವು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆಂದು ಹೇಳಿದ್ದು, ಅದನ್ನು ನಾನೊಪ್ಪಿಕೊಳ್ಳುತ್ತೇನೆ. ಮಳೆ ಬಂದಾಗ ಭೂಕುಸಿತವುಂಟಾದಾಗ ಮನೆಗಳಿಗೆ ಹಾನಿಯುಂಟಾಗುತ್ತದೆ. ತಾತ್ಕಾಲಿಕವಾಗಿ ಪರಿಹಾರ ಶಿಬಿರಗಳನ್ನು ಮಾಡುವುದರ ಬದಲಾಗಿ ಶಾಶ್ವತವಾದ ಕೇಂದ್ರಗಳನ್ನು ನಿರ್ಮಿಸಬೇಕು. ಕೆಲವು ರಾಜ್ಯಗಳಲ್ಲಿ ರೆಡ್ ಕ್ರಾಸ್ ಸಂಸ್ಥೆಯವರು ಶಾಶ್ವತವಾದ ಕೇಂದ್ರಗಳನ್ನು ನಿರ್ಮಿಸಿರುತ್ತಾರೆ. ಅವುಗಳು ಲೋಕೋಪಯೋಗಿ ಇಲಾಖೆ ಅಥವಾ ಭೂ ಸೇನಾ ನಿಗಮದವರು ನಿರ್ಮಿಸಿದ ಕೇಂದ್ರಗಳಂತಿರದೇ, ಶಾಶ್ವತವಾದ ಕಟ್ಟಡವನ್ನು ಹೊಂದಿರುತ್ತವೆ. ಇದನ್ನು ನಾವು ಹಲವಾರು ಕಡೆಗಳಲ್ಲಿ ನೋಡಿದ್ದು, ಅವುಗಳು 25-50 ವರ್ಷಗಳವರೆಗೆ ಗಟ್ಟಿಯಾಗಿದ್ದು, ಬಹುಕಾಲ ಬಾಳಿಕೆ ಬರುತ್ತವೆ. ಈ ರೀತಿಯ ಕಾರ್ಯಕ್ರಮಗಳು ಸರ್ಕಾರದ ಯೋಚನೆಯಲ್ಲಿವೆಯೇ? ಏಕೆಂದರೆ, ಪ್ರತಿವರ್ಷವೂ ಈ ರೀತಿಯ ಪ್ರಕೃತಿ ವಿಕೋಪಗಳುಂಟಾಗುತ್ತವೆ. ಜಾಗತಿಕ ತಾಪಮಾನದಲ್ಲಿನ ಏರಿಕೆಯು ಅಥವಾ ಇನ್ನಾವುದೇ ಅಂಶಗಳು ಇದಕ್ಕೆ ಕಾರಣವಾಗಿರಬಹುದು. ಹೀಗಾಗಿ ಶಾಶ್ವತವಾದ ಪರಿಹಾರ ಶಿಬಿರಗಳನ್ನು ನಿರ್ಮಿಸುವ ಯೋಜನೆಗಳು ಸರ್ಕಾರದಲ್ಲಿವೆಯೇ ಎಂದು ನಾನು ಕೇಳಲಿಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳುತ್ತಿರುವ ಪ್ರಶ್ನೆಯು ನನ್ನ ಇಲಾಖಾ ವ್ಯಾಪ್ತಿಗೊಳಪಡುವುದಿಲ್ಲವೆಂದು ನಾನು ಪುನರುಚ್ಚರಿಸುತ್ತೇನೆ. ಆದರೂ ಸಹ ನಾನು ಇದರ ಬಗ್ಗೆ ಇನ್ನೂ ಹೆಚ್ಚಿನ ಅಂಶಗಳನ್ನು ಹೇಳಬಯಸುತ್ತೇನೆ. ನಮ್ಮ ಇಲಾಖೆಯ ಪರಿಶೀಲನಾ ಸಭೆ ಮತ್ತು ಜಿಲ್ಲಾ ಪರಿಷತ್ತಿನ ಕಟ್ಟಡದ ಉದ್ಘಾಟನಾ

ಕಾರ್ಯಕ್ರಮದ ನಿಮಿತ್ತ ನಾನು ಕೊಡಗು ಜಿಲ್ಲೆಗೆ ಹೋಗಿದ್ದೆನು. ಆ ಸಂದರ್ಭದಲ್ಲಿ ಶ್ರೀ ವಿ.ಸೋಮಣ್ಣರವರು ಸದರಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಆ ಸಭೆ ನಡೆಯುತ್ತಿರುವಾಗಲೇ ಭೂ ಕುಸಿತವುಂಟಾಗಿ, ಅಲ್ಲಿನ ಗುಡ್ಡವು ಕುಸಿದು, ಮನೆಗಳಲ್ಲಿ ಜನರು ಸಿಕ್ಕಿಹಾಕಿಕೊಂಡಿದ್ದರು. ಆ ಸಂದರ್ಭದಲ್ಲಿ ಸರ್ಕಾರದಿಂದ ಮಾಡಬೇಕಾದ ಅಗತ್ಯ ಜರೂರು ಕ್ರಮಗಳ ಬಗ್ಗೆ ಗಮನಹರಿಸಿ, ತಕ್ಷಣದಲ್ಲಿಯೇ ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ಆ ಜನರಿಗೆ ಮನೆಗಳನ್ನು ಕಟ್ಟಿಕೊಡುವ ಆಶ್ವಾಸನೆಗಳನ್ನು ನೀಡಲಾಯಿತು. ಅದರಂತೆ ಅಲ್ಲಿ ಕೆಲವು ಮನೆಗಳನ್ನೂ ಸಹ ನಿರ್ಮಿಸುವ ವ್ಯವಸ್ಥೆಗಳಾಗಿವೆ. ಪ್ರತಿವರ್ಷವೂ ಕೊಡಗಿನಲ್ಲಿ ಪ್ರಕೃತಿ ವಿಕೋಪಗಳುಂಟಾಗುತ್ತಿರುತ್ತವೆ. ಅಲ್ಲಿ ಅವಶ್ಯವಿರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರದ ವಸತಿ ಮತ್ತು ಕಂದಾಯ ಇಲಾಖೆಗಳಿಂದ ಈ ದಿಕ್ಕಿನಲ್ಲಿ ಮಾಡಿರುವ ಪ್ರಯತ್ನಗಳು ಹಾಗೂ ಮುಂದೆ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳೊಂದಿಗೆ ಮಾತನಾಡಿ, ಹಿರಿಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1488**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಒದಗಿಸಿರುವ ಉತ್ತರದಿಂದ ಸಮಾಧಾನವಾಗಿಲ್ಲ. ಬೀದರ್ ಜಿಲ್ಲೆಯು ಅತೀ ಹಿಂದುಳಿದ ಜಿಲ್ಲೆಯಾಗಿದೆ. ರಾಷ್ಟ್ರೀಯ ವಿಕಾಸ ಯೋಜನೆಯನ್ವಯ ದೇಶದಲ್ಲಿ ಶೇಕಡಾ 60ರಷ್ಟು ಜನರು ಕೃಷಿ ಅವಲಂಬಿತರಾಗಿದ್ದರೆ, ನಮ್ಮ ಜಿಲ್ಲೆಯಲ್ಲಿ ಇದು ಶೇಕಡಾ 90 ರಷ್ಟಿದೆ. ನಮ್ಮಲ್ಲಿ ಯಾವುದೇ ನೀರಾವರಿ ಯೋಜನೆಗಳಿಲ್ಲ. ನಮ್ಮ ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿತಗೊಂಡು, ಸ್ನಾತಕೋತ್ತರ ಪದವೀಧರರು ಅಲ್ಲಿಗೆ ಬಂದರೆ ಕೃಷಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ನಮ್ಮ ಜಿಲ್ಲೆಯಲ್ಲಿ ತೋಟಗಾರಿಕೆ ಮಹಾವಿದ್ಯಾಲಯವು ಸ್ಥಾಪಿತಗೊಂಡ ನಂತರ 50 ಹೆಕ್ಟೇರ್‌ನಷ್ಟಿದ್ದ ತೋಟಗಾರಿಕೆಯು 300 ಹೆಕ್ಟೇರ್‌ಗಳಿಗೆ ಏರಿಕೆಯಾಗಿದೆ. ಹೀಗಾಗಿ ಕೃಷಿ ಮಹಾವಿದ್ಯಾಲಯವನ್ನು ನಮ್ಮ ಜಿಲ್ಲೆಯಲ್ಲಿ ಪ್ರಾರಂಭಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೃಷಿ ಡಿಪ್ಲೋಮಾ ಕಾಲೇಜು ಈಗಾಗಲೇ ಇದೆ. ಹೀಗಾಗಿ ಇದನ್ನು ಉನ್ನತೀಕರಿಸಿ, ಅದಕ್ಕೆ ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ, ಸ್ಥಳ, ನೀರಿನ ವ್ಯವಸ್ಥೆ ಇತ್ಯಾದಿಗಳೆಲ್ಲವೂ ಸಹ ಈಗಾಗಲೇ ಲಭ್ಯವಿದೆ. ಹೀಗಾಗಿ ಹಾಲಿ ಇರುವ ಕೃಷಿ ಡಿಪ್ಲೋಮಾ ಪದವಿ ಪೂರ್ವ ಮಹಾವಿದ್ಯಾಲಯವನ್ನು ಉನ್ನತೀಕರಿಸಿ, ಕೃಷಿ ಮಹಾವಿದ್ಯಾಲಯವನ್ನಾಗಿ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷಿ ಪ್ರಧಾನವಾಗಿರುವ ಬೀದರ್ ಜಿಲ್ಲೆಯು ಶೈಕ್ಷಣಿಕವಾಗಿ ಹಿಂದುಳಿದಿದೆ ಎಂದು ಸದಸ್ಯರು ಹೇಳಿದ್ದಾರೆ. ಬೀದರ್ ಜಿಲ್ಲೆಯು ಕೃಷಿ ಪ್ರಧಾನವಾಗಿದೆ ಎನ್ನುವುದರಲ್ಲಿ ಯಾವುದೇ ಆಕ್ಷೇಪಣೆಗಳಿಲ್ಲ. ಆದರೆ, ಬೀದರ್ ಜಿಲ್ಲೆಯು ಶೈಕ್ಷಣಿಕವಾಗಿಯೂ ಸಹ ಮುಂದುವರೆದಿದೆ. ಇದನ್ನು ಅಂಕಿ ಅಂಶಗಳನ್ವಯ ಹೇಳುವುದಾದರೆ, ಶೇಕಡಾ 68ರಷ್ಟು ವಿದ್ಯಾರ್ಥಿಗಳು ಅಲ್ಲಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಸದಸ್ಯರು ಪ್ರಸ್ತಾಪಿಸುತ್ತಿದ್ದಾರೆ. ಇದಕ್ಕೆ ಕನಿಷ್ಠವಾಗಿ 75 ಎಕರೆ ಭೂಮಿಯು ಅವಶ್ಯಕವಾಗಿದ್ದು, ಹಾಲಿ ಇರುವ ಕಾಲೇಜು ಪ್ರದೇಶದಲ್ಲಿ ಇಷ್ಟು ಸ್ಥಳವು ಲಭ್ಯವಿಲ್ಲ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ 175 ಎಕರೆಗಳಷ್ಟು ಜಮೀನು ಲಭ್ಯವಿದೆ ಎಂದು ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಪ್ರಭು ಬಿ.ಚವ್ಹಾಣ್‌ರವರು ಪತ್ರ ಬರೆದಿದ್ದರು. ಈ ಬಗ್ಗೆ ಪರಿಶೀಲಿಸಲಾಗಿದೆ ಹಾಗೂ ರಾಯಚೂರು ವಿಶ್ವವಿದ್ಯಾನಿಲಯದ ಕುಲಪತಿಗಳು ಈ ಕುರಿತು ಪ್ರಸ್ತಾವನೆಯನ್ನೂ ಸಹ ಸಲ್ಲಿಸಿದ್ದಾರೆ. ಡಾ||ಎಸ್.ಬಿಸ್ಲಯ್ಯ ಸಮಿತಿಯ ವರದಿಯಲ್ಲಿ ಒಂದು ಜಿಲ್ಲೆಗೆ ಕನಿಷ್ಠ ಒಂದು ತೋಟಗಾರಿಕೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಶು ವೈದ್ಯಕೀಯ ಅಥವಾ ಇನ್ನಾವುದೇ ಒಂದು ಕಾಲೇಜು ಇರಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ಅಂಶವನ್ನು ಗಮನಿಸಿದರೆ, ಬೀದರ್ ಜಿಲ್ಲೆಯಲ್ಲಿ ತಲಾ ಒಂದರಂತೆ ತೋಟಗಾರಿಕೆ ಮತ್ತು ಪಶುವೈದ್ಯಕೀಯ ಮಹಾ ವಿದ್ಯಾಲಯಗಳು ಮತ್ತು ಒಂದು ಪಶುವೈದ್ಯಕೀಯ ವಿಶ್ವವಿದ್ಯಾಲಯ ಸಹ ಈಗಾಗಲೇ ಅಲ್ಲಿರುವುದರಿಂದ ಪ್ರಸ್ತುತ ಬೀದರ್ ತಾಲ್ಲೂಕಿನ ಜನವಾಡ ಹತ್ತಿರ ಇರುವ ಕೃಷಿ ಡಿಪ್ಲೋಮಾ ಪದವಿ ಪೂರ್ವ ಮಹಾವಿದ್ಯಾಲಯವನ್ನು ಉನ್ನತೀಕರಿಸುವ ಯೋಜನೆಯು ಸರ್ಕಾರದ ಮುಂದಿಲ್ಲ. ಇನ್ನೂ ಔರಾದ್ ತಾಲ್ಲೂಕಿಗೆ ಸಂಬಂಧಪಟ್ಟಂತೆ, ರಾಜ್ಯ ಮಟ್ಟದಲ್ಲಿ ಯಾವುದಾದರೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದರೆ, ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಚರ್ಚೆಗಳನ್ನು ಮಾಡಿ ಮಂಜೂರು ಮಾಡಬಹುದಾಗಿರುತ್ತದೆ. ಮುಂದುವರೆದು, ಕೃಷಿ ಇಲಾಖೆಯ ಸಚಿವರು ವಿಶ್ವವಿದ್ಯಾಲಯದ ಸೆನೆಟ್‌ನ ಸದಸ್ಯರಾಗಿರುತ್ತಾರೆ.

(ಮುಂದು)

(1006) 10.40 24-09-2021 CS BNS

**ಶ್ರೀ ಬಿ.ಸಿ.ಪಾಟೀಲ್(ಮುಂದು):-**

ಸದ್ಯದ ಪರಿಸ್ಥಿತಿಯಲ್ಲಿ ಅದು ಪರಿಶೀಲನೆಯಲ್ಲಿದೆ. ಕೃಷಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕೆಂದು ಎಲ್ಲಾ ಕಡೆಗಳಿಂದಲೂ ಒತ್ತಾಯ ಬರುತ್ತಿದೆ. ಉಡುಪಿಯಲ್ಲಿ ಮಾಡಬೇಕೆಂದು ಕೇಳುತ್ತಿದ್ದಾರೆ, ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿಯಲ್ಲಿ ಮಾಡಬೇಕೆಂದು ಕೇಳುತ್ತಿದ್ದಾರೆ. ಉತ್ತರಕರ್ನಾಟಕ ಭಾಗದಲ್ಲೂ ಕೂಡ ಕೇಳುತ್ತಿದ್ದಾರೆ. ಆದರೆ ಇರತಕ್ಕ ವಿಶ್ವವಿದ್ಯಾನಿಲಯಗಳಲ್ಲಿಯೇ ನಮಗೆ ಬೋಧಕರ ಕೊರತೆಯಿದೆ. ಅದನ್ನು ಇವತ್ತಿಗೂ ಸಹ ತುಂಬಲು ಆಗದೇ ಸಾಕಷ್ಟು ಹುದ್ದೆಗಳು ಖಾಲಿಯಿವೆ. ಇಂತಹ ಸನ್ನಿವೇಶದಲ್ಲಿ ತೋರಿಕೆಗೆ ಒಂದು ಕಾಲೇಜನ್ನು ಸ್ಥಾಪಿಸಿ, ಅಲ್ಲಿಗೆ ಸರಿಯಾದ ಸೌಲಭ್ಯಗಳನ್ನು ನೀಡದೇ ಹೋದರೆ ಅದು ಸರಿಯಾಗುವುದಿಲ್ಲ. ಆದ್ದರಿಂದ ಮುಂದಿನ ದಿವಸಗಳಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಸರ್ಕಾರದ ಶಿಫಾರಸ್ಸಿನ ಮೇಲೆ ಪರಿಶೀಲನೆ ಮಾಡಿ ವಿಶ್ವವಿದ್ಯಾನಿಲಯಗಳನ್ನು ತರಲು ಪರಿಶೀಲನೆ ಮಾಡಲಾಗುವುದು.

ಮತ್ತೊಂದು ಮಾಹಿತಿಯನ್ನು ಸದನದ ಗಮನಕ್ಕೆ ತರುವುದಾದರೆ ಶೈಕ್ಷಣಿಕವಾಗಿ ಬೀದರ್ ಜಿಲ್ಲೆ ಸಾಕ್ಷರತಾ ಪ್ರಮಾಣ ಶೇಕಡ 70 ರಷ್ಟಿದ್ದು, 732 ಕಿರಿಯ ಮತ್ತು ಹಿರಿಯ ಪ್ರಾಥಮಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲೆಗಳು 594 ಪ್ರೌಢಶಾಲೆಗಳು, 25 ಪದವಿ ಕಾಲೇಜುಗಳು, ಒಂದು ತೋಟಗಾರಿಕಾ ವಿಶ್ವವಿದ್ಯಾನಿಲಯ, ಒಂದು ವೈದ್ಯಕೀಯ ಕಾಲೇಜು, 2 ದಂತ ಮಹಾ ವಿದ್ಯಾಲಯ, ಮೂರು ಆಯುಷ್ ಮಹಾ ವಿದ್ಯಾಲಯ ಕಾಲೇಜುಗಳು ಮತ್ತು ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳನ್ನು ಗಮನಿಸಿ, ರಾಜ್ಯ ಸರ್ಕಾರದ ಯೋಜನಾ ಇಲಾಖೆಯು ನೀಡಿರುವ ಅಂಕಿಅಂಶಗಳ ಪ್ರಕಾರ ಬೀದರ್ ಜಿಲ್ಲೆಯು ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಜಿಲ್ಲೆ ಎನ್ನುವುದನ್ನು ತಿಳಿಸಿದ್ದಾರೆ. ಹಾಗಾಗಿ ನಾವು ಹಿಂದುಳಿದವರು ಎಂದು ಹೇಳಿಕೊಳ್ಳುವುದು ಬೇಡ. ಶೈಕ್ಷಣಿಕವಾಗಿ ಬೀದರ್ ಜಿಲ್ಲೆ ಕೂಡ ಮುಂದುವರೆದಿದೆ. ಯಾದಗಿರಿ, ರಾಯಚೂರು ಮಾತ್ರ ಕಲ್ಯಾಣ ಕರ್ನಾಟಕದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿದೆ. ಇಷ್ಟನ್ನು ಮಾನ್ಯ ಸದಸ್ಯರ ಗಮನಕ್ಕೆ ತಿಳಿಸಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯಸಚಿವರೆ, ನಾನು ತಮಗೊಂದು ಸಲಹೆಯನ್ನು ನೀಡುವುದೇನೆಂದರೆ ಎಲ್ಲೆಲ್ಲಿ ಯೂನಿವರ್ಸಿಟಿಗಳನ್ನು ಮಾಡಲಾಗಿದೆಯೋ ತೋಟಗಾರಿಕೆ, ಕೃಷಿ, animal husbandry University ಎಲ್ಲಾ ಕಡೆ ಒಂದೇ ಕಡೆ ಇದ್ದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ನಾನು ಹಿಂದೆಯೂ ಈ ವಿಚಾರವನ್ನು ಬಹಳಷ್ಟು ಸಲ ಪ್ರಸ್ತಾಪಿಸಿದ್ದೇನೆ. ಈಗಲೂ ಸಹ ಕೃಷಿ, ತೋಟಗಾರಿಕೆ ಒಂದೇ ಕಡೆಯಲ್ಲಿದ್ದರೆ ಯಾವ ರೈತರಿಗೂ ಸಹ ತೊಂದರೆಯಾಗುವುದಿಲ್ಲ. ಈಗ ರೈತರು ತೋಟಗಾರಿಕಾ ಸಹಾಯ ಬೇಕೆಂದರೆ ಬಾಗಲಕೋಟೆಗೆ ಹೋಗಬೇಕು, ಮತ್ತೊಂದು ವಿಚಾರಕ್ಕೆ ಧಾರವಾಡಕ್ಕೆ ಹೋಗಬೇಕು. ಈ ಕಡೆ ಶಿವಮೊಗ್ಗಕ್ಕೆ ಹೋಗಬೇಕು. ಆದ್ದರಿಂದ ಒಂದೇ ಕಡೆ ಎಲ್ಲಾ ವಿಶ್ವವಿದಾನಿಲಯಗಳು ಬರುವ ಹಾಗೆ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಮ್ಮ ಸಲಹೆ ಬಹಳ ಉತ್ತಮವಾಗಿದೆ. ಶಿವಮೊಗ್ಗದ ವಿಶ್ವವಿದ್ಯಾನಿಲಯದಲ್ಲಿ agriculture and horticulture ಇದೆ. ಬಾಗಲಕೋಟೆಯಲ್ಲಿ ಕೇವಲ ತೋಟಗಾರಿಕೆ ಇದೆ. ಈ ಮೈಸೂರು-ಮಂಡ್ಯ ಕಡೆಯವರಿಗೆ ತೋಟಗಾರಿಕೆಯ ಸಹಾಯ ಬೇಕೆಂದರೆ ಬಾಗಲಕೋಟೆಗೆ ಹೋಗಬೇಕಾಗುತ್ತದೆ. ಈಗಾಗಲೇ ಮಂಡ್ಯದಲ್ಲಿ V.C. Farm ನಲ್ಲಿ ಬೆಂಗಳೂರಿನ ಹೆಸರಘಟ್ಟದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಇದೆ. ಈಗಾಗಲೇ ಬಿಸ್ಲಯ್ಯ ಸಮಿತಿ ವರದಿಯಲ್ಲಿ ಈ ಎಲ್ಲಾ ವಿಶ್ವವಿದ್ಯಾನಿಲಯಗಳು ಒಂದೇ ಕಡೆಯಲ್ಲಿ ಬರಬೇಕೆಂದು ವರದಿಯನ್ನು ನೀಡಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಸಹ ಚರ್ಚೆ ಮಾಡುತ್ತೇವೆ. ಇತ್ತೀಚೆಗೆ ಕೇಂದ್ರದ ಕೃಷಿ ಸಚಿವರಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಶೋಭಾ ಕರಂದ್ಲಾಜೆಯವರು ಬಂದಿದ್ದಾಗ ಕೂಡ ಈ ವಿಚಾರವನ್ನು ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಎಲ್ಲೆಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳಿವೆ, ಅದನ್ನು ಕೃಷಿಗೆ ಸೀಮಿತವಾಗಿರಿಸದೇ ಕೃಷಿ ಮತ್ತು ತೋಟಗಾರಿಕೆ ಎರಡನ್ನೂ ಸೇರಿಸಬೇಕೆನ್ನುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ ಕೂಡ ಆಗಿದೆ. ಮುಖ್ಯಂಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ಆಚರಣೆಗೆ ತರಲು ಪ್ರಯತ್ನ ಮಾಡುತ್ತೇನೆ.

**ಶ್ರೀ ಅರವಿಂದ ಅರಳಿ**:- ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆ ಶೈಕ್ಷಣಿಕವಾಗಿ ಮುಂದುವರೆಯುತ್ತಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅಲ್ಲಿ ಶಾಲಾ-ಕಾಲೇಜುಗಳಿವೆ. ಆದರೆ ಶಾಲಾ-ಕಾಲೇಜುಗಳಲ್ಲಿ ಫ್ಯಾಕಲ್ಟಿಗಳಿಲ್ಲ. ಬೀದರ್ ಜಿಲ್ಲೆಯನ್ನು ಶೈಕ್ಷಣಿಕವಾಗಿ ಬೇರೆ ಜಿಲ್ಲೆಗೆ ಹೋಲಿಸಿದರೆ nil ಎಂದು ಹೇಳಬಹುದು. ಮಾನ್ಯ ಸಚಿವರು ಆರ್ಥಿಕ ಮುಗ್ಗಟಿನ ಬಗ್ಗೆ ಕೂಡ ಪ್ರಸ್ತಾಪಿಸಿದ್ದಾರೆ. ಅದನ್ನು ಕಲ್ಯಾಣ ಕರ್ನಾಟಕಕ್ಕೆ ಬರುವ ಅನುದಾನದಲ್ಲಿ ಇದಕ್ಕೆ ಸಹಾಯ ಪಡೆಯುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರ ಸಂಬಳ ಕೊಡಲಿ, ಕಲ್ಯಾಣ ಕರ್ನಾಟಕದ ಅನುದಾನದಲ್ಲಿ ಕಟ್ಟಡ ಆಗಲಿ. ಏಕೆಂದರೆ ಈಗಾಗಲೇ ಅಲ್ಲಿ ಕಟ್ಟಡ ಇದೆ. ಅದನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಹಣಕಾಸಿನ ಸಹಾಯ ಬೇಕಾಗುತ್ತದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ, ಕಲ್ಯಾಣ ಕರ್ನಾಟಕದಲ್ಲಿ 50% ಹುದ್ದೆಗಳನ್ನು ತುಂಬುವುದಾಗಿ ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಕೂಡ ವರದಿಯಾಗಿದೆ. ಕೃಷಿ ವಿಶ್ವವಿದ್ಯಾನಿಲಯ ಮಾಡಲು ಕನಿಷ್ಠ 75 ಎಕರೆ ಜಮೀನಿನ ಅಗತ್ಯವಿದೆ. ಈಗಾಗಲೇ 3 ವಿಶ್ವವಿದ್ಯಾನಿಲಯ ಅಲ್ಲಿವೆ. ಬಿಸ್ಲಯ್ಯ ಸಮಿತಿಯ ವರದಿಯ ಪ್ರಕಾರ ಒಂದು ವಿಶ್ವವಿದ್ಯಾನಿಲಯ ಇರಬೇಕೆಂದು ಹೇಳಿದ್ದಾರೆ. ಈಗಾಗಲೇ ಅಲ್ಲಿ ಎರಡು ವಿಶ್ವವಿದ್ಯಾನಿಲಯ ಇರುವ ಕಾರಣ ಬೀದರ್‌ನಲ್ಲಿ ಮತ್ತೊಂದು ವಿಶ್ವವಿದ್ಯಾನಿಲಯ ಕೊಡುವುದಕ್ಕೆ ಸಾಧ್ಯವಿಲ್ಲ. ಔರಾ ದಲ್ಲಿ ಕೇಳಿರುವ ಬಗ್ಗೆ ಪರಿಶೀಲನೆ ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1478**
**(ಉತ್ತರಗಳನ್ನು ಒದಗಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. Commodity Board ಅನ್ನು ಸ್ಥಾಪನೆ ಮಾಡಿರುವುದಾಗಿ ಹೇಳಿದ್ದಾರೆ. ನಾನು ಇದರಲ್ಲಿ ವಾಣಿಜ್ಯ ಬೆಳೆಗಳನ್ನು ಕೂಡ ಸೇರಿಸಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಪ್ರತಿಯೊಂದು ವಿಚಾರದಲ್ಲಿಯೂ ಸಹ ರೈತರು ಕೇಂದ್ರ ಸರ್ಕಾರದ ಜೊತೆ ವ್ಯವಹರಿಸಲು ಮತ್ತು ಮನವಿಗಳನ್ನು ಸಲ್ಲಿಸಲು ಸಾಧ್ಯವಾಗುವುದಿಲ್ಲ. ಒಂದು Commodity Board ಅನ್ನು ಸ್ಥಾಪಿಸಿ, ರಾಜ್ಯದಲ್ಲಿ ಬೆಳೆಯುವ ಎಲ್ಲಾ ವಾಣಿಜ್ಯ ಬೆಳೆಗಳನ್ನು ಸೇರಿಸಬೇಕು. ಉದಾಹರಣೆಗೆ ಕಾಫಿ, ಮೆಣಸು, ಏಲಕ್ಕಿ ಇವುಗಳನ್ನು ಕೂಡ ಅವುಗಳ ಜೊತೆಯಲ್ಲಿ ಸೇರಿಸಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಜೊತೆಗೆ ರಾಜ್ಯದಲ್ಲಿ ಕೊಡಗಿನ ಕಾಫಿ ಬೆಳೆಗಾರರು ಮತ್ತು ಇತರ ವಾಣಿಜ್ಯ ಬೆಳೆಯ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಒಳಾಗಾಗಿದ್ದಾರೆ. ಈ ಸಂದರ್ಭದಲ್ಲಿ Commodity Board ಸ್ಥಾಪಿಸಿ ಅದರ ಮೂಲಕ ರೈತರಿಗೆ ಸಾಲ ಮತ್ತು ಸಹಾಯ ಧನವನ್ನು ಕೊಡುವ ವ್ಯವಸ್ಥೆಯನ್ನು ಕೂಡ ಮಾಡಬೇಕಾಗುತ್ತದೆ. ಕಾಫಿ ಬೆಳೆಗಾರರು ಪ್ರಧಾನ ಮಂತ್ರಿ ಫಸಲ್ ಭೀಮಾ ವಿಮಾ ಯೋಜನೆಯಿಂದ ಕೂಡ ವಂಚಿತರಾಗಿದ್ದಾರೆ. ಕಾಫಿ ಮತ್ತು ಇತರೆ ವಾಣಿಜ್ಯ ಬೆಳೆಗಾರರಿಗೂ ಸಹ ಇತರೆ ಕೃಷಿ ಬೆಳೆಗಾರರಿಗೆ ಸಿಗುತ್ತಿರುವ ಸವಲತ್ತುಗಳು ಸಿಗುತ್ತಿಲ್ಲ. ಹಾಗಾಗಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ ವಾಣಿಜ್ಯ ಬೆಳೆಗಳನ್ನು ಸಹ ಇದರ ವ್ಯಾಪ್ತಿಗೆ ತಂದು ರಾಜ್ಯದ, ಕೊಡಗಿನ ಮತ್ತು ಇತರೆ ಕಾಫಿಬೆಳೆಗಾರರು ಮತ್ತು ವಾಣಿಜ್ಯ ಬೆಳೆಗಾರರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಮುನಿರತ್ನ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರ ಮತ್ತು ಕಾಫಿ ಬೋರ್ಡ್, ಟೀ ಬೋರ್ಡ್ ಮತ್ತು ಸಾಂಬಾರ್ ಮಂಡಳಿ, ತೆಂಗು ಅಭಿವೃದ್ಧಿ ಮಂಡಳಿ ಇವರಿಗೆಲ್ಲ ಈಗಾಗಲೇ ಪ್ರೋತ್ಸಾಹವನ್ನು ಕೊಟ್ಟು, ಒಂದು ಬೋರ್ಡನ್ನು ಕೂಡ ರಚನೆ ಮಾಡಲಾಗಿದೆ. ಇನ್ನು ವಾಣಿಜ್ಯ ಬೆಳೆಗಳಿಗೂ ಸಹ ಪ್ರೋತ್ಸಾಹವನ್ನು ಕೊಡುವ ನಿಟ್ಟಿನಲ್ಲಿ ಮಂಡಳಿಗಳನ್ನು ರಚನೆ ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಮಾನ್ಯ ಸದಸ್ಯರು ಕೇಳಿರುವ ಹಾಗೆ ವಾಣಿಜ್ಯ ಬೆಳೆಗಳನ್ನು ಬೆಳೆಯುವ ರೈತರಿಗೆ ಸಾಲ ಸಹಾಯಧನಗಳನ್ನು ನೀಡುವ ಬಗ್ಗೆ ಖಂಡಿತ ಗಮನ ಹರಿಸುವ ಕೆಲಸವನ್ನು ಮಾಡುತ್ತೇವೆ.

**ಶ್ರೀಮತಿ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಮೊದಲು ಕಾಫಿ ಬೆಳೆಗಾರರ ಮಕ್ಕಳಿಗೆ ಕೇಂದ್ರ ಸರ್ಕಾರ ಸ್ಕಾಲರ್‌ಶಿಫ್ ನೀಡುತ್ತಿತ್ತು. ಸಬ್ಸಿಡಿಯಲ್ಲಿ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿತ್ತು. ಈಗ ಅದೆಲ್ಲ ನಿಂತು ಹೋಗಿದೆ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ವ್ಯವಹರಿಸಿ, ಇದನ್ನೆಲ್ಲ ಪುನಃ ಕೊಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಮುನಿರತ್ನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಏನು ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ, ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚಿಸಿ, ಖಂಡಿತ ಸೂಕ್ತವಾದ ಕ್ರಮವನ್ನು ಕೈಗೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1573**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು, ಡಾ:ಕೆ.ಗೋವಿಂದರಾಜುರವರ ಪರವಾಗಿ):-** ನನ್ನ ಪ್ರಶ್ನೆ ಏನೆಂದರೆ ರಾಜ್ಯದ ಗಡಿ ಭಾಗಗಳಲ್ಲಿ ಗುರುತಿಸಲಾಗಿರುವ ಸಾರಿಗೆ ತಪಾಸಣಾ ಕೇಂದ್ರಗಳು ಯಾವುವು ಎಂದು ಕೇಳಿದ್ದೇನೆ. ಅದಕ್ಕೆ ನನಗೆ ಸಚಿವರು ಉತ್ತರವನ್ನು ನೀಡಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೂ ಸಹ ಉತ್ತರವನ್ನು ಕೊಟ್ಟಿದ್ದಾರೆ. ಚೆಕ್ ಪೋಸ್ಟ್‌ಗಳನ್ನು ಗಡಿ ಪ್ರದೇಶಗಳಲ್ಲಿ ಏಕೆ ಇಡಲಾಗುವುದು ಎಂದರೆ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರತಕ್ಕ ಸರಂಜಾಮುಗಳು ಹಾಗೆಯೇ ನಮ್ಮ ರಾಜ್ಯದಿಂದ ಹೊರಗಡೆ ಹೋಗತಕ್ಕ ವಸ್ತುಗಳು ಸರಿಯಾದ ರೀತಿಯಲ್ಲಿ ತಪಾಸಣೆಯನ್ನು ಮಾಡಿ ಕಳುಹಿಸಿಕೊಡುವ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾದ ಇಲಾಖೆ ಇದು. ಇದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಆದರೆ ಸರ್ಕಾರ ಈ ವಿಚಾರದಲ್ಲಿ ಎಷ್ಟು ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದೆ ಎಂದರೆ ತಮ್ಮ ಉತ್ತರದಲ್ಲಿ ಎಷ್ಟು ಹುದ್ದೆಗಳಿವೆ ಎಂದರೆ ೩೭ ಹುದ್ದೆಗಳಿದ್ದು, ಸಹಾಯಕ ಪ್ರಾದೇಶಿಕಾ ಸಾರಿಗೆ ಅಧಿಕಾರಿ ಹುದ್ದೆ ಮಂಜೂರಾಗಿರುವುದು 21 ಹುದ್ದೆಗಳು, ಅದರಲ್ಲಿ 21 ಹುದ್ದೆಗಳು ಸಹ ಖಾಲಿಯಿವೆ. ಒಂದು ಹುದ್ದೆಯನ್ನು ತುಂಬಿರುವುದಿಲ್ಲ. ಪ್ರಥಮ ದರ್ಜೆ ಸಹಾಯಕರ ಹುದ್ದೆ 2 ಇದ್ದು, ಅದರಲ್ಲಿ 1 ಹುದ್ದೆ ತುಂಬಿ ಒಂದು ಹುದ್ದೆ ಖಾಲಿಯಿದೆ. ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಒಂದು ಇದ್ದು, ಅದನ್ನು ತುಂಬಿದ್ದಾರೆ. 8 ಚಾಲಕರ ಹುದ್ದೆ ಇದ್ದು, ಅದರಲ್ಲಿ 4 ಹುದ್ದೆಗಳನ್ನು ತುಂಬಿದ್ದು, 4 ಹುದ್ದೆಗಳು ಖಾಲಿಯಿವೆ. ಗ್ರೂಪ್ ಡಿ ನೌಕರರ 5 ಹುದ್ದೆಗಳು ಮಂಜೂರಾಗಿದ್ದು 2 ಹುದ್ದೆ ತುಂಬಿದ್ದು, 3 ಹುದ್ದೆಗಳು ಖಾಲಿಯಿವೆ. ಮಂಜೂರಾಗಿರುವ 37 ಹುದ್ದೆಗಳಲ್ಲಿ 8 ಹುದ್ದೆಗಳು ತುಂಬಿದ್ದು, 29 ಹುದ್ದೆಗಳು ಖಾಲಿಯಿವೆ.

(ಮುಂದು)

**(1007) 10.50 LM (CS) BNS**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಆ ಹುದ್ದೆಗಳಿಗೆ ಬೇರೆ ಇಲಾಖೆಗಳ ಸಿಬ್ಬಂದಿಯನ್ನು ನಿಯೋಜನೆ ಮಾಡುತ್ತಾರೆ. ಆದರೆ ಅವರಿಗೆ ಯಾವುದೇ ರೀತಿಯ ಅನುಭವ ಇರುವುದಿಲ್ಲ. ನಾವು ದಿನವೂ ಪತ್ರಿಕೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದುತ್ತೇವೆ. ಚೆಕ್‌ಪೋಸ್ಟ್‌ಗಳಲ್ಲಿ ಹೇಗೆ ಲಂಚ ಪಡೆದು ಬೇರೆ ಕಡೆಗಳಿಂದ ಬರುವ ಸರಂಜಾಮುಗಳನ್ನು ಒಳಗೆ ಬಿಡುತ್ತಾರೆ. ಇದರಿಂದ ನಮ್ಮ ಸರ್ಕಾರಕ್ಕೆ ಬರುವ ಆದಾಯವೂ ಸಹ ಕಡಿಮೆ ಆಗುತ್ತದೆ. ಅದರ ಬಗ್ಗೆ ಕಿಂಚಿತ್ತು ಅನುಭವ ಇಲ್ಲದವರನ್ನು ಹಾಕಿರುವುದರಿಂದ ಅವರು ಸರ್ಕಾರಕ್ಕೆ ಬರಬೇಕಾದ ಆದಾಯದ ಹತ್ತು ಪಟ್ಟು ಹಣವನ್ನು ಲಂಚವಾಗಿ ಪಡೆದು ಕೆಲಸ ಮಾಡುತ್ತಿರುತ್ತಾರೆ. ಎಸಿಬಿ ಯವರು raid ಮಾಡಿದಾಗ , ಸಿಕ್ಕಿ ಹಾಕಿಕೊಂಡು ಅವರನ್ನು ಸಸ್ಪೆಂಡ್ ಅಥವಾ ವರ್ಗಾವಣೆ ಮಾಡಿದರೆ ಅಲ್ಲಿಗೆ ಹೋಗುತ್ತಾರೆ. ದಿನ ಪತ್ರಿಕೆಗಳಲ್ಲಿ ಎಸಿಬಿ ಯವರು raid ಮಾಡಿರುವ ವಿಚಾರ ಬರುತ್ತಲೇ ಇರುತ್ತದೆ. ಇಡೀ ರಾಜ್ಯದಲ್ಲಿರುವ 1715 ಚೆಕ್‌ಪೋಸ್ಟ್‌ಗಳಲ್ಲಿ ಮುಖ್ಯವಾದ ಹುದ್ದೆಗಳನ್ನು ತುಂಬಿಯೇ ಇಲ್ಲ. ಇದರ ಬಗ್ಗೆ ಸಚಿವರು ಉತ್ತರ ನೀಡಿದರೆ ನಾನು ನಂತರ ನನ್ನ ಉಪಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೆ, ಗಡಿ ಭಾಗದಲ್ಲಿರುವ ಚೆಕ್ ಪೋಸ್ಟ್‌ಗಳು 15 recognised ಚೆಕ್‌ಪೋಸ್ಟ್‌ಗಳಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರುವ ವಸ್ತುಗಳನ್ನು ಚೆಕ್ ಪೋಸ್ಟ್‌ನಲ್ಲಿರುವ ಅಧಿಕಾರಿಗಳು ಚೆಕ್ ಮಾಡಿ ಒಳಗೆ ಕಳುಹಿಸಬೇಕಾಗುತ್ತದೆ. ರಾಜ್ಯದಲ್ಲಿರುವ 15 ಚೆಕ್‌ಪೋಸ್ಟ್‌ಗಳಲ್ಲಿ 37 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 29 ಹುದ್ದೆಗಳು ಖಾಲಿಯಿವೆ. ಒಟ್ಟಾರೆಯಾಗಿ ಚೆಕ್ ಪೋಸ್ಟ್‌ಗಳಿಗೆ 2021ರವರೆಗೆ ನಮ್ಮ ಇಲಾಖೆಯಲ್ಲಿ 2781 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 1252 ಸಿಬ್ಬಂದಿ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನೂ 1529 ಹುದ್ದೆಗಳು ಖಾಲಿಯಿವೆ. ಇದರ ಬಗ್ಗೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ಧಾರವನ್ನು ಕೈಗೊಂಡು ಈ ಹುದ್ದೆಗಳನ್ನು ತುಂಬಲು ಕೆಪಿಎಸ್‌ಸಿ ಗೆ ಪ್ರಸ್ತಾವ ಕಳುಹಿಸಿಕೊಡಲಾಗಿದೆ. ಅಲ್ಲಿ ಕೆಲವು ತಾಂತ್ರಿಕ ತೊಂದರೆ ಇದೆ. ಆದಷ್ಟು ಬೇಗ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಯವರೆ, ಈ ಹುದ್ದೆಗಳನ್ನು ತುಂಬಲು ಏನು ತಾಂತ್ರಿಕ ತೊಂದರೆ ಇದೆ ಎನ್ನುವುದು ನಮಗೆ ಗೊತ್ತಿಲ್ಲ. ಒಟ್ಟು 2781 ಮಂಜೂರಾಗಿರುವ ಹುದ್ದೆಗಳು , ಅದರಲ್ಲಿ 1252 ಹುದ್ದೆಗಳು ತುಂಬಿದ್ದು ಇನ್ನೂ 1529 ಹುದ್ದೆಗಳನ್ನು ತುಂಬಿರುವುದಿಲ್ಲ. ಇದು ಬಹಳ ಪ್ರಮುಖವಾದ ಇಲಾಖೆ. ಒಂದು ಉದಾಹರಣೆ ಹೇಳುವುದಾದರೆ ತುಮಕೂರು ರಸ್ತೆಯಲ್ಲಿರುವ ಚೆಕ್ ಪೋಸ್ಟ್‌ಗೆ ಉತ್ತರ ಭಾರತದ ಕಡೆಯಿಂದ ಬರುವ ಎಲ್ಲಾ ವಾಹನಗಳು ಅಲ್ಲಿಂದಲೇ ಪಾಸ್ ಆಗುತ್ತವೆ. ಅಲ್ಲಿರುವ ಅಧಿಕಾರಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆತ ಚೆಕ್ ಪೋಸ್ಟ್‌ನಲ್ಲಿ ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡ್ರಮ್‌ಗಳನ್ನು ಇಟ್ಟಿದ್ದಾನೆ, ಅಲ್ಲಿಗೆ ಹೊರಗಿನಿಂದ ಬರುವವರು ಆ ಡ್ರಮ್‌ಗೆ ಹಣ ಹಾಕಿದರೆ ಮುಂದಕ್ಕೆ ಹೋಗಬಹುದು.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಗಂಭೀರವಾಗಿ ಈಶ್ವರಪ್ಪನವರನ್ನು ಕೇಳುವುದೇನೆಂದರೆ ಜಿಎಸ್‌ಟಿ ಬಂದಮೇಲೆ ಇದಕ್ಕೆಲ್ಲಾ ಪ್ರಾಶಸ್ತ್ಯ ಉಳಿದಿದೆಯೇ ಎನ್ನುವುದು ನನ್ನ ಪ್ರಶ್ನೆ. ನಮ್ಮ ರಾಜ್ಯದ tax collection and tax levy ಮಾಡಬೇಕಾದರೆ ಬಹಳ ಕಠಿಣವಾಗಿ review ಮಾಡುತ್ತಿದ್ದೇವೆ. ಜಿಎಸ್‌ಟಿ ಹಾಕಿದ ಮೇಲೆ ಅದಕ್ಕೆ ಅಷ್ಟೊಂದು ಮಹತ್ವ ಇದೆ ಎಂದು ನನಗನಿಸುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದಕ್ಕೆಲ್ಲ ಸುಧಾರಣೆಯನ್ನು ತರಬೇಕು. ಈ ಸುಧಾರಣೆಗಳನ್ನು ತರುವುದಕ್ಕೆ ಸರ್ಕಾರ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಎನ್ನುವುದು ನನಗೆ ಗೊತ್ತಿಲ್ಲ. ಉತ್ತರ ಭಾರತದಿಂದ ಬರುವ ಚಾಲಕರಿಗೆ ಇಲ್ಲಿನ ಭಾಷೆ ಗೊತ್ತಿರುವುದಿಲ್ಲ, ಇಲ್ಲಿ ನಮ್ಮ ಚೆಕ್‌ಪೋಸ್ಟ್‌ಗಳಲ್ಲಿ ಹಿಂದಿ, ಇಂಗ್ಲೀಷ್ ಮಾತನಾಡುವುದಕ್ಕೆ ಬರುವುದಿಲ್ಲ, ಕನ್ನಡವೇ ಸರಿಯಾಗಿ ಮಾತನಾಡಲು ಬರುವುದಿಲ್ಲ ಅಂತಹವರನ್ನು ಕೂರಿಸಿದ್ದಾರೆ. ಇನ್ನು ಹೊರ ರಾಜ್ಯಗಳಿಂದ ಬರುವವರು ಈತನ ಜೊತೆಯಲ್ಲಿ ಏನು ಸಂವಾದವನ್ನು ಮಾಡಲು ಸಾಧ್ಯವಾಗುತ್ತದೆ? ಅದಕೋಸ್ಕರ ಆತ ಏನು ಕೊಡಬೇಕು ಅದನ್ನು ಕೊಟ್ಟು ಮುಂದಕ್ಕೆ ಹೋಗು ಎಂದು ಹೇಳುತ್ತಾನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸತ್ಯವಾದ ವಿಚಾರವನ್ನು ಹೇಳಿದ್ದಾರೆ. ಚೆಕ್‌ಪೋಸ್ಟ್‌ಗಳಲ್ಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಇದೆ. ಇಲ್ಲಿ ಹುದ್ದೆಗಳು ಖಾಲಿಯಿರುವ ಕಾರಣ ಬೇರೆ ಬೇರೆ ಇಲಾಖೆಗಳ ಸಿಬ್ಬಂದಿಯನ್ನು ಇಲ್ಲಿ ನಿಯೋಜನೆ ಮಾಡಲಾಗಿರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಹೊರಗಿನಿಂದ ಬರುವ ಚಾಲಕರಿಗೆ ನಮ್ಮ ಭಾಷೆ ಬರುವುದಿಲ್ಲ, ಆದರೆ ಹಫ್ತಾ ವಸೂಲಿ ಎನ್ನುವ ಪದವು ಕಡತಕ್ಕೆ ಹೋಗಬಾರದು ಅದನ್ನು ತೆಗೆಯಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಆದಷ್ಟು ಶೀಘ್ರವಾಗಿ ಸಿಬ್ಬಂದಿಯನ್ನು ನೇಮಕ ಮಾಡಲಾಗುವುದು.

**ಸಭಾಪತಿಯವರು:-** ನಾರಾಯಣಸ್ವಾಮಿ, ಸಾಕು ಬಿಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇನ್ನೂ ಪ್ರಮೋಷನ್ ಬಗ್ಗೆ ಹೇಳುವುದಾದರೆ, ಈ ಇಲಾಖೆಯಲ್ಲಿ ಬಡ್ತಿ ನೀಡಿದರೆ ಅವರು ಮುಂದಕ್ಕೆ ಹೋದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದಿನ ಕೆಲಸ ಮಾಡುವುದಕ್ಕೆ ಸಿಬ್ಬಂದಿ ಕೊರತೆ ಉಂಟಾಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲಿ ಯಾರಿಗೂ ಬಡ್ತಿಗಳನ್ನು ನೀಡುತ್ತಿಲ್ಲ ಎಂದು ಉತ್ತರ ನೀಡಿದ್ದಾರೆ. ಹಾಗಾದರೆ ಅವರು ಅಷ್ಟು ವರ್ಷ ಸೇವೆ ಸಲ್ಲಿಸಿರುವುದು ನೀರಿನಲ್ಲಿ ಹೋಮ ಮಾಡಿದಂತಾಗಬೇಕೆ? ಅವರ ಸೇವಾವಧಿಯನ್ನು ಪರಿಗಣಿಸಿ ಬಡ್ತಿಗಳನ್ನು ನೀಡಬೇಕಲ್ಲವೇ?

**ಸಭಾಪತಿಯವರು:-** ನಾರಾಯಣಸ್ವಾಮಿಯವರೆ, ನೀವು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿದ್ದೀರಿ, ಅಧ್ಯಕ್ಷರಿಗೆ ಗೌರವ ಕೊಡುವುದನ್ನು ಕಲಿಯಿರಿ.

**ಶ್ರೀ ಬಿ.ಶ್ರೀರಾಮುಲು**:- ಕೆಲವು ಕಾರಣಗಳಿಂದ ಅಲ್ಲಿ ಬಡ್ತಿ ನೀಡಲಾಗಿಲ್ಲ, ನೌಕರರು ಕೋರ್ಟಿಗೆ ಹೋಗಿರುವ ಕಾರಣ ಸ್ವಲ್ಪ ತಡ ಆಗಿದೆ. ಕೋರ್ಟಿನಲ್ಲಿ ಇತ್ಯರ್ಥ ಆದ ಕೂಡಲೇ ಬಡ್ತಿಗಳನ್ನು ನೀಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ 1410
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಸ್ .ರವಿ:-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ನಾನು ಪ್ರಮುಖವಾಗಿ ಸಚಿವರಲ್ಲಿ ಕೇಳುವುದೇನೆಂದರೆ ಇತ್ತೀಚೆಗೆ ಹೇನು, ನುಸಿ ಹಾಗೂ ಹಿಪ್ಪನೇರಳೆಗೆ ಸುರಳಿ ಪೂಸಿ ರೋಗದ ಬಗ್ಗೆ ಮತ್ತು ಸರ್ಕಾರ ಅದರ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಏನೋ ಒಂದು ಉತ್ತರ ಕೊಡಬೇಕೆಂದು ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದ ಉತ್ತರದ ಪ್ರಕಾರವೇ ನಾಲ್ಕು ತಾಲ್ಲೂಕುಗಳನ್ನು ಹೊಂದಿರುವ ರಾಮನಗರ ಜಿಲ್ಲೆಯಲ್ಲಿ 30 ಸಾವಿರ ಎಕರೆಯಷ್ಟು ವಿಸ್ತೀರ್ಣದಲ್ಲಿ ರೇಷ್ಮೆ ಬೇಳೆಯನ್ನು ನಾವು ಬೆಳೆಯುತ್ತಿದ್ದೇವೆ. ಇವತ್ತು ಬೆಳಗಾವಿಯ ವರೆಗೆ ರೇಷ್ಮೆ ಬೆಳೆಯ ವಿಸ್ತರಣೆ ಆಗುತ್ತಿದೆ. ಇಲ್ಲಿ ಸಚಿವರಿಗೆ ದಾರಿ ತಪ್ಪಿಸುವ ಕೆಲಸವನ್ನು ಆಯುಕ್ತರು ಮಾಡಿದ್ದಾರೆ, ಅವರು ನೀಡಿರುವ ಉತ್ತರವನ್ನೇ ಸಚಿವರು ಇಲ್ಲಿ ನೀಡಿದ್ದಾರೆ. ಉತ್ತರದಲ್ಲಿ ನುಸಿ, ಹೇನು ಮತ್ತು ಸುರಳಿ ರೋಗ ನಿಯಂತ್ರಣದಲ್ಲಿದೆ ಎಂದು ಹೇಳಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ ಅತಿ ಹೆಚ್ಚು ಮಲಬರಿ ಬೆಳೆಯುತ್ತಿದ್ದು, ಏಷ್ಯಾದಲ್ಲಿಯೇ ಹೆಚ್ಚಿನ ಗೂಡು ಮಾರುಕಟ್ಟೆ ನಮ್ಮ ರಾಮನಗರ ಜಿಲ್ಲೆಯಲ್ಲಿದೆ. ಇವತ್ತು ಸುರಳಿ ಪೋಚಿ ರೋಗ 10-15 ವರ್ಷಗಳಿಂದ ಇದೆ. ಹಿಂದೆ ಅದಕ್ಕೆ 'Nuvan DDVP' ಎನ್ನುವ ಔಷಧಿಯನ್ನು ಸಿಂಪಡಣೆ ಮಾಡಲಾಗುತ್ತಿತ್ತು. ಅದರಿಂದ ಸ್ವಲ್ಪ ನಿಯಂತ್ರಣ ಆಗುತ್ತಿತ್ತು. 'Nuvan DDVP' ಅನ್ನು ಈಗ ಬ್ಯಾನ್ ಮಾಡಿದ್ದಾರೆ. ಬ್ಯಾನ್ ಮಾಡಿದ ಮೇಲೆ ಅದಕ್ಕೆ ಪರ್ಯಾಯ ಔಷಧಿಯನ್ನು ನೀಡಲೇ ಇಲ್ಲ. Research and Development ನಲ್ಲಿ ಇರುವವರು ಸೂಕ್ತವಾದ ಸಂಶೋಧನೆಯನ್ನು ಮಾಡಿ, ಒಂದು ಔಷಧಿಯನ್ನು ರೈತರಿಗೆ ಪರಿಚಯ ಮಾಡಿಕೊಡಲಿಲ್ಲ. ರೇಷ್ಮೆ ಬೆಳೆಗೆ ಇಲಾಖೆ ಇದೆ, ಸೆಂಟ್ರಲ್ ಸಿಲ್ಕ್ ಬೋರ್ಡ್ ಇದೆ, ನಮ್ಮ ತಲಘಟ್ಟಪುರದಲ್ಲಿ research centre ಇದೆ, ಮೈಸೂರಿನಲ್ಲಿದೆ, ಇವರೆಲ್ಲರೂ ಇದ್ದರೂ ಸಹ ನಾವು ಇವತ್ತು ಈ ರೋಗಕ್ಕಾಗಿ ಕೈ ಚೆಲ್ಲಿ ನಿಂತಿದ್ದಾರೆ. ಕಳೆದ ಎರಡು ವರ್ಷದಿಂದ 2 ಅಡಿಗಳ ಮೇಲೆ ಹಿಪ್ಪೆ ನೇರಳೆ ಬೆಳೆ ಬರುತ್ತಿಲ್ಲ. ಇಷ್ಟು ಉದ್ದ ಬೇಳೆದ ಮೇಲೆ ಪ್ರತಿ ಎಲೆಗೂ ಪ್ರತಿ ಕುಡಿಗೂ ಸುರಳಿ ಪೋಚಿ ರೋಗದ ಮೊಟ್ಟೆಗಳಾಗಿರುತ್ತವೆ. ಅದು ಸುರಳಿಯಾಕಾರದಲ್ಲಿ ಅದು ಗಿಡಗಳನ್ನು ಸುತ್ತಿದರೆ ಮುಗಿಯಿತು, 4 ಅಡಿ ಬೆಳೆಯುವುದು 2 ಅಡಿಗೆ ನಿಂತು ಹೋಗುತ್ತದೆ. 1 ಎಕರೆಗೆ 500 ಮೊಟ್ಟೆಗಳನ್ನು ಬೆಳೆಯುವ ರೈತರಿಗೆ 100 ಮೊಟ್ಟೆಗಳನ್ನು ಬೆಳೆಯುವುದಕ್ಕೆ ಆಗುತ್ತಿಲ್ಲ. ಇವತ್ತು ಶೇಕಡ 30 ರಷ್ಟು ಗೂಡು ಸಹ ಮಾರುಕಟ್ಟೆಗೆ ಬರುತ್ತಿಲ್ಲ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ::ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆಯನ್ನು ಕೇಳಿದಂತಹ ಮಾನ್ಯ ಸದಸ್ಯರಾದ ರವಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ನಮ್ಮ ರಾಮನಗರ ಜಿಲ್ಲೆ ಇಡೀ ಭಾರತದಲ್ಲಿಯೇ ಅತಿ ದೊಡ್ಡ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಹೊಂದಿದೆ.

(ಮುಂದು)

**(1008) 11:00 ಬಿಎಸ್‌ಡಿ(ಎಸ್‌ಪಿಆರ್)-ಜಿಆರ್ 24/09/2021**

(ಸಭಾಪತಿಯವರ ಉಪಸ್ಥಿತಿ)

**ಡಾ|| ನಾರಾಯಣಗೌಡ (ಮುಂದು)**

ನಮ್ಮ ಇಡೀ ರಾಜ್ಯದಲ್ಲಿ 2020-21 ನೇ ಸಾಲಿನ ಅಂತ್ಯಕ್ಕೆ 1,07,471.71 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವಿಸ್ತೀರ್ಣವಿದೆ ಎಂದು ನಮ್ಮ ಇಲಾಖಾಧಿಕಾರಿಗಳು ಹೇಳುತ್ತಿದ್ದಾರೆ. ಒಂದು ವೇಳೆ ಇದು ತಪ್ಪಿದ್ದರೆ ನಾನು ಪುನಃ ಪರಿಶೀಲಿಸುತ್ತೇನೆ. ಏಕೆಂದರೆ, ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ತಕ್ಷಣ ಪರಿಶೀಲನಾ ಸಭೆಗಳನ್ನು ಮಾಡಿದ್ದೇನೆ. ನಾನೂ ಸಹ ರೈತನೊಬ್ಬನ ಮಗನಾಗಿದ್ದೇನೆ. ಸದ್ಯಸರು ಯಾವ ರೀತಿಯಾಗಿ ಬೆಳೆಗಳನ್ನು ಬೆಳೆಯುತ್ತಿದ್ದಾರೆಯೋ, ಅದೇ ರೀತಿಯಾಗಿ ನಾವೂ ಸಹ ಮಂಡ್ಯ ಜಿಲ್ಲೆಯಲ್ಲಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ನಾನು ಚಿಕ್ಕವನಾಗಿದ್ದಾಗ ಈ ಬೆಳೆಯನ್ನು ಬೆಳೆಯುತ್ತಿದ್ದೆವು. ಪ್ರಸ್ತುತ ನುಸಿ, ಹೇನು ಮತ್ತು ಸುರುಳಿ ರೋಗವು ನಿಯಂತ್ರಣದಲ್ಲಿದೆ. ಇತ್ತೀಚೆಗೆ ನಾನು ಪರಿಶೀಲನಾ ಸಭೆಗಳನ್ನು ನಡೆಸಿದ್ದೇನೆ. ನನಗೆ ಈ ಮಾಹಿತಿ ಬಂದ ತಕ್ಷಣವೇ ನಾನು ಇಲಾಖಾಧಿಕಾರಿಗಳನ್ನು ಕರೆಸಿ, ಸಭೆಗಳನ್ನು ನಡೆಸಿದ ಸಂದರ್ಭದಲ್ಲಿ, ಸದಸ್ಯರು ಪ್ರಸ್ತಾಪಿಸಿದಂತೆ, Magister ಮತ್ತು Kunoichi ಎನ್ನುವ ಕೀಟನಾಶಕಗಳನ್ನು ಉಪಯೋಗಿಸಿದಾಗ, ಸದರಿ ರೋಗಗಳು ಹತೋಟಿವೆ ಬಂದಿರುವ ಸಂಗತಿಯನ್ನು ನಮ್ಮ ಇಲಾಖಾಧಿಕಾರಿಗಳು ಹೇಳಿರುವುದನ್ನು ನಾನು ಸದಸ್ಯರಿಗೆ ತಿಳಿಸುತ್ತಿದ್ದೇನೆ. ನಾನು ಇತ್ತೀಚೆಗೆ ರಾಮನಗರ ಜಿಲ್ಲೆ ಮತ್ತು ಸದಸ್ಯರ ತಾಲ್ಲೂಕಿಗೆ ಭೇಟಿ ನೀಡಿ ಅಲ್ಲಿನ ಇಲಾಖಾಧಿಕಾರಿಗಳು ಮತ್ತು ತಜ್ಞರನ್ನು ಕರೆಸಿ ಮಾತನಾಡಿದ್ದೇನೆ. ನಾನು ಇಲಾಖಾಧಿಕಾರಿಗಳು ಮತ್ತು ತಜ್ಞರೊಳಗೊಂಡ ತಂಡವನ್ನು ಶೀಘ್ರದಲ್ಲಿಯೇ ಸದಸ್ಯರ ತಾಲ್ಲೂಕಿಗೆ ಕರೆದುಕೊಂಡು ಹೋಗಿ ಪುನಃ ಪರಿಶೀಲನೆ ಮಾಡುತ್ತೇನೆ. ರೇಷ್ಮೆ ಕೃಷಿಯು ಬಹಳ ಒಳ್ಳೆಯ ಕೃಷಿಯಾಗಿದೆ. ಕಬ್ಬು ಬೆಳೆಯನ್ನು ಬೆಳೆದರೆ, ಫಸಲು ಪಡೆಯಲು ನಾವು ಒಂದೂವರೆ ವರ್ಷಗಳ ಕಾಲ ಕಾಯಬೇಕು. ಆದರೆ ಒಂದು ವರ್ಷಕ್ಕೆ ನಾವು ಎಂಟು ರೇಷ್ಮೆ ಬೆಳೆಗಳನ್ನು ಬೆಳೆಯಬಹುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಹಿಂದೆ ನಾನು ಸಚಿವನಾಗಿದ್ದಾಗ, ಕಾಳಜಿ ವಹಿಸಿ ಕೆಲಸ ಮಾಡಿರುವುದು ಎಲ್ಲರಿಗೂ ಸಹ ತಿಳಿದಿದೆ. ಅದೇ ರೀತಿಯಾಗಿ, ಈಗಲೂ ಸಹ ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡಾಗ, ಬೇರೆ ಬೇರೆ ಇಲಾಖೆಗಳ ಇಲಾಖಾಧಿಕಾರಿಗಳನ್ನು ಕರೆಸಿ ಪರಿಶೀಲನಾ ಸಭೆಗಳನ್ನು ನಡೆಸಿದ್ದೇನೆ. ರೇಷ್ಮೆ ಕೃಷಿಯು ನಮಗೆ ರಕ್ತಗತವಾಗಿ ಬಂದಿದೆ. ಹೀಗಾಗಿ ಈ ಕೃಷಿಗೆ ಶಕ್ತಿ ತುಂಬುವ ಕೆಲಸಗಳನ್ನು ನಾನು ಶೀಘ್ರದಲ್ಲಿಯೇ ಮಾಡುತ್ತೇನೆ. ಪ್ರಸ್ತುತ ಅಧಿವೇಶನ ಪೂರ್ಣಗೊಂಡ ನಂತರ ಸದಸ್ಯರ ತಾಲ್ಲೂಕಿಗೆ ಭೇಟಿ ನೀಡಿ, ಎಲ್ಲಾ ಅಧಿಕಾರಿಗಳನ್ನು ಕರೆಸಿ, ಪರಿಶೀಲನಾ ಸಭೆಗಳನ್ನು ಮಾಡಿ, ರೋಗವನ್ನು ಹತೋಟಿಗೆ ತರುವ ಕೆಲಸಗಳನ್ನು ಮಾಡಲಾಗುವುದೆಂದು ನಾನು ಇಲ್ಲಿ ಹೇಳಲಿಚ್ಛಿಸುತ್ತೇನೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಸಚಿವರು ಸಕಾರಾತ್ಮಕವಾದ ಉತ್ತರವನ್ನು ನೀಡಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಹಾಲಿ ಇರುವ ರೋಗಕ್ಕೆ ಇಲಾಖೆಯು ಬೇವಿನ ಹಿನ್ನೆಲೆಯುಳ್ಳ ಎಣ್ಣೆ ಮತ್ತು ಔಷಧಿಗಳನ್ನು ಸಿಂಪಡಿಸುವಂತೆ ಶಿಫಾರಸ್ಸು ಮಾಡುತ್ತಿದೆ. ಇದು ಪರಿಣಾಮಕಾರಿಯಾದ ಔಷಧವಲ್ಲ. ಕೇಂದ್ರೀಯ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ತಲಘಟ್ಟಪುರದ ವಿಜ್ಞಾನಿಗಳು ಮತ್ತು ಇಲಾಖೆಯವರು ಜಂಟಿಯಾಗಿ ಪರಿಣಾಮಕಾರಿಯಾದ ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಒಂದು ವೇಳೆ ಈ ತೋಟಕ್ಕೆ ಔಷಧಿಯನ್ನು ಸಿಂಪಡಿಸಿದಾಗ, ಅದರ ಪಕ್ಕದ ತೋಟದಿಂದ ಹುಳುಗಳು ಇಲ್ಲಿಗೆ ಬರುವ ಸಾಧ್ಯತೆಗಳಿರುವುದರಿಂದ ಯಾವುದೇ ಔಷಧಿಯನ್ನು ಸಿಂಪಡಿಸಬೇಕಾದರೆ, ಸಾಮೂಹಿಕವಾಗಿ ಅಂದರೆ, ಎಲ್ಲಾ ಕಡೆಗಳಲ್ಲೂ ಒಟ್ಟಿಗೆಯಾಗಿ ಸಿಂಪಡಿಸಬೇಕು. ಈ ವಿಚಾರದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯ ಅಗತ್ಯತೆ ಇದೆ. ಆದರೆ, ಇದಕ್ಕೆ ಸಂಬಂಧಪಟ್ಟವರೆಲ್ಲರೂ ಇನ್ನೂ ಜಂಟಿಯಾಗಿ ಸೇರಿ ಅಧ್ಯಯನಗಳನ್ನು ನಡೆಸಿಲ್ಲ. ಸಚಿವರು ತಮ್ಮೊಂದಿಗೆ ಇಲಾಖೆಯ ಆಯುಕ್ತರನ್ನು ಕರೆದುಕೊಂಡು ಬಂದು ಇಲ್ಲಿನ ವಾಸ್ತವ ಸಂಗತಿಗಳನ್ನು ಅವರಿಗೆ ತೋರಿಸಬೇಕು. ಏಕೆಂದರೆ, ಪ್ರಸ್ತುತ ನುಸಿ, ಹೇನು ಮತ್ತು ಸುರುಳಿ ರೋಗ ನಿಯಂತ್ರಣದಲ್ಲಿವೆ ಎಂದು ತಿಳಿಸಿರುತ್ತಾರೆ. ಅವರು ನಮ್ಮ ತಾಲ್ಲೂಕಿಗೆ ಭೇಟಿ ನೀಡಿದಾಗ, ನಮ್ಮಲ್ಲಿ ಇನ್ನೂ ರೋಗವು ನಿಯಂತ್ರಣಕ್ಕೆ ಬಾರದೇ ಇರುವುದನ್ನು ನಾವು ತೋರಿಸುತ್ತೇವೆ. ನುಸಿ ರೋಗದ ಬಗ್ಗೆ ಸಚಿವರು ಉತ್ತರಿಸುವಾಗ ಪ್ರಸ್ತಾಪಿಸಿದರು. ಮೂಲತಃ ಜಪಾನ್ ದೇಶದ 'ಕುನೊಯಿಚಿ' ಎಂಬ ಹೆಸರಿನ ರಾಸಾಯನಿಕ ಔಷಧಿಯು ನುಸಿ ಕೀಟ ನಾಶಕಕ್ಕೆ ಬಹಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದೇ ಕೀಟನಾಶಕವನ್ನು ನಮ್ಮ ಭಾಗದ ರೈತರು ಬಳಸುತ್ತಿದ್ದಾರೆ. ಒಂದು ಲೀಟರ್ ನೀರಿಗೆ ಅರ್ಧ ಮಿಲಿ ಲೀಟರ್‌ನಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೀಟನಾಶಕವನ್ನು ಬೆರೆಸಿ, ಸಿಂಪಡಿಸಿದರೆ, ಅದು ಪರಿಣಾಮಕಾರಿಯಾಗಿರುತ್ತದೆ. ಈ ಔಷಧಿಯ ಬಗ್ಗೆ ಇಲಾಖೆಯು ಹೆಚ್ಚು ಪ್ರಚಾರ ಮಾಡಿ, ರೈತರಿಗೆ ತಿಳುವಳಿಕೆಯನ್ನು ನೀಡಿ, ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಮಾಡಬೇಕು. ಹೀಗೆ ಮಾಡಿದ್ದಲ್ಲಿ ನುಸಿ ರೋಗವನ್ನು ನಿಯಂತ್ರಿಸಬಹುದು. ಸುರುಳಿ ರೋಗವು ನಮ್ಮ ಭಾಗದ ರೈತರ ಬದುಕನ್ನು ಹಾಳುಮಾಡಿ ದುಸ್ತರಗೊಳಿಸಿದೆ. ನಾನು ಕೇಳಿರುವ ಪ್ರಶ್ನೆಗೆ ಸಚಿವರು ಬಹಳ ಸಕಾರಾತ್ಮಕವಾದ ಉತ್ತರವನ್ನು ನೀಡಿದ್ದಾರೆ. ದಯಮಾಡಿ ಸಚಿವರು ಪ್ರಸ್ತಾಪಿಸಿದಂತೆ, ಮುಂದಿನ ವಾರದಲ್ಲಿ ರೇಷ್ಮೆಗೆ ಸಂಬಂಧಪಟ್ಟಂತಿರುವ ವಿವಿಧ ಇಲಾಖಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸದರಿ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲಿಲ್ಲವೆಂದಾದರೆ, ಇಡೀ ರೇಷ್ಮೆ ಉದ್ಯಮವು ಅಧಃಪತನಕ್ಕೆ ಹೋಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಒಂದು ಬಾರಿ ರೇಷ್ಮೆ ತೋಟವು ನಾಶವಾದರೆ, ಜಮೀನನ್ನು ಪುನಃ ಬಳಕೆ ಮಾಡಲು ಒಂದು ವರ್ಷಗಳ ಸಮಯವು ಬೇಕಾಗುತ್ತದೆ. ಹಾಳಾದ ತೋಟವನ್ನು ಅಭಿವೃದ್ಧಿಗೊಳಿಸಲು ಆಗುವುದಿಲ್ಲ. ಇವತ್ತಿನ ದಿವಸ ರೇಷ್ಮೆ ಬೆಳೆಯು ನಮ್ಮ ಭಾಗದ ರೈತರಿಗೆ ಸುಮಾರಾಗಿ ಬದುಕನ್ನು ನೀಡುತ್ತಿದ್ದೆ. ರೇಷ್ಮೆ ಕೃಷಿಯು ಅವರ ಜೀವನ ನಿರ್ವಹಣೆಗೆ ಆಧಾರವಾಗಿದೆ. ಇಂತಹ ಆಧಾರವನ್ನು ಕಸಿಯುವುದು ಬೇಡ. ಹೀಗಾಗಿ ಸರ್ಕಾರವು ತುರ್ತು ಕ್ರಮಗಳನ್ನು ತೆಗೆದುಕೊಂಡು ರೋಗದ ನಿಯಂತ್ರಣ ಮಾಡಬೇಕು.

**ಡಾ|| ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿದಂತೆ, ಪ್ರಸ್ತುತ ನಾವು ಬೇವಿನ ಎಣ್ಣೆಯನ್ನು ಔಷಧಿಯನ್ನಾಗಿ . . .

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಡಿ.ಡಿ.ವಿ.ಪಿ., ಅಥವಾ ನುವಾನ್ ಯಾವುದನ್ನು ಬಳಸಬೇಕು. ಇದರ ಬದಲಾಗಿ ಯಾವ ಕೀಟನಾಶಕವನ್ನು ಬಳಸಬೇಕೆನ್ನುವುದನ್ನು ಇಲಾಖೆಯು ಸ್ಪಷ್ಟಪಡಿಸಿಲ್ಲ.

**ಡಾ|| ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಸದಸ್ಯರು ನಾನು ಹೇಳುವುದನ್ನು ಮೊದಲು ಕೇಳಬೇಕು. Kunoichi ಎನ್ನುವ ಕೀಟನಾಶಕದ ಬೆಲೆಯು ಒಂದು ಲೀಟರ್‌ಗೆ 7,000/- ರೂಪಾಯಿಗಳಾಗುತ್ತವೆ. ಈ ವಿಚಾರದಲ್ಲಿ ನಾನು ತಜ್ಞರನ್ನು ಕರೆಸಿ, ಸಭೆಯನ್ನು ಮಾಡಿದ್ದೇನೆ. ರೋಗಗ್ರಸ್ತ ಸಸಿಯ ಕುಡಿಯನ್ನು ಕತ್ತರಿಸಿ, ಅದರಲ್ಲಿನ ಹುಳುಗಳ ಬಗ್ಗೆ ಸಂಶೋಧನೆ ನಡೆಸಿ, ಈ ವರದಿಯನ್ನು ಅತೀ ಶೀಘ್ರದಲ್ಲಿ ನನಗೆ ಒದಗಿಸುವಂತೆ 8-10 ದಿನಗಳ ಮುಂಚಿತವಾಗಿಯೇ ಸಭೆ ನಡೆಸಿ, ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ರೋಗದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯು ಅಧಿಕಾರಿಗಳಿಗೆ ಇರಲಿ ಅಥವಾ ಬಿಡಲಿ, ಅವರು ಸಂಶೋಧನೆ ಮತ್ತು ಅಭಿವೃದ್ಧಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಾವು ರೈತರ ಮಕ್ಕಳು. ರೇಷ್ಮೆ ಕೃಷಿಗೆ ಶಕ್ತಿಯನ್ನು ತುಂಬಿ, ಇದನ್ನು ರಾಷ್ಟ್ರಮಟ್ಟದಲ್ಲಿ ಮೊದಲನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕೆನ್ನುವ ಆಸೆಯು ನನ್ನಲ್ಲಿದೆ. ಈ ಹಿಂದಿನ ಅಧಿವೇಶನದಲ್ಲಿಯೂ ಸಹ ನಾನು ಇದೇ ಇಲಾಖೆಯ ಮಂತ್ರಿಯಾಗಿದ್ದೆನು. ಆ ಸಂದರ್ಭದಲ್ಲಿ ಒಂದು ಕೆ.ಜಿ. ರೇಷ್ಮೆಯ ಬೆಲೆ 1,500/- ರೂಪಾಯಿಗಳಾಗಿತ್ತು; ಈಗ ಇದರ ಬೆಲೆ 4,000/- ರೂಪಾಯಿಗಳಾಗಿವೆ. ರಾಷ್ಟ್ರಮಟ್ಟದಲ್ಲಿ ಇನ್ನೆಲ್ಲೂ ರೇಷ್ಮೆ ಸೀರೆಗಳ ಬೆಲೆ 2.5–3.0 ಲಕ್ಷ ರೂಪಾಯಿಗಳವರೆಗೆ ಆಗುವುದಿಲ್ಲ... ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರಾಜ್ಯದ ರೇಷ್ಮೆ ಸೀರೆಗಳನ್ನು ತೆಗೆದುಕೊಂಡು ಹೋಗಬೇಕೇನ್ನುವ ಆಸೆಯು ನನಗೆ ಇದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಅವಶ್ಯಕತೆ ಇದೆ. ನಿಮ್ಮಗಳ ಜೊತೆಗೆ ಸೇರಿ, ಶೀಘ್ರದಲ್ಲಿಯೇ ರೋಗಕ್ಕೆ ಪರಿಹಾರವನ್ನು ಕಂಡು ಹಿಡಿದು ರೇಷ್ಮೆ ಕೃಷಿಗೆ ಉತ್ತಮವಾದ ಶಕ್ತಿಯನ್ನು ತುಂಬೋಣವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1493**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಿಸುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಬೇಕು ; ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಮಾಡಕೊಡಬೇಕು ಎನ್ನುವ ಹಿನ್ನಲೆಯಲ್ಲಿ ಸರ್ಕಾರವು ಹೊಸದಾಗಿ 'ಸೇವಾ ಸಿಂಧು' ಪೋರ್ಟಲ್‌ನ್ನು ಪ್ರಾರಂಭಿಸಿರುತ್ತದೆ. ಈ ಪೋರ್ಟಲ್‌ನಲ್ಲಿ ಬಸ್ ಪಾಸ್ ಕುರಿತಾದ ಎಲ್ಲಾ ರೀತಿಯಾದ ಮಾಹಿತಿಯನ್ನು ಒದಗಿಸಿ, ನಂತರದಲ್ಲಿ ಶಾಲಾ ಕಾಲೇಜಿನ ಮುಖ್ಯ ಶಿಕ್ಷಕ ಅಥವಾ ಪ್ರಾಂಶುಪಾಲರಿಂದ ಪತ್ರ ಪಡೆದು, ಆ ನಂತರದಲ್ಲಿ ವಿದ್ಯಾರ್ಥಿಗಳು ಕೆ.ಎಸ್.ಆರ್.ಟಿ.ಸಿ. ಡಿಪೋಗಳಲ್ಲಿ ಪಾಸ್‌ನ್ನು ಪಡೆಯುವ ವ್ಯವಸ್ಥೆಯನ್ನು ಸರ್ಕಾರವು ಮಾಡಿದೆ. ವಿದ್ಯಾರ್ಥಿಗಳಿಗೆ ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ಸರ್ಕಾರವು ಈ ವ್ಯವಸ್ಥೆಯನ್ನು ಮಾಡಿದೆ. ಗ್ರಾಮೀಣ ಪ್ರದೇಶದಲ್ಲಿನ ವಿದ್ಯಾರ್ಥಿಗಳಿಗೆ ಸೇವಾ ಸಿಂಧು ಪೋರ್ಟಲ್‌ನ್ನು ಪತ್ತೆ ಮಾಡುವುದೇ ಬಹಳ ಕಷ್ಟವಾಗಿದೆ. ಈ ಪೋರ್ಟಲ್‌ನ್ನು ಬಳಸಿಕೊಳ್ಳುವಂತಹ ಫೋನುಗಳು ಎಷ್ಟು ವಿದ್ಯಾರ್ಥಿಗಳ ಅಥವಾ ಪೋಷಕರ ಬಳಿ ಇದೆ? ಮಲೆಮಹದೇಶ್ವರ ಬೆಟ್ಟ, ನೆರೆಯ ಕೇರಳ ರಾಜ್ಯದ ಗಡಿರೇಖೆಯನ್ನು ಹೊಂದಿಕೊಂಡಂತಿರುವ ಹೆಚ್.ಡಿ.ಕೋಟೆ, ಚಿಕ್ಕಮಗಳೂರಿನ ಗುಡ್ಡಗಾಡು ಪ್ರದೇಶಗಳು ನನ್ನ ಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತವೆ. ಇಂತಹ ಗ್ರಾಮೀಣ ಭಾಗಗಳಲ್ಲಿ ಯಾವ ಪೋರ್ಟಲ್ ಅಥವಾ ಆಪ್‌ಗಳು ಕೆಲಸ ಮಾಡುವುದಿಲ್ಲ. ವಿದ್ಯಾರ್ಥಿಗಳು ಬಸ್ ಪಾಸುಗಳನ್ನು ಪಡೆಯಲು ಆಧಾರ್‌ಕಾರ್ಡ್, ಜಾತಿ ದೃಢೀಕರಣ ಪತ್ರ, ಶಾಲಾ ದಾಖಲಾತಿಗಳ ರಸೀದಿ, ಫೋಟೋ ಇತ್ಯಾದಿಗಳ ಮಾಹಿತಿಯೊಂದಿಗೆ ಕಂಪ್ಯೂಟರ್ ಸೆಂಟರ್‌ಗಳಿಗೆ ಹೋಗಬೇಕು. ಅದಕ್ಕೂ ಮೊದಲಿಗೆ ವಿದ್ಯಾರ್ಥಿಗಳು ಸರದಿ ಸಾಲಿನಲ್ಲಿ ನಿಂತುಕೊಳ್ಳಬೇಕು. 'ಸರ್ವರ್ ಡೌನ್ ಆಗಿದೆ; ಈಗ ಮಾಡುವುದಕ್ಕೆ ಆಗುವುದಿಲ್ಲ' ಎಂದು ಕಂಪ್ಯೂಟರ್ ಸೆಂಟರ್‌ನವರು ತಿಳಿಸಿದರೆ, ವಿದ್ಯಾರ್ಥಿಗಳು ಪುನಃ ಒಂದೆರೆಡು ಗಂಟೆಗಳ ಕಾಲ ಕಾಯಬೇಕು ಅಥವಾ ಮರುದಿನ ಕಂಪ್ಯೂಟರ್ ಸೆಂಟರ್‌ಗೆ ಪುನಃ ಹೋಗಬೇಕು. ಕೋರಿರುವ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕಂಪ್ಯೂಟರ್ ಸೆಂಟರ್‌ನವರಿಗೆ ನಗರ ಪ್ರದೇಶಗಳಲ್ಲಿ 100/- ರೂಪಾಯಿಗಳನ್ನು ಮತ್ತೂ ಗ್ರಾಮೀಣ ಭಾಗದಲ್ಲಿ 150/- ರೂಪಾಯಿಗಳನ್ನು ವಿದ್ಯಾರ್ಥಿಗಳು ನೀಡಬೇಕು. ಇದಾದ ನಂತರ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ತೆರಳಿ, ಅಲ್ಲಿನ ಮುಖ್ಯ ಶಿಕ್ಷಕರು ಅಥವಾ ಪ್ರಾಂಶುಪಾಲರುಗಳಿಂದ ದೃಢೀಕರಣವನ್ನು ಪಡೆದುಕೊಂಡು ಅದನ್ನು ಕೆ.ಎಸ್.ಆರ್.ಟಿ.ಸಿ., ಡಿಪೋಗೆ ತೆರಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸಬೇಕು. ಇಷ್ಟೆಲ್ಲಾ ಪ್ರಕ್ರಿಯೆಯಗಳಾದರೂ ಸಂಸ್ಥೆಯು ತಕ್ಷಣದಲ್ಲಿಯೇ ವಿದ್ಯಾರ್ಥಿಗಳಿಗೆ ಪಾಸ್‌ನ್ನು ವಿತರಿಸುವುದಿಲ್ಲ. ವಿದ್ಯಾರ್ಥಿಗಳಿಂದ ಹಣ ಪಡೆದು ಒಂದು ವಾರಗಳ ನಂತರ ಸಂಸ್ಥೆಯು ಪಾಸ್‌ನ್ನು ವಿತರಿಸುತ್ತದೆ. ಇಲಾಖೆಯು ವಿದ್ಯಾರ್ಥಿಗಳಿಗೆ ಪಾಸ್ ವಿತರಣೆಯನ್ನು ಸರಳೀಕರಣ ಮಾಡಲು ಹೋಗಿ ಬಹಳಷ್ಟು ಸಮಸ್ಯೆಗಳಾಗಿವೆ. ಇವತ್ತಿನ ದಿವಸ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಬೆಂಗಳೂರು, ಮೈಸೂರು ಅಥವಾ ಮಂಗಳೂರು ಇಂತಹ ನಗರ ಪ್ರದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ಬಂದಿದ್ದಾರೆ. ಅವರುಗಳು ಪೋಷಕರ, ಸಂಬಂಧಿಕರ, ವಿದ್ಯಾರ್ಥಿ ನಿಲಯ ಅಥವಾ ಬೇರೆ ಕಡೆಗಳಲ್ಲಿ ವಾಸವಾಗಿದ್ದಾರೆ. ಇಂತಹ ವಿದ್ಯಾರ್ಥಿಗಳು ಪಾಸ್‌ನ್ನು ಪಡೆಯಲು ವಾಸದ ದೃಢೀಕರಣ ಪತ್ರವನ್ನು ನೀಡಬೇಕು. ಯಾವುದೇ ಮಗು ಬೇರೆ ಊರಿನಲ್ಲಿ ಸಂಬಂಧಿಕರ ಮನೆಗಳಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದರೆ, ವಾಸದ ದೃಢೀಕರಣಕ್ಕಾಗಿ ನೋಟರಿಯಿಂದ ಅಫಿಡವಿಟ್‌ನ್ನು ಮಾಡಿಸಿ ಕೊಡಬೇಕು. ಆಗ ಅಫಿಡವಿಟ್‌ನ್ನು ಮಾಡಿಕೊಡಲು ನೋಟರಿಯವರಿಗೆ ಹಣ ನೀಡಬೇಕು. ಸರ್ಕಾರವು ಹೀಗೆ ಪಾಸ್ ವಿತರಣಾ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಹೋಗಿದ್ದರಿಂದ ವಿದ್ಯಾರ್ಥಿಗಳಿಗೆ ಪಾಸ್ ಪಡೆಯಲು ಬಹಳವಾಗಿ ಸಮಸ್ಯೆಯಾಗಿದೆ. ಹೀಗಾಗಿ ದಯಮಾಡಿ, ಸರ್ಕಾರವು ಈ ಹಿಂದೆ ಚಾಲ್ತಿಯಲ್ಲಿದ್ದ ವ್ಯವಸ್ಥೆಯಲ್ಲಿಯೇ ಏನಾದರೂ ಮಾಡುವುದಕ್ಕಾಗುತ್ತದೆಯೇ. ಸರ್ಕಾರವು ಸೇವಾ ಸಿಂಧು ಪೋರ್ಟಲ್ ಎನ್ನುವ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಿರುಕುಳವನ್ನು ನೀಡಿದಂತಾಗಿದೆ. ಈ ವ್ಯವಸ್ಥೆಯನ್ನು ಸರಳೀಕರಣಗೊಳಿಸಲು ಸರ್ಕಾರವು ಯಾವುದಾದರೂ ತೀರ್ಮಾನವನ್ನು ತೆಗೆದುಕೊಳ್ಳುತ್ತದೆಯೇ ಎಂದು ಕೇಳಬಯಸುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, 2017 ನೇ ಸಾಲಿನಿಂದ ರಾಜ್ಯದ ಎಸ್.ಸಿ., ಮತ್ತು ಎಸ್.ಟಿ., ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ಪಾಸ್‌ಗಳನ್ನು ನೀಡುವ ವ್ಯವಸ್ಥೆಯು ಚಾಲ್ತಿಯಲ್ಲಿದೆ. ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಾಯುವ್ಯ ರಸ್ತೆ ಸಾರಿಗೆ ನಿಗಮ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಸಂಸ್ಥೆಗಳಿಂದ ಬಸ್ ಪಾಸ್ ನೀಡುವ ವ್ಯವಸ್ಥೆಗಳಿವೆ. ಈ ಹಿಂದೆ ಪಾಸ್ ಪಡೆಯಲು ಮಕ್ಕಳಿಗೆ ಸಮಸ್ಯೆಯಾಗುತ್ತಿತ್ತು ಎನ್ನುವ ಕಾರಣದಿಂದ ಹಾಗೂ ಇವತ್ತಿನ ದಿವಸ ಮಕ್ಕಳಿಗೆ ಪಾಸ್ ಪಡೆಯಲು ಅನುಕೂಲವಾಗಬೇಕೆಂದು ಪೋರ್ಟಲ್‌ಗಳ ಮುಖೇನ ಬಸ್ ಪಾಸ್‌ಗಳನ್ನು ಪಡೆಯುವ ವ್ಯವಸ್ಥೆಗಳನ್ನು ಸರ್ಕಾರವು ಮಾಡಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1009)24.09.2021/11.10/ಹೆಚ್‌ವಿ:ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಶ್ರೀರಾಮುಲು (ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಸುಮಾರು ಒಂದು ಲಕ್ಷ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಉಚಿತವಾಗಿ ಬಸ್‌ಪಾಸ್ ಪಡೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಉಲ್ಲೇಖ ಮಾಡಿದಂತೆ ಸರ್ವರ್ ಡೌನ್ ಆದಂತಹ ಸಮಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಕಷ್ಟವಾಗುತ್ತದೆ. ಶಿಕ್ಷಣ ಇಲಾಖೆಯಲ್ಲಿ SAT ವ್ಯವಸ್ಥೆ ಇಲ್ಲದಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬಸ್‌ಪಾಸ್‌ನ ಅನುಕೂಲತೆಯನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಮತ್ತು ಫೋಟೋಗಳು ಅಪ್‌ಲೋಡ್ ಆಗದಿರುವ ಹಿನ್ನೆಲೆಯಲ್ಲಿ ಮಕ್ಕಳಿಗೆ ತೊಂದರೆಯಾದಾಗ, ಅಧಿಕಾರಿಗಳೊಂದಿಗೆ ಚರ್ಚಿಸಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಸರ್ವರ್ ಡೌನ್ ಆದ ಸಂದರ್ಭದಲ್ಲಿ ಮಕ್ಕಳಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಿರುವಂತೆ ವ್ಯವಸ್ಥೆಯನ್ನು ಮಾಡುತ್ತೇವೆ. ಈ ಹಿಂದೆ ಯಾವ ವಿದ್ಯಾರ್ಥಿಗಳು ನೇರವಾಗಿ ಹೋಗಿ ಬಸ್‌ಪಾಸ್‌ಗಳನ್ನು ತೆಗೆದುಕೊಂಡಿದ್ದಾರೆ ಅದನ್ನು ಸಹ ಪರಿಶೀಲಿಸಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸೇವಾ ಸಿಂಧು ವ್ಯವಸ್ಥೆ ಜಾರಿಗೆ ಬಂದ ಮೇಲೆ ವಿದ್ಯಾರ್ಥಿಗಳು ಬಸ್‌ಪಾಸ್ ತೆಗೆದುಕೊಳ್ಳುವುದಕ್ಕೆ ಸೇವಾ ಸಿಂಧು ಕೇಂದ್ರಗಳಿಗೆ ಅಲೆಯುವುದರಿಂದ ಅವರ ಸಮಯ ವ್ಯರ್ಥವಾಗುತ್ತಿದೆ. ಹಿಂದಿನ ವ್ಯವಸ್ಥೆಯನ್ನೇ ಮುಂದುವರೆಸಿದರೆ ಬಹಳ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಸೇವಾ ಸಿಂಧು ಕೇಂದ್ರಗಳನ್ನು ತೆರೆದು ಆ ಮೂಲಕ ಯಾವುದೋ ಕಂಪನಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೋದರೆ, ವಿದ್ಯಾರ್ಥಿಗಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಬಸ್‌ಪಾಸ್ ವಿತರಿಸಲು ಸೂಕ್ತ ದಾಖಲಾತಿಗಳನ್ನು ಕೇಳುತ್ತಿರುವುದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಈ ಸೇವಾ ಸಿಂಧು ಕೇಂದ್ರದಲ್ಲಿ ಒಂದಲ್ಲ ನಾಲ್ಕಾರು ಕಡೆಗಳಲ್ಲಿ ಹಣ ತುಂಬಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಅಂಶವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಉದಾಹರಣೆಗೆ ಒಬ್ಬ ವಿದ್ಯಾರ್ಥಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಒಂದು ಬಸ್‌ಪಾಸ್ ತೆಗೆದುಕೊಳ್ಳುತ್ತಾನೆ. ಆ ವಿದ್ಯಾರ್ಥಿ 9ನೇ ತರಗತಿಗೆ ಉತ್ತೀರ್ಣಗೊಂಡಾಗ ಪುನಃ ಹೊಸದಾಗಿ ಬಸ್‌ಪಾಸ್ ತೆಗೆದುಕೊಳ್ಳುವ ಪ್ರಕ್ರಿಯೆಯನ್ನೇ ಅನುಸರಿಸಿ ಸೇವಾ ಸಿಂಧು ಕೇಂದ್ರದಿಂದ ಪಡೆಯಬೇಕೆಂದರೆ ಬಹಳ ಕಷ್ಟವಾಗುತ್ತದೆ. ಮುಖ್ಯ ಶಿಕ್ಷಕರು 9ನೇ ತರಗತಿಗೆ ವಿದ್ಯಾರ್ಥಿ ದಾಖಲಾಗಿದ್ದಾನೆಂದು ಪ್ರಮಾಣ ಪತ್ರ ಕೊಟ್ಟ ಮೇಲೂ ವಿದ್ಯಾರ್ಥಿಯ ವಿಳಾಸ ಬದಲಾವಣೆ ಆಗದಿದ್ದರೆ, ಹಳೆಯ ಬಸ್‌ಪಾಸ್ ಅನ್ನೇ ಮುಂದುವರಿಸಬೇಕಾಗುತ್ತದೆ. ಅದನ್ನು ಬಿಟ್ಟು ಸೇವಾ ಸಿಂಧು ಕೇಂದ್ರಕ್ಕೆ ಹೋಗಿ ಬಸ್‌ಪಾಸ್ ಮಾಡಿಸಿಕೊಳ್ಳಬೇಕಾದರೆ, ಪುನಃ 150 ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಈ ಅಂಶವನ್ನು ಮಾನ್ಯ ಸಚಿವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ನಗರಪ್ರದೇಶದಲ್ಲಿರುವ ಎಲ್ಲ ಖಾಸಗಿ ಶಾಲೆಗಳು ಶಾಲಾ ಬಸ್‌ಗಳ ಸಂಚಾರವನ್ನು ಆರಂಭಿಸಿದ್ದಾರೆ. ಶ್ರೀಮಂತರ ಮಕ್ಕಳು ಹಣ ಕಟ್ಟಿ ಈ ಶಾಲಾ ವಾಹನದಲ್ಲಿಯೇ ಓಡಾಡುತ್ತಾರೆ. ಆದರೆ, ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಕ್ಕಳಿಗೆ ಸಂಪೂರ್ಣವಾಗಿ ಉಚಿತ ಬಸ್‌ಪಾಸ್ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಇದು ಬಹಳ ಉತ್ತಮವಾದ ಕೆಲಸವಾಗಿದೆ, ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳಿಗೂ ಕೂಡ ಉಚಿತ ಬಸ್‌ಪಾಸ್ ವಿತರಿಸುವ ಬಗ್ಗೆ ಚಿಂತನೆ ಮಾಡುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಯಲ್ಲಿ SAT ನಂಬರ್ ಇರುವಂತಹ ವಿದ್ಯಾರ್ಥಿಗಳು ಕೇವಲ ಫೋಟೋವನ್ನು ಮಾತ್ರ ಅಪ್‌ಲೋಡ್ ಮಾಡಬೇಕಾಗುತ್ತದೆ. ಆಕಸ್ಮಿಕವಾಗಿ ಯಾವ ವಿದ್ಯಾರ್ಥಿಗೆ SAT ನಂಬರ್ ಇರುವುದಿಲ್ಲ, ಅವರು ಸೇವಾ ಸಿಂಧು ಕೇಂದ್ರಕ್ಕೆ ಹೋಗಿ ದಾಖಲಾತಿಗಳನ್ನು ನೀಡಿ ಬಸ್‌ಪಾಸ್ ಅನ್ನು ಪಡೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಮಾನ್ಯ ಸದಸ್ಯರು ಗ್ರಾಮೀಣ ಪ್ರದೇಶದ ಮಕ್ಕಳಿಗೆ ತೊಂದರೆಯಾಗುತ್ತಿದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಇದನ್ನು ಸರಿಪಡಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಬಸ್‌ಪಾಸ್ ವಿತರಿಸುವಂತಹ ಚಿಂತನೆ ಸರ್ಕಾರದಲ್ಲಿಯೇ ಎನ್ನುವ ನನ್ನ ಉಪ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನೇ ನೀಡಿಲ್ಲ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ. ತಾವು ಪ್ರಶ್ನೆ ಕೇಳುವುದಕ್ಕೆ ಪ್ರಾರಂಭ ಮಾಡಿ ಎಷ್ಟು ಸಮಯವಾಗಿದೆ? ಎಷ್ಟು ಬಾರಿ ತಾವು ಉಪ ಪ್ರಶ್ನೆಗಳನ್ನು ಕೇಳುವುದು? ತಮ್ಮದು ಪ್ರತಿದಿನ ನ್ಯಾಯ ಮಾಡುವುದೇ ಆಗಿದೆ. ಈ ರೀತಿಯಾದರೆ, ಸದನ ನಡೆಸುವುದು ಹೇಗೆ?

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಉಪ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನೇ ಕೊಟ್ಟಿಲ್ಲ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್‌ಪಾಸ್ ಕೊಡುವ ಚಿಂತನೆ ಸರ್ಕಾರಕ್ಕೆ ಇದ್ದರೆ ಇದೆ ಎಂದು ಉತ್ತರ ಹೇಳಲಿ, ಇಲ್ಲದಿದ್ದರೆ ಇಲ್ಲವೆಂದು ಹೇಳಲಿ. ಮಾನ್ಯ ಸಚಿವರು ಉತ್ತರವನ್ನು ಹೇಳುವುದಕ್ಕೆ ತಯಾರಿದ್ದಾರೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಒಮ್ಮೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ತಮಗೆ ಅವಕಾಶವನ್ನು ನೀಡಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ. ಪದೇಪದೇ ಉಪ ಪ್ರಶ್ನೆಗಳನ್ನು ಕೇಳಿದರೆ ಹೇಗೆ? ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದಂತಹ ಮಕ್ಕಳಿಗೆ ಯಾವ ರೀತಿಯಲ್ಲಿ ಉಚಿತ ಬಸ್‌ಪಾಸ್ ಅನ್ನು ವಿತರಿಸಲಾಗುತ್ತಿದೆ ಅದೇ ರೀತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್ ಅನ್ನು ವಿತರಿಸಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಕೋವಿಡ್-19 ಮಹಾಮಾರಿ ಇಡೀ ವಿಶ್ವವನ್ನೇ ಆವರಿಸಿಕೊಂಡ ನಂತರ ರಾಜ್ಯಗಳು ಯಾವ ರೀತಿಯಲ್ಲಿ ಆರ್ಥಿಕ ಸಂಕಷ್ಟಕ್ಕೀಡಾಗಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಅದರ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಈ ವಿಚಾರವನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1450+1419**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರುದ್ರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಾನು ಮತ್ತು ಮಾನ್ಯ ಕೆ.ಹರೀಶ್‌ಕುಮಾರ್‌ರವರು ಜಂಟಿಯಾಗಿ ಕೇಳುತ್ತಿದ್ದೇವೆ. ಮೊನ್ನೆ ಫೆಬ್ರವರಿ ತಿಂಗಳಿನಲ್ಲಿ ನಡೆದಂತಹ ಅಧಿವೇಶನದಲ್ಲಿ ಮಾನ್ಯ ಹರೀಶ್‌ಕುಮಾರ್‌ರವರು ಈ ಪ್ರಶ್ನೆಯನ್ನು ಕೇಳಿದ್ದರು. ಅಂದಿನ ಸಚಿವರಾಗಿದ್ದ ಮಾನ್ಯ ನಾರಾಯಣಗೌಡರು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದರು. ಅವರು ನೀಡಿದ ಉತ್ತರದಲ್ಲಿ, 'ನಾಲ್ಕು ಜನ ಸದಸ್ಯರನ್ನು ಮಂಡಲಿಗೆ ನೇಮಕ ಮಾಡುವ ಬಗ್ಗೆ ಶೀಘ್ರವಾಗಿ ತೀರ್ಮಾನಿಸಲಾಗುವುದು' ಎನ್ನುವ ಆಶ್ವಾಸನೆಯನ್ನು ನೀಡಿದ್ದರು. ನಂತರ ಇಲಾಖೆಯಿಂದ ಮಲೆನಾಡು ಅಭಿವೃದ್ಧಿ ಮಂಡಳಿಗೆ ಈ ನಾಲ್ಕು ಜನರನ್ನು ಏತಕ್ಕೋಸ್ಕರ ನೇಮಕ ಮಾಡಿಕೊಳ್ಳಬೇಕೆನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿ ಕಾಗದವನ್ನು ಬರೆದಿದ್ದಾರೆ. ಅಲ್ಲಿಂದ ಉತ್ತರ ಕೂಡ ಬಂದಿದೆ. ಸದಸ್ಯರುಗಳು ಕೊಟ್ಟಂಥ ಸಲಹೆ ಸೂಚನೆಗಳ ಮೇರೆಗೆ ಆ ಮಂಡಳಿ ಕಾರ್ಯನಿರ್ವಹಿಸುತ್ತದೆ. ಈ ಹಿನ್ನೆಲೆಯಲ್ಲಿ 'ಸಂಬಂಧಪಟ್ಟ ಕ್ಷೇತ್ರದಲ್ಲಿರುವಂತಹ ಎಲ್ಲ ಶಾಸಕರು, ಸಂಸದರು, ರಾಜ್ಯಸಭಾ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು' ಎನ್ನುವ ಪದ ಇರುವುದರಿಂದ ಇದರ ಬಗ್ಗೆ ತಕರಾರನ್ನು ತೆಗೆದಿದ್ದರು. ಆಗ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಮುಂದೆ ಈ ಬಗ್ಗೆ ಪ್ರಶ್ನೆ ಬಂದಾಗ, ಸಮಿತಿಯು ಒಂದು ನಿರ್ಣಯವನ್ನು ಮಾಡಿ 'ಇವರುಗಳನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ತೆಗೆದುಕೊಳ್ಳಬೇಕು' ಎಂದು ತಿಳಿಸಿದೆ. ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಆಯ್ಕೆಗೊಂಡಿರುವ ನಾನು, ಶ್ರೀ ಕೆ.ಹರೀಶ್‌ಕುಮಾರ್‌ವರು, ಶ್ರೀ ಪ್ರತಾಪಸಿಂಹ ನಾಯಕ್‌ರವರು ಹಾಗೂ ಶ್ರೀಮತಿ ವೀಣಾ ಅಚ್ಚಯ್ಯನವರು ನಾವೆಲ್ಲರೂ ಆ ಮಂಡಳಿಗೆ ಸದಸ್ಯರಾಗುವುದಕ್ಕೆ ಅರ್ಹರಿದ್ದೇವೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮುನಿರತ್ನ:-** ಸನ್ಮಾನ್ಯ ಸಭಾಪತಿಯವರೇ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧಿನಿಯಮ 1991 ಮತ್ತು ನಿಯಮಗಳು 1993ರ ಅಧ್ಯಾಯ-2 ಪ್ರಕರಣ 3(3)(ಎ) ಅನ್ನು ತಿದ್ದುಪಡಿ ಮಾಡಲು ಮಂಡಳಿಯು ನಿರ್ಣಯವನ್ನು ಕೈಗೊಂಡಿದೆ. ಸದರಿ ಪ್ರಸ್ತಾವನೆಗೆ ಸಹಮತಿಯನ್ನು ಕೋರಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಕಳುಹಿಸಿಕೊಡಲಾಗಿದೆ. ಅದೇ ರೀತಿಯಲ್ಲಿ 31ನೇ ಆಗಸ್ಟ್, 2020ರಂದು ಕಾನೂನು ಇಲಾಖೆಯ ಸಹಮತಿಗೆ ಈಗಾಗಲೇ ಕಡತವನ್ನು ಸಲ್ಲಿಸಲಾಗಿದೆ.

**ಶ್ರೀ ಎಸ್.ರುದ್ರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಕಾನೂನು ಇಲಾಖೆಯಲ್ಲಿ ಅದು ಬಹಳಷ್ಟು ದಿನಗಳಿಂದ ಪೆಂಡಿಂಗ್‌ನಲ್ಲಿದೆ. ಆದಷ್ಟು ಬೇಗ ಕ್ಲಿಯರ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮುನಿರತ್ನ:-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಕಡತವನ್ನು ಕಾನೂನು ಇಲಾಖೆಯ ಸಹಮತಿಗೆ ಸಲ್ಲಿಸಲಾಗಿದೆ. ಅಲ್ಲಿಂದ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1566**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯಸಿಂಗ್:-** ಸನ್ಮಾನ್ಯ ಸಭಾಪತಿಯವರೇ, 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಕೇವಲ ಅಧ್ಯಕ್ಷರನ್ನು ಮಾತ್ರ ನೇಮಿಸಿ, ಪೂರ್ಣ ಪ್ರಮಾಣದ ಆಡಳಿತ ಮಂಡಳಿ ರಚಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಪೂರ್ಣ ಪ್ರಮಾಣದ ಆಡಳಿತ ಮಂಡಳಿಯನ್ನು ಯಾವಾಗ ರಚನೆ ಮಾಡಲಾಗುವುದು?' ಎನ್ನುವ ನನ್ನ ಪ್ರಶ್ನೆಗೆ 'ಶೀಘ್ರದಲ್ಲಿಯೇ ಉಳಿದ ಸದಸ್ಯರನ್ನು ನೇಮಕ ಮಾಡಲಾಗುತ್ತದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಶೀಘ್ರದಲ್ಲಿಯೇ ಎಂದರೆ, ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ಅಥವಾ ಆರು ತಿಂಗಳು ಎಷ್ಟು ಕಾಲಾವಧಿಯೊಳಗೆ ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಮುನಿರತ್ನ:-** ಸನ್ಮಾನ್ಯ ಸಭಾಪತಿಯವರೇ, ನಿನ್ನೆಯ ದಿನ ವಿಧಾನಸಭೆಯಲ್ಲಿ ಇದೇ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣವಾಗಿರುವ ಮಾಹಿತಿಯನ್ನು ಸಭೆಗೆ ಕೊಟ್ಟಿದ್ದಾರೆ. ಮುಂದಿನ 10 ದಿನಗಳೊಳಗಾಗಿ ಸದಸ್ಯರುಗಳನ್ನು ನೇಮಕ ಮಾಡಲಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯಲ್ಲಿ ತಿಳಿಸಿದ್ದಾರೆ.

(ಮುಂದುವರಿದಿದೆ)

(1010) 24-9-2021 11.20 PK(DS) MD

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ವಾರ ಗುಲ್ಬರ್ಗಾಕ್ಕೆ ಬಂದಿದ್ದರು. ಅಲ್ಲಿ ೧೫೦೦ ಕೋಟಿಯಿಂದ ೩,೦೦೦ ಕೋಟಿ ರೂಪಾಯಿಗಳ ಅನುದಾನ ಕೊಡುತ್ತೇವೆಂದು ಹೇಳಿದ್ದಾರೆ. ಈ ಕೆಲಸ ಆಗಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತಿದ್ದೇನೆ. ಆಡಳಿತ ಮಂಡಳಿಯನ್ನು ಬೇಗ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಮುನಿರತ್ನ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಕಲ್ಯಾಣ ಕರ್ನಾಟಕದ ಬಗ್ಗೆ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಹಿಂದೆ ಕೊಟ್ಟಿರುವಂತಹ ೧೫೦೦ ಕೋಟಿ ರೂಪಾಯಿಗಳ ಅನುದಾನ ಇತ್ತು ಅದರ ಜೊತೆಯಲ್ಲಿ ಮತ್ತೆ ಹೆಚ್ಚುವರಿಯಾಗಿ, ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಲಿ, ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕಡೆ ಹೆಚ್ಚು ಗಮನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದರ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ. ಕಲ್ಯಾಣ ಕರ್ನಾಟಕವೆಂದು ನಾವೇನು ಕರೆಯುತ್ತೇವೆಯೋ ಆ ಹೆಸರನ್ನು ಉಳಿಸುವುದಕ್ಕೆ ಮತ್ತು ಕಲ್ಯಾಣ ಕರ್ನಾಟಕಕ್ಕೆ ಒಳ್ಳೆಯ ಹೆಸರನ್ನು ತರುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸಂಪೂರ್ಣವಾದ ವಿವರವನ್ನು ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1581**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಇವತ್ತು ಅಧಿವೇಶನದ ಕೊನೆ ದಿವಸ ಒಂದು ಚುಕ್ಕೆ ಗುರುತಿನ ಪ್ರಶ್ನೆ ಬಂದಿದೆ, ನನ್ನ ಅದೃಷ್ಟ ಖುಲಾಯಿಸಿದೆ ಎಂದು ನಾನು ಬಹಳ ಖುಷಿಪಟ್ಟಿದ್ದೆ. ಮಾನ್ಯ ಸಚಿವರು ಉತ್ತರ ಕೊಟ್ಟಿರುವುದನ್ನು ನೋಡಿದರೆ ಚುಕ್ಕೆ ಗುರುತಿನ ಪ್ರಶ್ನೆ ಬದಲು ಹಾಗೇ ಇದ್ದಿದ್ದರೆ ಉತ್ತಮ ಎಂದು ಅನಿಸುತ್ತಿದೆ. ಮಾನ್ಯ ಸಚಿವರು ದುರಾದೃಷ್ಟಕರವಾದ ಉತ್ತರವನ್ನು ಕೊಟ್ಟಿದ್ದಾರೆ. ಈ ಹಿಂದೆ ಪರಿಶಿಷ್ಟ ಜಾತಿ/ಪಂಗಡದವರಿಗಾಗಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನಾಲಯದಲ್ಲಿ ಇದ್ದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿದವರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಅದರ ಸಂಖ್ಯೆಯನ್ನು ಉತ್ತರದಲ್ಲಿ ಕೊಟ್ಟಿಲ್ಲ. ರಾಷ್ಟ್ರೀಯ ಉದ್ಯೋಗ ಸೇವೆ ಹಾಗೂ ಉದ್ಯೋಗ ಕೇಂದ್ರಗಳೊಂದಿಗೆ ಸಮನ್ವಯ ಸಾಧಿಸುವ ಕರ್ತವ್ಯವನ್ನು ನಿಗದಿಪಡಿಸಲಾಗಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಅದು ಏನೇನು ಕರ್ತವ್ಯ ಮಾಡುತ್ತಿದೆ ಎಂಬುದನ್ನು ಮಾನ್ಯ ಸಚಿವರು ಹೇಳಲಿ? ಆ ಪೈಕಿ ಉದ್ಯೋಗ ದೊರೆತ ಅಭ್ಯರ್ಥಿಗಳ ವಿವರಗಳೇನು ಎಂದು ಪ್ರಶ್ನೆ ಕೇಳಿದರೆ, ಉತ್ತರದಲ್ಲಿ ಅದರ ವಿವರಗಳೇನು ಕೊಟ್ಟಿಲ್ಲ. ಅಭ್ಯರ್ಥಿಗಳ ಪಟ್ಟಿಯನ್ನು ಮೊದಲು ಕಳುಹಿಸಲಾಗುತ್ತಿತ್ತು, ಆದರೆ ಈಗಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಹಾಗಾದರೆ ರಾಷ್ಟ್ರೀಯ ಸಮನ್ವಯ ಸಮಿತಿ ಏನು ಕೆಲಸ ಮಾಡುತ್ತಿದೆ ಎನ್ನುವುದಾದರೂ ಹೇಳಲಿ? ವೆಬ್‌ಸೈಟ್‌ಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಪ್ರಕ್ರಿಯೆ ಪ್ರಾರಂಭವಾಯಿತು, ಉದ್ಯೋಗ ಮತ್ತು ತರಬೇತಿ ಇಲಾಖೆಯ ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಉದ್ಯೋಗ ಪಡೆಯಬೇಕೆಂಬುದು ಕಡ್ಡಾಯವಾಗಿರುವುದಿಲ್ಲ. ಈ ಕಾರಣದಿಂದ ನೋಂದಣಿ ಪ್ರಕ್ರಿಯೆಯನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಲ್ಲಿಸಲಾಗಿತ್ತು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಪಿ.ಯು.ಸಿ., ಬಿಎ ಓದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಗೋವಾದಲ್ಲೋ ಅಥವಾ ಮಂಗಳೂರಿಗೋ ದುಡಿಯುವುದಕ್ಕೆ ಹೋಗುತ್ತಾರೆ. ಅವರಿಗೆ ವೆಬ್‌ಸೈಟ್ ವ್ಯವಸ್ಥೆ, ಫೋನ್‌ಗಳು ಎಲ್ಲಿಂದ ತರಬೇಕು? ಅದಕ್ಕೆ ಮೊದಲೇನು ಉದ್ಯೋಗ ವಿನಿಮಯ ಕೇಂದ್ರ ಇತ್ತು ಅದನ್ನು ನಿಲ್ಲಿಸುವುದು ಬಿಟ್ಟು ಮತ್ತೆ ಚಾಲನೆ ಮಾಡಬೇಕೆಂದು ನಾನು ಕೇಳಬಯಸುತ್ತಿದ್ದೇನೆ. ಉದ್ಯೋಗ ಕೋಶ ಎಂಬ ಹೆಸರಿನ ಬದಲಾಗಿ ಮೀಸಲಾತಿ ಜಾರಿ ಕೋಶ ಎಂದು ಮರುನಾಮಕರಣ ಮಾಡಲಾಯಿತು, ಪ್ರಸ್ತುತ ವಿವಿಧ ಇಲಾಖೆಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಮೊದಲು ಉದ್ಯೋಗ ವಿನಿಮಯ ಕೇಂದ್ರ ಇತ್ತು, ಅದರಲ್ಲಿ ನೌಕರಿಗೆ ಅರ್ಜಿ ಹಾಕದಿದ್ದರೂ ಅವರ ಮನೆಗೆ interview card ಹೋಗುತ್ತಿತ್ತು. ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದವರಿಗೆ Peon or Attender ಇಂತಹ ಕೆಲಸವಾದರೂ ಸಿಗುತ್ತಿತ್ತು. ಇದರ ಬಗ್ಗೆ ಉತ್ತರದಲ್ಲೇನು ಇಲ್ಲ. ನಾನು ಕೇಳಿರುವ ಪ್ರಶ್ನೆಗೆ ಒಂದಕ್ಕೂ ಉತ್ತರ ಕೊಟ್ಟಿಲ್ಲ. ಇದನ್ನು ಪುನಃ ಪ್ರಾರಂಭಿಸುವ ಅವಶ್ಯಕತೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರವನ್ನು ಪ್ರಾರಂಭಿಸಿದರೆ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದವರು ಸಣ್ಣಪುಟ್ಟ ನೌಕರಿಗಾದರೂ ಹೋಗುತ್ತಾರೆ. ಅವರಿಗೆ ಅವಕಾಶ ಮಾಡಿಕೊಡಿ. ಇಂತಹ ಉತ್ತರ ಈ ಸರ್ಕಾರದಿಂದ ನಿರೀಕ್ಷೆ ಮಾಡಿರಲಿಲ್ಲ. ಒಂದು ಪ್ರಶ್ನೆಗೆ ಒಂದು ಉತ್ತರವಿಲ್ಲ. ಇದು ಎಂತಹ ದುರ್ದೈವ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪೂರ ರವರು ಮೂರು ಪ್ರಶ್ನೆ ಹಾಗೂ ಒಂದು ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಪರಿಶಿಷ್ಟ ಜಾತಿ/ಪಂಗಡದವರಿಗಾಗಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನಾಲಯದಲ್ಲಿ ಉದ್ಯೋಗ ವಿನಿಮಯ ಕೇಂದ್ರ ಇತ್ತು, ಈಗ ಯಾವ ಸ್ಥಿತಿಯಲ್ಲಿದೆ ಎಂದು ಪ್ರಶ್ನೆ ಕೇಳಿದ್ದಾರೆ. ೧೯೬೪ ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಉದ್ಯೋಗ ಕೋಶವನ್ನು ಸೃಜಿಸಲಾಗಿರುತ್ತದೆ. ೨೦೦೧ ರಲ್ಲಿ ಅದನ್ನು ಸರ್ಕಾರ ರದ್ದು ಮಾಡಿದೆ. ಅದನ್ನು ಏಕೆ ರದ್ದು ಮಾಡಿದ್ದಾರೆಂದರೆ, ಎಲ್ಲಾ ಇಲಾಖೆಗಳ ನೇಮಕಾತಿಯನ್ನು ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಾವು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತಿರುವುದರಿಂದ ಉದ್ಯೋಗ ಕೋಶವನ್ನು ನಿಲುಗಡೆ ಮಾಡಲಾಗಿದೆ ಎಂದು ಉತ್ತರದಲ್ಲಿ ನಿಖರವಾಗಿ ಕೊಟ್ಟಿದ್ದೇವೆ. ಆ ಪೈಕಿ ಉದ್ಯೋಗ ದೊರೆತ ಅಭ್ಯರ್ಥಿಗಳ ವಿವರಗಳೇನು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಸ್ವಾಭಾವಿಕವಾಗಿ ಉದ್ಯೋಗ ಕೋಶವೇ ಈಗ ಚಾಲ್ತಿಯಲ್ಲಿ ಇಲ್ಲದಿರುವುದರಿಂದ ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ ಎನ್ನುವ ಅಂಕಿ-ಅಂಶ ಇಲ್ಲ ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ. ಈಗ ಅವರ ಮುಂದಿರುವಂತಹ ಪ್ರಶ್ನೆ ಏನೆಂದರೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಯಾವ ರೀತಿ ಉದ್ಯೋಗವನ್ನು ಹಂಚಿಕೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಎಲ್ಲಾ ನೇಮಕಾತಿ ಪ್ರಕ್ರಿಯೆಗಳಲ್ಲೂ ಮೀಸಲಾತಿ ಇಡುವ ವ್ಯವಸ್ಥೆ ಮಾಡಲಾಗುತ್ತದೆಂದು ಉತ್ತರದಲ್ಲಿ ಹೇಳಿದ್ದೇವೆ. ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿದ್ದೇವೆ. ಅವರ ಅನುಭವದ ಹಿನ್ನೆಲೆಯಲ್ಲಿ ಇದನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಬೇಕು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಉದ್ಯೋಗ ಕೊಡುವುದಕ್ಕೆ ಬೇಕಾದಂತಹ ಯಾವುದಾದರು ಕಲ್ಪನೆ ಅವರಿಗೆ ಇದ್ದರೆ ಅನುಷ್ಠಾನ ಮಾಡುತ್ತೇವೆ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ತಹಶೀಲ್ದಾರ್, ಎ.ಸಿ.ಗಳಾಗುವ ಸಂಖ್ಯೆ ಬಹಳ ಕಡಿಮೆ. Peon or Attender ಮತ್ತೊಂದು ಆಗುತ್ತೇವೆ. ಅದಕ್ಕಾದರೂ ಉದ್ಯೋಗ ಕೋಶ ಇರಲಿ. ಅದರಲ್ಲಿ ಉದ್ಯೋಗ ಸಿಗುತ್ತದೆ. ಉದ್ಯೋಗ ಕೋಶವನ್ನು ಬಲಿಷ್ಠ ಮಾಡಿ. ಅದನ್ನು ತೆಗೆದು ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ೧೯೬೪ ರಲ್ಲಿ ಉದ್ಯೋಗ ಕೋಶ ಪ್ರಾರಂಭವಾಗಿದೆ. ೨೦೦೧ ರಲ್ಲಿ ಅದನ್ನು ನಿಲ್ಲಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇರುವ ಕಾರಣಕ್ಕಾಗಿ ಅದನ್ನು ನಿಲ್ಲಿಸಲಾಗಿದೆ. ಅಷ್ಟಾಗಿಯೂ ಕೂಡ ಮಾನ್ಯ ಸದಸ್ಯರು ಹೇಳಿರುವ ವಿಚಾರಗಳನ್ನು ನಾನು ಪರಿಶೀಲನೆ ಮಾಡುತ್ತೇನೆ.

**ಸಭಾಪತಿಯವರು:-** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿಧಾನಸಭೆಗೆ ಹೋಗಬೇಕಾಗಿದೆ. ಅದಕ್ಕೆ ಶ್ರೀ ಎನ್.ರವಿಕುಮಾರ್ ರವರ ತಡೆಯಿಡಿಯಲಾದ ಪ್ರಶ್ನೆ ತೆಗೆದುಕೊಳ್ಳುತ್ತಿದ್ದೇನೆ.

**ಪ್ರಶ್ನೆ ಸಂಖ್ಯೆ:02 (28)**

(ಈ ಹಂತದಲ್ಲಿ ಮಾನ್ಯ ಎನ್.ರವಿಕುಮಾರ್‌ರವರು ಸದನದಲ್ಲಿ ಹಾಜರಿರಲಿಲ್ಲ)

ಸಭಾಪತಿಯವರು:- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರೇ, ತಾವು ಹೋಗಬಹುದು.

**ಪ್ರಶ್ನೆ ಸಂಖ್ಯೆ:1542**

(ಈ ಹಂತದಲ್ಲಿ ಡಾ:ವೈ.ಎ.ನಾರಾಯಣಸ್ವಾಮಿಯವರು ಸದನದಲ್ಲಿ ಹಾಜರಿರಲಿಲ್ಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1535**

**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾದ ಉತ್ತರ ಕೊಟ್ಟಿದ್ದಾರೆ. ಆದರೂ ಮಾನ್ಯ ಸಚಿವರು ಈ ಖಾತೆಗೆ ಹೊಸದಾಗಿ ಬಂದಿದ್ದಾರೆ. ಮಾನ್ಯ ಸಚಿವರು ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸಾಕಷ್ಟು ಯೋಜನೆಗಳನ್ನು ತಂದಿದ್ದಾರೆ. ಅದನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರದೀಪ್ ಶೆಟ್ಟರ್‌ರವರು ಬಹಳ ವಿಚಾರಗಳನ್ನಿಟ್ಟುಕೊಂಡು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ ಎಷ್ಟು ಅನುದಾನವನ್ನು ನೀಡಲಾಗಿದೆ, ಬಿಡುಗಡೆಯಾದ ಅನುದಾನದಲ್ಲಿ ಯಾವ ರೀತಿಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ, ಪಾರದರ್ಶಕವಾಗಿ ಯಾವ ರೀತಿ ವ್ಯವಸ್ಥೆಗಳಾಗಿದೆ, ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಕಾರ್ಯ ಯೋಜನೆಗೆ ತರಲು ವಿಫಲರಾದ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಗಣನೆ ಮಾಡಿಯೇ ಉತ್ತರವನ್ನು ಕೊಡಲಾಗಿದೆ. ಅಷ್ಟಾಗಿಯೂ ಕೂಡ ಮಾನ್ಯ ಸದಸ್ಯರು ಅಂತಿಮವಾಗಿ ಕೇಳಿರುವುದೇನೆಂದರೆ, ಯೋಜನೆ ವಿಫಲರಾದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂದು ಕೇಳಿದ್ದಾರೆ. ಅವರು ಹೇಳಿದಂತಹ ನಿರ್ದಿಷ್ಟ ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಏನಾದರೂ ಲೋಪದೋಷಗಳಾಗಿದ್ದರೆ ಅಂತಹ ಘಟನೆಗಳಲ್ಲಿ ಯಾರೇ ತಪ್ಪು ಮಾಡಿದ್ದರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಕಾಮಗಾರಿಗಳು ಅತ್ಯಂತ ಪಾರದರ್ಶಕವಾಗಿ ನಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1534**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 'ಜಲಧಾರೆ ಯೋಜನೆ' ಯಾವ ಹಂತದಲ್ಲಿದೆ, ಜಿಲ್ಲಾವಾರು ಮಾಹಿತಿ ನೀಡುವುದು ಎಂದು ಪ್ರಶ್ನೆ ಕೇಳಿದ್ದೇನೆ. ೨೦೧೮-೧೯ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಜಲಧಾರೆ ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ಜಲ ಜೀವನ್ ಮಿಷನ್ ಭಾಗವಾಗಿ ಪರಿಗಣಿಸಲಾಗಿರುತ್ತದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಜಲಧಾರೆ ಯೋಜನೆಯಲ್ಲಿ ಈ ನಾಲ್ಕು ಜಿಲ್ಲೆಗಳು ಮಾತ್ರ ಇವೆಯೇ? ಇಡೀ ರಾಜ್ಯದಲ್ಲಿ ಯಾವ ಜಿಲ್ಲೆಗಳು ಪೆಂಡಿಂಗ್ ಉಳಿದಿವೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ೨೦೧೮-೧೯ನೇ ಸಾಲಿನ ಆಯವ್ಯಯದಲ್ಲಿ **'ಜಲಧಾರೆ ಯೋಜನೆ'** ಎಂದು ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿ ಅದರಲ್ಲಿ ೫೩,೦೦೦ ಕೋಟಿ ರೂಪಾಯಿಗಳ ಅನುದಾನ ನಿಗದಿಪಡಿಸಲಾಗಿತ್ತು. ಅದರಲ್ಲಿ ಒಂದು ರೂಪಾಯಿ ಕೂಡ ಬಿಡುಗಡೆಯಾಗಲಿಲ್ಲ. ಆ ಯೋಜನೆ ಜಾರಿಗೆ ಬರಲಿಲ್ಲ. ಆ ಯೋಜನೆ ಮುಗಿದು ಹೋಯಿತು. ಅದಾದ ನಂತರ ಆಗಸ್ಟ್ ೨೦೧೯ ರಲ್ಲಿ ಹೊಸದಾಗಿ ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ಜಲ ಜೀವನ್ ಮಿಷನ್ ಘೋಷಣೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕಾಮಗಾರಿಯನ್ನು ಸುಸ್ಥಿರ ಜಲ ಮೂಲಗಳನ್ನು ಆಧಾರಿಸಿ ಇದನ್ನು ಕೈಗೊಳ್ಳಲಾಗುತ್ತಿದೆ. ೫೦:೫೦ ರಷ್ಟು ಹಣ, ಶೇಕಡ ೫೦ ರಷ್ಟು ಹಣ ಕೇಂದ್ರ ಸರ್ಕಾರದ್ದು, ಶೇಕಡ ೫೦ ರಷ್ಟು ಹಣ ರಾಜ್ಯ ಸರ್ಕಾರದ್ದು. ಈ ದಿಕ್ಕಿನಲ್ಲಿ ಮಾಡುತ್ತಿದ್ದೇವೆ. ಜಲಧಾರೆ ಯೋಜನೆ ಘೋಷಣೆ ಆಯಿತು, ಅದು ಅಲ್ಲೇ ನಿಂತು ಹೋಯಿತು. ಅಲ್ಲಿಂದ ಮುಂದೆ ಅದನ್ನು ಜಲ ಜೀವನ್ ಮಿಷನ್ ಯೋಜನೆ ಮುಖಾಂತರ ಮುಂದುವರೆಸುತ್ತೇವೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, 3 ಜಿಲ್ಲೆ, 4 ತಾಲ್ಲೂಕುಗಳಲ್ಲಿ ಮಾತ್ರ ಜಲಧಾರೆ ಯೋಜನೆ ಪೆಂಡಿಂಗ್ ಇದ್ದವು. ಅಲ್ಲಿ ಕೆಲಸ ನಡೆಯುತ್ತಿದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಯಾವ ಜಿಲ್ಲೆಯಲ್ಲೂ ಇಲ್ಲ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಈ ಜಿಲ್ಲೆಗಳಲ್ಲಿ ಸುಸ್ಥಿರ ನೀರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದಿರುವುದಕ್ಕೋಸ್ಕರ ಅದನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಜಲ ಜೀವನ್ ಮಿಷನ್ ಮುಖಾಂತರ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಈ ಹಿಂದಿನ ಯೋಜನೆಯಲ್ಲಿನ ವಿಜಯಪುರ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಮತ್ತು ಮಂಡ್ಯ ಜಿಲ್ಲೆಯ ೩ ತಾಲ್ಲೂಕುಗಳಲ್ಲಿ ಪಾಂಡವಪುರ, ನಾಗಮಂಗಲ ಮತ್ತು ಕೆ.ಆರ್.ಪೇಟೆಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಆಹ್ವಾನಿಸಲಾಗಿರುತ್ತದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಅಂದರೆ ಜಲಧಾರೆ ಯೋಜನೆಯಡಿ ಇವುಗಳನ್ನು ತೆಗೆದುಕೊಂಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಜಲಧಾರೆ ಯೋಜನೆ ಇಲ್ಲ. ಈಗ ಇಡೀ ರಾಜ್ಯದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ಈ ಮೂರು ಜಿಲ್ಲೆಗಳನ್ನು ಬಿಟ್ಟು ಎಲ್ಲವೂ ತೆಗೆದುಕೊಂಡಿದ್ದೇವೆ. ಈಗ ವಿಜಯಪುರ, ಧಾರವಾಡ, ರಾಯಚೂರು, ಮಂಡ್ಯ ಜಿಲ್ಲೆ, ಇಲ್ಲಿ ಸುಸ್ಥಿರ ನೀರು ಎಲ್ಲೆಲ್ಲಿ ಇದೆ ಎಂದು ಗಮನಿಸಿ ಟೆಂಡರ್‌ಗಳನ್ನು ಕರೆದು ಈ ಯೋಜನೆ ಪ್ರಾರಂಭ ಮಾಡಿದ್ದೇವೆ. ೨೦೨೪ನೇ ಇಸವಿಯ ಅಂತ್ಯದೊಳಗೆ ಇಡೀ ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮಗಳು, ಪ್ರತಿ ಮನೆಗೂ ಕೂಡ ನಳ ನೀರು ಕೊಡುವ ವ್ಯವಸ್ಥೆ ಇದರ ಮುಖಾಂತರ ನಾವು ಮಾಡುತ್ತೇವೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1011) 24-9-2021 11.30 DS-MD

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:24ನೇ ಸೆಪ್ಟೆಂಬರ್, 2021ರ, ಸಮೂಹ-5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 130 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರಗಳ ಪ್ರತಿಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

ಅ) ವಿಷಯ:- ತಜ್ಞ ವೈದ್ಯಾಧಿಕಾರಿ ಮತ್ತು ಸಾಮಾನ್ಯ ತಜ್ಞ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಕಾಲವಕಾಶ ನೀಡುವ ಬಗ್ಗೆ.

--------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡರವರು ದಿನಾಂಕ:15.09.2021ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂತಹ ವಿಷಯಕ್ಕೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಆ) ವಿಷಯ: ಮಂಡ್ಯ ವಿಶ್ವವಿದ್ಯಾಲಯದಲ್ಲಿ ಮೂಲ ಸೌಕರ್ಯಗಳ ಕೊರತೆ ಹಾಗೂ ಸಿಬ್ಬಂದಿಗಳ ಹುದ್ದೆಗಳ ಮಂಜೂರಾತಿ ಬಗ್ಗೆ.

--------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ದಿನಾಂಕ:20.09.2021ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂತಹ ವಿಷಯಕ್ಕೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ: ಬಿಇಎಂಎಲ್ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘದವರು ೨೦೦೨-೨೦೦೩ನೇ ಸಾಲಿನಲ್ಲಿ ಕೆ.ಆರ್.ಪುರಂನ ತಣಿಸಂದ್ರ, ಗೆದ್ದನಹಳ್ಳಿ, ಭೈರತಿ ಅಮಾನಿಖಾನೆ ಪ್ರದೇಶಗಳಲ್ಲಿ ಖರೀದಿಸಿದ ಜಮೀನಿನಲ್ಲಿ ಮಾಡಲಾದ ನಿವೇಶನವನ್ನು ಖಾಸಗಿಯವರಿಗೆ ಹಂಚಿಕೆ ಮಾಡಿರುವ ಬಗ್ಗೆ.

--------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಹಕಾರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ದಿನಾಂಕ:21.09.2021ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂತಹ ವಿಷಯಕ್ಕೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ: ಕೋವಿಡ್-19 ರ ಸಾಂಕ್ರಾಮಿಕದ ಪ್ರಯುಕ್ತ ದೇಶಾದ್ಯಂತ ಲಾಕ್‌ಡೌನ್ ಘೋಷಣೆ ಮಾಡಿದ ಕಾರಣ 2019-20ನೇ ಸಾಲಿನಲ್ಲಿ ಪದವಿ ಪೂರ್ವ (ಪಿ.ಯು.ಸಿ.) ಫಲಿತಾಂಶ ಪ್ರಕಟಣೆಯಲ್ಲಿ ವಿಳಂಬವಾಗಿರುವುದರಿಂದ ಅನುಕಂಪ ಆಧಾರದ ನೇಮಕಾತಿಗೆ ವಿನಾಯಿತಿ ನೀಡಿ ಗಣನೆಗೆ ತೆಗೆದುಕೊಳ್ಳಬೇಕೆಂಬ ಬಗ್ಗೆ.

---------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ:22.09.2021ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂತಹ ವಿಷಯಕ್ಕೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉ) ವಿಷಯ: ಕೊರೋನಾ ವಾರಿಯರ್ಸ್‌ಗಳಿಗೆ ವೇತನ ಮತ್ತು
ಪ್ರೋತ್ಸಾಹ ಭತ್ಯೆ ನೀಡದಿರುವ ಬಗ್ಗೆ.

-------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು)ರವರು ದಿನಾಂಕ:23.09.2021ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಂತಹ ವಿಷಯಕ್ಕೆ, ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ) ವಿಷಯ: ವಿವಿ ಪರೀಕ್ಷೆ ವಿಳಂಬದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದೇಶಿ ವಿಶ್ವವಿದ್ಯಾನಿಲಯಗಳ ಉನ್ನತ ವ್ಯಾಸಂಗಕ್ಕೆ ತೊಂದರೆಯಾಗಿರುವ ಬಗ್ಗೆ.

--------

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂದಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ವಿವಿಗಳ ಪರೀಕ್ಷೆ, ರಿಸಲ್ಟ್ ವಿಳಂಬ/ಫಲ ನೀಡದ ಪ್ರಬುದ್ಧ ಯೋಜನೆ" ಕುರಿತು ವರದಿ ಪ್ರಕಟವಾಗಿದ್ದು, ರಾಜ್ಯದ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಇನ್ನೂ ಪದವಿ ಪರೀಕ್ಷೆಗಳು ಮುಗಿಯದೆ ಫಲಿತಾಂಶ ಪ್ರಕಟವಾಗದ ಕಾರಣ ಪ್ರಬುದ್ಧ ಯೋಜನೆಯಡಿ ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಬಯಸಿರುವ ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕನಸಿಗೆ ತಣ್ಣೀರೆರಚಿದಂತಾಗಿರುವ ಸಂಗತಿ ಬೆಳಕಿಗೆ ಬಂದಿರುತ್ತದೆ.

ಯೋಜನೆಯಡಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಧನಸಹಾಯಕ್ಕೆ ಅರ್ಜಿ ಸಲ್ಲಿಕೆಗೆ ದಿನಾಂಕ:೨೪ನೇ ಸೆಪ್ಟೆಂಬರ್ ೨೦೨೧ ಕೊನೆಯ ದಿನವಾಗಿದೆ. ಆದರೆ ಕೋವಿಡ್-೧೯ ಕಾರಣದಿಂದ ಎಲ್ಲಾ ವಿಶ್ವವಿದ್ಯಾಲಯಗಳ ಪರೀಕ್ಷಾ ವೇಳಾಪಟ್ಟಿಗಳು ಬದಲಾದ ಹಿನ್ನೆಲೆಯಲ್ಲಿ ನಿಗದಿತ ಅವಧಿಯೊಳಗೆ ಪದವಿ ಪೂರೈಸಿ ಉನ್ನತ ವ್ಯಾಸಂಗಕ್ಕೆ ತೆರಳುವುದಕ್ಕೆ ನೂರಾರು ವಿದ್ಯಾರ್ಥಿಗಳಿಗೆ ಅವಕಾಶವಾಗಿರುವುದಿಲ್ಲ. ಪ್ರಸ್ತುತ ಪರೀಕ್ಷೆಗಳು ನಡೆಯುತ್ತಿದ್ದು ಮುಂಬರುವ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಫಲಿತಾಂಶ ಪ್ರಕಟವಾಗುವ ಸಂಭವವಿದೆ. ಇದರಿಂದ ಸಾಕಷ್ಟು ವಿದ್ಯಾರ್ಥಿಗಳು ಈ ಯೋಜನೆಯ ಅವಕಾಶದಿಂದ ವಂಚಿತರಾಗಲಿದ್ದಾರೆ ಹಾಗೂ ಒಂದು ವರ್ಷದ ವ್ಯಾಸಂಗ ನಡೆಸದೆ ಕಾಯಬೇಕಾದ ಅನಿವಾರ್ಯತೆಯಿಂದ ಸಂಧಿಗ್ದತೆಗೆ ಒಳಗಾಗಲಿದ್ದಾರೆ.

ದಯಮಾಡಿ, ಸರ್ಕಾರ ಪ್ರಬುದ್ಧ ಯೋಜನೆಗೆ ಅರ್ಜಿ ಸಲ್ಲಿಸುವ ಕಾಲಾವಧಿಯ ಗಡುವನ್ನು ತಕ್ಷಣವೇ ವಿಸ್ತರಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದೇಶಿ ವ್ಯಾಸಂಗಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಮ್ಮಾಪೂರರವರು ಕೇಳಿರುವ ಪ್ರಶ್ನೆ ಬಹಳ ಮಹತ್ವವಾದದ್ದು. ಅರ್ಜಿ ಸಲ್ಲಿಸುವ ಕಾಲಾವಧಿ ವಿಸ್ತರಿಸಬೇಕೆಂದು ಹೇಳಿದ್ದಾರೆ. ಇದು ನೈಜವಾದ ವಿಷಯವಾಗಿದೆ. ಅಧಿಕಾರಿಗಳ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ: ಮರಾಠ ಜನಾಂಗವನ್ನು ಪ್ರವರ್ಗ ೩ಬಿ ಯಿಂದ
೨ಎ ಗೆ ಸೇರಿಸುವ ಕುರಿತು.

--------

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಮರಾಠ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ:೨೪-೦೯-೨೦೧೨ ಮತ್ತು ೨೫-೦೯-೨೦೧೨ ರಂದು ಮರಾಠ ಸಮಾಜದ ಸ್ಥಿತಿಗತಿಗಳನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಾನ್ಯ ಶಂಕರಪ್ಪನವರು ಖುದ್ದಾಗಿ ಪರಿಶೀಲಿಸಿ ದಿನಾಂಕ:೩೦-೧೨-೨೦೧೨ಕ್ಕೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ ಪ್ರವರ್ಗ "೩ಬಿ ಯಿಂದ ೨ಎ" ಗೆ ಶಿಫಾರಸ್ಸನ್ನು ಮಾಡಿರುತ್ತಾರೆ. ಆದರೆ ರಾಜ್ಯ ಸರ್ಕಾರವು ಮರಾಠ ಸಮುದಾಯವನ್ನು ೨ಎ ಗೇ ಸೇರಿಸುವಲ್ಲಿ ವಿಳಂಬ ಮಾಡಿದ್ದಾರೆ. ಮರಾಠ ಸಮುದಾಯಕ್ಕೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಗೆ ಪಕ್ಕದ ಮಹಾರಾಷ್ಟ್ರ ಸರ್ಕಾರ ಸಮ್ಮತಿಯ ಮುದ್ರೆ ಒತ್ತಿರುತ್ತದೆ. ಇದರಿಂದಾಗಿ ಮೀಸಲಾತಿ ಆಗ್ರಹಿಸಿ ಅಲ್ಲಿಯ ಮರಾಠ ಸಮಾಜವು ನಡೆಸುತ್ತಿದ್ದ ಪ್ರತಿಭಟನೆಗೆ ಫಲ ದೊರೆತಂತಾಗಿದೆ. ಆದರೆ ನಮ್ಮಲ್ಲಿ ಮಾತ್ರ ಮರಾಠ ಸಮಾಜ ಅಭಿವೃದ್ಧಿಗೋಸ್ಕರ ಹಾಗೂ ವಿವಿಧ ಬೇಡಿಕೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಎಷ್ಟು ಬಾರಿ ಮನವಿ ನೀಡಿದ್ದರು ಇಲ್ಲಿಯವರೆಗೆ ಪ್ರಯೋಜನವಾಗಿರುವುದಿಲ್ಲ.

ಸರ್ಕಾರಕ್ಕೆ ಮರಾಠ ಧ್ವನಿ ಕೇಳಿಸಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಅಧಿಕಾರ ಸ್ವೀಕರಿಸಿದ ೨೪ ಗಂಟೆಯೊಳಗೆ ಮರಾಠ ಸಮುದಾಯದವರಿಗೆ ಮೀಸಲಾತಿ ಅವಕಾಶ ಕಲ್ಪಿಸಿಕೊಡುತ್ತೇನೆಂದು ತಿಳಿಸಿದ್ದರು. ಆದರೆ ಮೀಸಲಾತಿ ಸೌಲಭ್ಯ ನೀಡದೆ ಮರಾಠ ಅಭಿವೃದ್ಧಿ ಪ್ರಾಧಿಕಾರದ ರಚನೆ ಮಾಡಿದ್ದೇನೆ ಎಂದು ತಿಳಿಸಿ, ಅದಕ್ಕೆ ಅನುದಾನ ಬಿಡುಗಡೆ ಮಾಡುತ್ತೇನೆಂದು ತಿಳಿಸಿದ್ದರು. ಆದರೆ ಅದು ಕೂಡ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

ಆದ್ದರಿಂದ ಈಗಲಾದರೂ ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯದ ಮೇರೆಗೆ ಪ್ರವರ್ಗ ೩ಬಿ ಯಿಂದ ೨ ಎ ಗೆ ಸೇರಿಸಲು ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಪರಿಶೀಲನೆ ಮಾಡಿ ಉತ್ತರ ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ ರವರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)**

**ಸಭಾಪತಿಯವರು:-** ಮಾನ್ಯ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ ರವರೇ, ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡಿದ ಹಾಗೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೋರಿ ಸೂಚನಾ ಪತ್ರವನ್ನು ಕಳುಹಿಸಿಕೊಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಅಧಿವೇಶನದ ಕೊನೆಯ ದಿನವಾಗಿದೆ. ಮಾನ್ಯ ಸಭಾನಾಯಕರು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾನು ಹತ್ತು ವರ್ಷಗಳಿಂದ ನೋಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಸ್. ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಬಾರದು ಎಂದು ನನಗೆ ಅರ್ಥವಾಗುತ್ತದೆ. ಆದರೆ ಮಾನ್ಯ ಸದಸ್ಯರು ಒಂದು ದಶಕದಿಂದ ಇದರ ಬೆನ್ನುಹತ್ತಿದ್ದಾರೆ. ಇವತ್ತು ಅಧಿವೇಶನದ ಕೊನೆಯ ದಿನ. ಇನ್ನು ಯಾವಾಗ ಉತ್ತರ ಕೊಡುತ್ತಾರೆ?

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಭಾನಾಯಕರೇ, ಆದಷ್ಟು ಬೇಗ ಅವರಿಗೆ ಎರಡು ದಿವಸಗಳಲ್ಲಿ ಉತ್ತರವನ್ನು ಒದಗಿಸಿ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಿ ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಉತ್ತರ ಕೊಡುವ ಬದಲು ಅದನ್ನು ಪರಿಹಾರ ಮಾಡಲಿ. ಇದು ಅವರ ಆದ್ಯ ಕರ್ತವ್ಯವಾಗಿದೆ. ಇದರ ಬಗ್ಗೆ ಅವರು ಗಮನ ಕೊಡಬೇಕು. ಇದೇ ಜನವರಿ ೫-೬ನೇ ತಾರೀಖಿನಂದು ನನ್ನ ಈ ಮನೆಯ ಸದಸ್ಯತ್ವದ ಅವಧಿ ಮುಗಿಯುತ್ತದೆ, ಮಾನ್ಯ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ ರವರ ಅವಧಿಯೂ ಮುಗಿಯುತ್ತದೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಜನರಿಗೆ ಒಂದು ಕೆಲಸ ಮಾಡಿ ಕೊಡಲಿಲ್ಲವೆಂದು ಅವರಿಗೆ ಕೆಟ್ಟ ಹೆಸರು ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಇದಕ್ಕೇನಾದರೂ ದಾರಿ ಹುಡುಕೋಣ. ತಕ್ಷಣ ಅವರಿಗೆ ಉತ್ತರವನ್ನು ಒದಗಿಸಿ ಕೊಡಿ. ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ರವರೇ, ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬನ್ನಿ. ತಮಗೆ ಉತ್ತರ ಕೊಡಿಸುವುದು ನನ್ನ ಜವಾಬ್ದಾರಿ.

**ಶ್ರೀ ಎಸ್. ಆರ್.ಪಾಟೀಲ್:-** ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ರವರೇ, ಮಾನ್ಯ ಸಭಾಪತಿಯವರೇ, ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ತಮ್ಮ ಸ್ಥಾನಕ್ಕೆ ಬನ್ನಿ.

**(ಈ ಹಂತದಲ್ಲಿ ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ರವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಸಭಾಪತಿಯವರು:-** ಈಗ ನಿಯಮ ೬೮ರ ಅಡಿಯಲ್ಲಿ ಚರ್ಚಿಸಲಾಗಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಉತ್ತರ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ನನ್ನದೊಂದು ವಿಷಯ ಇದೆ.

**ಸಭಾಪತಿಯವರು:-** ಈಗ ಶೂನ್ಯ ವೇಳೆ ಮುಗಿದಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಅಧಿವೇಶನದ ಕೊನೆಯ ದಿನವಾಗಿದೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಬಂದಿದ್ದಾರೆ. ದಯಮಾಡಿ ತಾವು ಅವರಿಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ನಾವು ಇವತ್ತು ಟಾಂಗ ಜಾಥಾದಲ್ಲಿದ್ದೆವು. ಬೆಲೆ ಏರಿಕೆಯಿಂದಾಗಿ ಜನರ ಧ್ವನಿಯಾಗಿ ಇವತ್ತು ನಾವು ಟಾಂಗದಲ್ಲಿ ಬರುವಂತಹ ಪರಿಸ್ಥಿತಿ ಬಂತು. ಅವರು ನನ್ನ ಜೊತೆಯಲ್ಲೇ ಇದ್ದರು.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಾವು ನನ್ನ ಮಾತನ್ನು ಕೇಳಿ. ಈಗ ಏನಾಗಿದೆ ಎಂದರೆ, ಸದನದಲ್ಲಿ ಯಾವ ಸದಸ್ಯರು ಇದ್ದಾರೆ, ಯಾವ ಸಚಿವರು ಇದ್ದಾರೆಂದು ನೋಡಿ ಕರೆಯಬೇಕು. ಪರಿಸ್ಥಿತಿ ಆ ರೀತಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಅಧಿವೇಶನದ ಕೊನೆಯ ದಿನವಾದ್ದರಿಂದ ನಾವು ಜನಪರ ಹೋರಾಟದಲ್ಲಿದ್ದೆವು.

**ಸಭಾಪತಿಯವರು:-** ಆಯಿತು, ಮಾನ್ಯ ಯು.ಬಿ.ವೆಂಕಟೇಶ್‌ರವರಿಗೆ ಅವಕಾಶ ಕೊಡುವುದಕ್ಕೆ ಒಪ್ಪಿಕೊಂಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ: ಬೆಂಗಳೂರು ನಗರದ ವಾಹನ ದಟ್ಟಣೆಯಿಂದ ಉಂಟಾಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಿ ಜನರ ಸ್ವಾಸ್ತ್ಯವನ್ನು ಉತ್ತೇಜಿಸುವ ದೃಷ್ಟಿಯಿಂದ ನಿರ್ಮಾಣ ಮಾಡಿರುವ ಸೈಕಲ್ ಪಥಗಳು ಸರ್ಕಾರದ ನಿರ್ಲಕ್ಷ್ಯ ಹಾಗೂ ನಿರ್ವಹಣೆಯ ಕೊರತೆ ಜೊತೆಗೆ ಕಳಪೆ ಕಾಮಗಾರಿಗಳಿಂದ ಪದೇಪದೇ ದುರಸ್ತಿಗೊಳಗಾಗುತ್ತಿರುವ ಬಗ್ಗೆ.

--------

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಿ, ವಾಯು ಮಾಲಿನ್ಯ ನಿಯಂತ್ರಿಸುವುದು ಹಾಗೂ ಜನರ ಸ್ವಾಸ್ತ್ಯ ಆರೋಗ್ಯ ಕಾಳಜಿಯನ್ನು ಉತ್ತೇಜಿಸುವ ದೃಷ್ಟಿಯಿಂದ ಸೈಕಲ್ ಬಳಕೆಯನ್ನು ಹೆಚ್ಚಿಸುವುದು ಹಾಗೂ ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರ ಬಹಳಷ್ಟು ಕಡೆಗಳಲ್ಲಿ ಸೈಕಲ್ ಪಥವನ್ನು ನಿರ್ಮಾಣ ಮಾಡಿರುವುದು ಸರಿಯಷ್ಟೇ. ಸರ್ಕಾರದ ಈ ನಿರ್ಧಾರವನ್ನು ಸಾರ್ವಜನಿಕರು ಹಾಗೂ ಅನೇಕ ಸಂಘಸಂಸ್ಥೆಗಳು ಸಹ ಪ್ರಶಂಸಿಸಿದ್ದವು.

ಆದರೆ ಸರ್ಕಾರದ ನಿರ್ಲಕ್ಷ್ಯ ಹಾಗೂ ನಿರ್ವಹಣೆಯ ಕೊರತೆ ಮತ್ತು ನೆಪ ಮಾತ್ರಕ್ಕೆ ಈ ಯೋಜನೆಯನ್ನು ಜಾರಿಗೊಳಿಸಿರುವುದು ಕಳಪೆ ಕಾಮಗಾರಿಗಳಿಂದಾಗಿ ಸಾಬೀತಾಗಿರುತ್ತದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡ ರಸ್ತೆ ಅಭಿವೃದ್ಧಿ ಕಾಮಗಾರಿಗಳ ನಡುವೆ ಕೆಲವೇ ರಸ್ತೆಗಳನ್ನಷ್ಟೇ ಗುರುತಿಸಿ ಸೈಕಲ್ ಪಥವನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ಸರ್ಕಾರದ ಹಲವು ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಿವೆ. ಸೈಕಲ್ ಪಥ ಉದ್ಘಾಟನೆಯಾದ ತರುವಾಯ ಪದೇ ಪದೇ ದುರಸ್ತಿ ಕಾರ್ಯಗಳು ಕಾಣಿಸಿಕೊಳ್ಳುತ್ತಿರುವುದಕ್ಕೆ ಕಾರಣವೇನು; ತಪ್ಪಿತಸ್ಥರು ಯಾರು, ಎಲ್ಲಿ ಲೋಪಗಳಾಗಿವೆ ಎನ್ನುವುದನ್ನು ಸರ್ಕಾರ ಪತ್ತೆ ಮಾಡಬೇಕಾಗಿದೆ.

ಕೇಂದ್ರ ಸರ್ಕಾರದ ಉದ್ದೇಶಿತ ಸ್ಮಾರ್ಟ್ ಸಿಟಿ ಯೋಜನೆಯಡಿ ಒದಗಿಸಲಾದ ಕೋಟ್ಯಂತರ ಅನುದಾನ "ಹೊಳೆಯಲ್ಲಿ ಹುಣಸೆ ಹಣ್ಣು ತೇಯ್ದಂತೆ" ಆಗಿದೆ. ಸರ್ಕಾರದ ಹಣ ಈ ರೀತಿ ಅನುಪಯುಕ್ತವಾಗುವುದು ಸರಿಯೆನಿಸಲಾರದು. ಸರ್ಕಾರ ಕೂಡಲೇ ಈ ವಿಚಾರದಲ್ಲಿ ಗಮನಹರಿಸಿ ಕಳಪೆ ಕಾಮಗಾರಿ ಅಥವಾ ದುರಸ್ತಿ ಕಾಮಗಾರಿಗಳಿಗೆ ಅವಕಾಶವಿಲ್ಲದಂತೆ ಈಗಿರುವ ಸೈಕಲ್ ಪಥ ರಸ್ತೆಗಳನ್ನು ನಿರ್ವಹಣೆ ಮಾಡಬೇಕು ಹಾಗೂ ಹೊಸ ಪಥಗಳನ್ನು ನಿರ್ಮಿಸಬೇಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

(ಮುಂದು)

1012/24-09-2021/11-40/bkp-ak

**ಸಭಾಪತಿಯವರು:-** ಶ್ರೀಯುತ ಮರಿತಿಬ್ಬೇಗೌಡರವರೆ, ತಾವು ಕಾಯಿದೆ ಬಗ್ಗೆ ಮಾತನಾಡುತ್ತೀರಿ, ಆದರೆ, ನಿಮ್ಮನ್ನು ಮಾತನಾಡಲಿಕ್ಕೆ ಕರೆದಾಗ ನೀವೇ ಸದನದಲ್ಲಿ ಇರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪಸತಿಯವರೆ, ಕ್ಷಮೆ ಇರಲಿ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:** ಹೊಸದಾಗಿ ರಚನೆಯಾಗಿರುವ 57 ತಾಲ್ಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗಳನ್ನು ಸೃಜಿಸುವ ಬಗ್ಗೆ.

- - - -

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇತ್ತೀಚೆಗೆ 57 ಹೊಸದಾಗಿ ತಾಲ್ಲೂಕುಗಳು ರಚನೆಯಾಗಿರುತ್ತದೆ. ಆದರೆ, ಸದರಿ ತಾಲ್ಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗಳನ್ನು ಸೃಜಿಸಿರುವುದಿಲ್ಲ. ಮೂಲಭೂತ ಸೌಕರ್ಯಗಳ ಕೊರತೆ ಇರುತ್ತದೆ. ಅಗತ್ಯವಿರುವ ಬಿ.ಆರ್.ಸಿ., ಬಿ.ಆರ್.ಪಿ, ಇ.ಸಿ.ಒ. ಹುದ್ದೆಗಳನ್ನು ಸಹ ಸೃಜಿಸಿರುವುದಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಹಿರಿಯ ಉಪನ್ಯಾಸಕರನ್ನು ಪ್ರಭಾರ ಹುದ್ದೆಯಲ್ಲಿ ನೇಮಿಸಲಾಗಿರುತ್ತದೆ. ಈ ವಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆ, ಉಸ್ತುವಾರಿ ಮತ್ತು ಆಡಳಿತ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿಲ್ಲ. ಕೋವಿಡ್-19 ನಿರ್ವಹಣಾ ಸೂತ್ರಗಳನ್ನಾಗಿ ಅನುಷ್ಠಾನಗೊಳಿಸಿ, ಸುಗಮ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳ ಆರೋಗ್ಯದ ಸಂಬಂಧ ಸೂಕ್ತ ನಿರ್ಧಾರಗಳು , ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವುದು ಮುಂತಾದ ಗುರುತರ ಜವಾಬ್ದಾರಿಗಳನ್ನು ಪ್ರಭಾರಿ ಹುದ್ದೆಯಲ್ಲಿರುವವರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಆದಕಾರಣ, ಹೊಸ ತಾಲ್ಲೂಕುಗಳಿಗೆ ಕೂಡಲೇ ಬಿ.ಇ.ಒ. ಹಾಗೂ ಅಗತ್ಯವಿರುವ ಇತರೆ ಹುದ್ದೆಗಳನ್ನು ಸೃಜಿಸುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಅನುವು ಮಾಡಿಕೊಡಬೇಕೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರನ್ನು ಒತ್ತಾಯಿಸುತ್ತೇನೆ.

**ಸಭಾಪತಿಯವರು:-** ಸಭಾನಾಯಕರೆ, ಈ ವಿಚಾರ ಸರಿಯಾಗಿದ್ದು, ಬಹಳ ಕಡೆ ತೊಂದರೆಯಾಗುತ್ತಿದ್ದು, ಕಳುಹಿಸಿಕೊಡುವ ವ್ಯವಸ್ಥೆ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**4. ವರದಿಯನ್ನೊಪ್ಪಿಸುವುದು**

**ಡಾ||ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು):** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಮಂಡಲದ 2020-21ನೇ ಸಾಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 4ನೇ ವರದಿಯನ್ನು ಸಮಿತಿಯ ಪರವಾಗಿ ಸಮಿತಿಯ ಸದಸ್ಯನಾದ ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

-------

**5. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಸರ್ಕಾರದಿಂದ ಉತ್ತರ ಬಾರದಿರುವ ಬಗ್ಗೆ**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಅವಕಾಶ ಕೊಡಿ. ಇವತ್ತು ಸದನದ ಕೊನೆಯ ದಿವಸ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಇನ್ನೂ ಅರ್ಧಕ್ಕೆ ಅರ್ಧ ಉತ್ತರಗಳು ಬಂದಿರುವುದಿಲ್ಲ. ಮತ್ತೆ, ಶೂನ್ಯವೇಳೆಯಲ್ಲಿ ಕೇಳಿರುವಂತಹ ಪ್ರಶ್ನೆಗಳಿಗೂ ಸಹಿತ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು**: ಈ ಬಗ್ಗೆ ಸಭಾನಾಯಕರಿಗೂ ಹಾಗೂ ಕಾರ್ಯದರ್ಶಿಯವರಿಗೆ ತಕ್ಷಣ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-**ಮಾನ್ಯ ಸಭಾಪತಿಯವರೆ, ತಕ್ಷಣ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ**

**ಮೈಸೂರು ಜಿಲ್ಲೆಯ ಚಾಮುಂಡಿಪುರದ ರಿಂಗ್ ರಸ್ತೆಯ ಬಳಿ ದಿನಾಂಕ: 24.08.2021ರಂದು ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ತನಿಖೆಯಲ್ಲಿ ಪೊಲೀಸರು ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳ ಅನ್ವಯ ಕ್ರಮ ವಹಿಸದಿರುವ ಕುರಿತು.**

.......

**ಶ್ರೀ ಜೆ.ಸಿ. ಮಾಧುಸ್ವಾಮಿ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯಸಭಾಪತಿಯವರೆ, ನೋಟೀಸ್‌ಗಳನ್ನು ತಾವು ಒಗ್ಗೂಡಿಸಿ, ಮೈಸೂರಿನಲ್ಲಿ ಹೆಣ್ಣುಮಗಳ ಮೇಲೆ ಆದಂತಹ ಲೈಂಗಿಕ ದೌರ್ಜನ್ಯ ಮತ್ತು ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ತುಮಕೂರು ಜಿಲ್ಲೆ ಸೇರಿದಂತೆ ಇಡೀ ರಾಜ್ಯದಲ್ಲಿ ಆಗಿರುವಂತಹ ಮತ್ತು ಅಗುತ್ತಿರುವಂತಹ ಮಹಿಳಾ ದೌರ್ಜನ್ಯಗಳ ವಿರುದ್ಧ ಇಲ್ಲಿ ಚರ್ಚೆ ಏನು ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ನಾನು ಸರ್ಕಾರದ ಪರವಾಗಿ ಉತ್ತರ ಕೊಡಲಿಕ್ಕೆ ಬಯಸುತ್ತೇನೆ.

ಮೊದಲನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಆದ್ಯತೆ ಮೇರೆಗೆ ಉತ್ತರ ಕೊಡಬೇಕಾಗುತ್ತದೆ ಎಂದು ತಿಳಿದುಕೊಂಡು 24ನೇ ತಾರೀಖಿನಂದು ಮೈಸೂರಿನಲ್ಲಿ ಏನು ಘಟನೆ ನಡೆಯಿತು, ಅದು ದುರದೃಷ್ಟಕರ. ನಾಗರೀಕ ಸಮಾಜದಲ್ಲಿ ಯಾರು ಸಹಿಸಲಾರದಂತಹ ಘಟನೆ, ಹೆಣ್ಣು ಮಗಳನ್ನು ತಾಯಿ ಎಂದು ಪೂಜಿಸುವ ಸಮಾಜದಲ್ಲಿ ಇದೆಲ್ಲವೂ ಆಗುತ್ತದೆ ಎನ್ನುವುದನ್ನು ಯಾವ ಸರ್ಕಾರವೂ ಸಹಿಸುವುದಿಲ್ಲ. ಸಹಿಸಿದರೆ ಅದು ಮಾನವೀಯ ಲಕ್ಷಣವಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ಕೆಲವು ಬಾರಿ ಇಂತಹ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮನುಷ್ಯನಲ್ಲಿರುವ ದಾನವೀಯ ಮನಸ್ಸು ಅಥವಾ ಪಶುತ್ವ ಕೆಲವು ಬಾರಿ ಎಲ್ಲವನ್ನು ದಾಟಿ ವರ್ತಿಸುವಂತೆ ಮಾಡುತ್ತದೆ. ಇದನ್ನು ಅನೇಕ ಸಲ ಕಾನೂನುಗಳಿಂದ ಹತೋಟಿಗೆ ತೆಗೆದುಕೊಳ್ಳಬಹುದು, ಮತ್ತೆ ಇನ್ನು ಕೆಲವು ಸಲ ಅವರವರ ಮನಸ್ಥಿತಿಗಳನ್ನು ಕೂಡ ನಾವು ನೋಡಬೇಕು. ಈ ವಿಚಾರವಾಗಿ ನಾನು ಕುಳಿತುಕೊಂಡು ಮಾನ್ಯ ಶ್ರೀ ಎಸ್. ಆರ್. ಪಾಟೀಲ್‌ರವರನ್ನು ಬಹಳ ಚೆನ್ನಾಗಿ ಕೇಳಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇದಕ್ಕೆ ಉತ್ತರವನ್ನು ಕಾನೂನು ಸಚಿವರ ಬದಲಿಗೆ ಗೃಹ ಸಚಿವರು ಕೊಟ್ಟರೆ ಚೆನ್ನಾಗಿರುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಗೃಹ ಸಚಿವರು ಉತ್ತರ ಕೊಡ ಬೇಕೆಂದು ಹೇಳಿದರೆ, ಕೆಲವರು ಇದಕ್ಕೆ ನಾನೇ ಉತ್ತರ ಕೊಡಬೇಕೆಂದು ಹೇಳುತ್ತಾರೆ. ನಾನು ಈ ಸಂಬಂಧ ಉತ್ತರ ಕೊಡಲಿಕ್ಕೆ 3 ದಿವಸ ಇಲ್ಲಿಯೇ ಕುಳಿತಿದ್ದೇನೆ. ನಿನ್ನೆ ಇಲ್ಲಿ ಗೃಹ ಸಚಿವರು ಇದ್ದರು, ಅವರು ಬೇಡ ಕಾನೂನು ಸಚಿವರು ಉತ್ತರ ಕೊಡಬೇಕೆಂದರು.

**ಶ್ರೀ ಎಸ್.ಆರ್. ಪಾಟೀಲ್:** ಗೃಹ ಸಚಿವರು ಈ ಸಂಬಂಧ ಕೆಲವು ಹೇಳಿಕೆಗಳನ್ನು ಕೊಟ್ಟರು.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಮಾನ್ಯಸಭಾಪತಿಯವರೆ, ಈ ಸಂಬಂಧ ನಾನು ಉತ್ತರ ಕೊಡುತ್ತೇನೆ. ಈ ವಿಚಾರದಲ್ಲಿ ಏನಾದರೂ ಸಂಶಯ ಇದ್ದರೆ. . .

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಈ ಸಚಿವರು ಉತ್ತರ ಕೊಡಲಿಕ್ಕೆ ಸಮರ್ಥರಿಲ್ಲ ಎಂದು ನಾನು ಹೇಳಲಿಲ್ಲ. He is quite capable. ಸಚಿವರು ಸಮರ್ಥರಿದ್ದಾರೆ. ಮೂಲತಃ ಸಚಿವರು ಒಬ್ಬ ವಕೀಲರಿದ್ದಾರೆ. ಕ್ರೈಮ್ ಬಗ್ಗೆ ಅವರು ಸರಿಯಾಗಿ ಮಾಹಿತಿಯನ್ನು ಕೊಡುತ್ತಾರೆ. ಆದರೆ, ಒಬ್ಬರು ಗೃಹ ಸಚಿವರಿದ್ದಾರೆ, ಮುಖ್ಯಮಂತ್ರಿಗಳು ನಂತರ ಅವರೇ ಇದ್ದಾರೆ. ಅವರು ಪ್ರಭಾವಿ ಖಾತೆಯನ್ನು ಹೊಂದಿದ್ದಾರೆ. ಇಡೀ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿ ಜನರು ಬೆಚ್ಚಿ ಬೀಳುವಂತಹ ಘಟನೆ ನಡೆದಿದೆ.

**Sri J.C. MADHUSWAMY:** It is the collective responsibility of the government.

**Sri S.R. PATIL:** There is a collective responsibility. The Minister can answer; that is different. ಇಲ್ಲಿ ಅವರು ಇದ್ದರೆ ಒಳ್ಳೆಯದಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ. ಮಾಧುಸ್ವಾಮಿ:** ಮಾನ್ಯಸಭಾಪತಿಯವರೆ, ಈ ಸಂಬಂಧ ನಾನು ಉತ್ತರ ಕೊಡುತ್ತೇನೆ. ಉತ್ತರದ ನಂತರ ಏನಾದರೂ ಅನುಮಾನ ಬಂದರೆ ಅವರನ್ನು ಇಲ್ಲಿಗೆ ಕಳುಹಿಸುತ್ತೇನೆ. ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಿ. ಬಹುಶಃ ಈ ವಿಚಾರವಾಗಿ ನನ್ನನ್ನು ಕರೆಯಬಹುದೆಂದು ಹೇಳಿ, ನಿನ್ನೆ ಅವರು ಇಲ್ಲಿ ಕುಳಿತಿದ್ದರು. ತಾವು ತಪ್ಪು ತಿಳಿದುಕೊಳ್ಳಬೇಡಿ. ನಿನ್ನೆ ಈ ವಿಚಾರ raise ಆಗಲಿಲ್ಲ. ಇದಕ್ಕೆ ಏನು ಮಾಡಲಿಕ್ಕೆ ಆಗುತ್ತದೆ.

**ಶ್ರೀ ಎಂ. ನಾರಾಯಣಸ್ವಾಮಿ:** ಮಾನ್ಯಸಭಾಪತಿಯವರೆ, ನಾವು ಗೃಹ ಸಚಿವರನ್ನು ಏತಕ್ಕೆ ಕೇಳಿದೆವು ಎಂದರೆ, ಈ ಒಂದು ಘಟನೆಯಾದಾಗ ಗೃಹ ಸಚಿವರು ಕೆಲವೊಂದು ಹೇಳಿಕೆಗಳನ್ನು ಕೊಟ್ಟಿದ್ದರು. ಅದಕ್ಕೋಸ್ಕರವೇ ಅವರೇ ಕ್ಲಾರಿಫೈ ಮಾಡಿದರೆ ಚೆನ್ನಾಗಿರುತ್ತದೆ ಎಂದು ನಾವು ಕೇಳುತ್ತಿದ್ದೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಮಾನ್ಯಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿಯವರು ಸ್ವಲ್ಪ ದೊಡ್ಡತನ ತೋರಿಸಬೇಕು. ಅವರು ಇಲ್ಲಿ ಬಂದು ಕುಳಿತುಕೊಂಡಾಗ ಅವರು ಮಾತನಾಡಲಿಕ್ಕೆ ಅವಕಾಶವನ್ನು ಕೊಡದಿದ್ದರೆ, ಅವರು ಪ್ರತಿದಿನ ಇಲ್ಲಿ ಬಂದು ಕುಳಿತುಕೊಳ್ಳಲಿಕ್ಕೆ ಆಗುತ್ತದೆಯೇ?

**ಶ್ರೀ ಎಂ. ನಾರಾಯಣಸ್ವಾಮಿ:-** ದಿನಕ್ಕೆ 20 ಬಿಲ್‌ಗಳನ್ನು ತೆಗೆದುಕೊಂಡು ಬಂದರೆ, ಅವರಿಗೆ ಮಾತನಾಡಲಿಕ್ಕೆ ಹೇಗೆ ಅವಕಾಶವನ್ನು ಕೊಡಲಿಕ್ಕೆ ಆಗುತ್ತದೆ?

**ಉಪಸಭಾಪತಿಯವರು:-** ಶ್ರೀಯುತ ನಾರಾಯಣಸ್ವಾಮಿಯವರೆ, ಸರ್ಕಾರದಿಂದ ಸ್ಪಷ್ಟವಾದ ಉತ್ತರ ಸಿಕ್ಕಿದರೆ ಸಾಕಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, ಗೃಹ ಸಚಿವರು ನಿನ್ನೆ ಎಲ್ಲಾ ನಿಮ್ಮ ಎದುರುಗಡೆಯಲ್ಲಿಯೇ ಕುಳಿತಿದ್ದಾರೆ. ಬಿಲ್ ತೆಗೆದುಕೊಂಡದ್ದು ರಾತ್ರಿ ವೇಳೆ, ಉತ್ತರ ಕೇಳಿದರೆ, ಕೊಡಲಿಕ್ಕೆ ಅವರು ಇಲ್ಲಿಯೇ ಕಾದು ಕುಳಿತಿದ್ದಾರೆ. ಈ ರೀತಿ ನೀವು ಚಾರ್ಜ್ ಮಾಡಿದರೆ ನಾವು ಉತ್ತರ ಹೇಳಲಿಕ್ಕೆ ಆಗುತ್ತದೆಯೆ? ನಿನ್ನೆ ಎಲ್ಲಾ ಅವರು ಇಲ್ಲಿಯೇ ಕುಳಿತಿದ್ದರು. ಉತ್ತರ ಹೇಳಲಿಕ್ಕೆ ಅವಕಾಶವನ್ನೇ ಕೊಡದಿದ್ದರೆ, ಮಂತ್ರಿಗಳಾದ ನಾವು ಏನು ಮಾಡಲಿಕ್ಕೆ ಆಗುತ್ತದೆ? 24ನೇ ತಾರೀಖಿನಂದು ಮೈಸೂರಿನಲ್ಲಿ ಹೆಣ್ಣುಮಗಳು ಮತ್ತು ಯುವಕ ಬಂದಾಗ ಏನು ಈ ಒಂದು ದುರ್ಘಟನೆ ನಡೆಯಿತು, ಅವರು victimize ಆದರು. ನಾನು ಬಹಳ ಸಮಯ ಮಾತನಾಡಲಿಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಾದನಂತರ ಅವರಷ್ಟಕ್ಕೆ ಅವರೇ ಜೆ.ಎಸ್.ಎಸ್. ಮೆಡಿಕಲ್ ಆಸ್ಪತ್ರೆಗೆ ಹೋಗಿ ದಾಖಲಾಗಿ, ಆ ಯುವಕ ಅವರ ತಂದೆಗೆ ಹೇಳಿದಾಗ, ಅವರ ತಂದೆ ನಮ್ಮ ಪೊಲೀಸ್‌ನವರಿಗೆ ಮಾಹಿತಿಯನ್ನು ಕೊಟ್ಟರು. ಮಾಹಿತಿಯನ್ನು ಕೊಟ್ಟಾಗ ಆ ಹೆಣ್ಣು ಮಗಳು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಮತ್ತೆ, ಈ ಯುವಕ ನನ್ನ ಮೇಲೆ ಹಲ್ಲೆಯಾಯಿತು, ಎಂದು ಹೇಳಿದಾಗ ಅಲ್ಲಿ M.L.C ದಾಖಲಾಯಿತು, ಅಂದರೆ Medico-Legal Case ನ್ನು ತೆಗೆದುಕೊಂಡರು. Procedure ಹೇಗಿದೆ ಎಂದರೆ ಮೆಡಿಕೋ-ಲೀಗಲ್ ಕೇಸ್‌ನ್ನು ತೆಗೆದುಕೊಂಡ ಮೇಲೆ ಹೆಣ್ಣುಮಗಳ ಮೇಲೆ ಏನಾದರೂ ಲೈಂಗಿಕ ಕಿರುಕುಳ ಅಥವಾ ಅತ್ಯಾಚಾರಗಳಾಗಿದ್ದರೆ, ಒಬ್ಬರು ಮಹಿಳಾ ವೈದ್ಯಾಧಿಕಾರಿ ಬಂದು ನೋಡಿದ ನಂತರ ಮುಂದಿನ procedure ನಡೆಯುತ್ತದೆ. ಏತಕ್ಕೆ IPC ಕಲಂ 354 ರಡಿಯಲ್ಲಿ complaint ಅನ್ನು ದಾಖಲು ಮಾಡಿದ್ದೀರಿ ಎಂದು ನೀವು ಕೇಳಬಹುದು. ತಮಗೆ ಗೊತ್ತಿರುವಂತೆ ಇತ್ತೀಚೆಗೆ 2006 ರಲ್ಲಿ Indian Penal Code, Criminal Procedure Code ಮತ್ತು Evidence Act ಬಗ್ಗೆ ಬಹಳಷ್ಟು ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರ ಮಾಡಿದೆ. ಇದರಲ್ಲಿ ಶ್ರೀಯುತ ಎಸ್.ಆರ್. ಪಾಟೀಲ್ ರವರಿಗೆ ಗೊತ್ತಿರುವಂತೆ IPC Sections 304B, 312, 313, 314, 326A, 326B, 354, 354B, 354C, 354D, 366, 366B, 367A, 370, 372, 376, 376A, 376 AB, 376C, 376D, 376 DA, 376 DB and 510 ಗಳಿಗೆ ತೀವ್ರತರವಾಗಿ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿ ನಮಗೆ ಒಂದು SOP ಯನ್ನು ಕೊಟ್ಟಿದೆ. ಪೊಲೀಸ್‌ನವರು ಇಂತಹ ಪ್ರಕರಣಗಳಲ್ಲಿ ಯಾವರೀತಿಯಲ್ಲಿ ವರ್ತಿಸಬೇಕೆಂದು ಹೇಳಿದೆ. ಅದರಲ್ಲಿ ಎಫ್.ಐ.ಆರ್. ಮಾಡಬೇಕಾದರೆ ಸ್ಪಷ್ಟವಾಗಿ ಹೇಳಲಾಗಿದೆ. "All the offences related to women are cognizable. Hence, the SHO shall register the information under Section 154 of Cr.P.C. when he receives the information of crime without fail or delay." So, it is duly registered under Section 154 of Cr.P.C. ಅಥವಾ IPC ಕಲಂ 354 ಅಡಿಯಲ್ಲಿ ದಾಖಲಾಗಿದೆ. ಆದಾದನಂತರ, "...if the reported crime is said to be committed beyond the jurisdiction of that police station, then the SHO shall register Zero FIR as per the Circular No.CRM/2/139/W.P.219 dated so and so issued by the Chief Office. ಎಂದು ಇದೆ. ಇದು ಏನಾಯಿತು ಎಂದರೆ ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ Medico-Legal Case ತೆಗೆದುಕೊಂಡವರು ರಿಪೋರ್ಟ್ ಮಾಡಿದರು. ಆ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ತೆಗೆದುಕೊಂಡು ಹಾಲನಹಳ್ಳಿ ಪೊಲೀಸ್ ಠಾಣೆಗೆ ಅದನ್ನು ತೆಗೆದುಕೊಂಡು ವರ್ಗಾವಣೆ ಮಾಡುವಲ್ಲಿ ಸ್ವಲ್ಪ ವಿಳಂಬವಾಯಿತು. With all this, ಆ ಹೆಣ್ಣುಮಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವಂತಹ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿ ತಮ್ಮ ಮೊದಲನೆ ಪ್ರಶ್ನೆಗೆ ನಾನು ಉತ್ತರ ಹೇಳುತ್ತಿದ್ದೇನೆ. 15 ಗಂಟೆ ಏತಕ್ಕೆ ವಿಳಂಬ ಮಾಡಿದಿರಿ ಎಂದು ಕೇಳಿದ್ದೀರಿ.

**ಮುಂದು.**

**(1013) 24.09.2021 11.50 ಎಸ್‌ವಿ-ಎಕೆ**

**(ಉಪ ಸಭಾಪತಿಯವರ ಉಪಸ್ಥಿತಿ)**

**Sri J.C. MADHUSWAMY (contd.):-**

This is a procedure which police was bound to do. They have done it. ಅವರು ಹೇಗೆ ತೆಗೆದುಕೊಳ್ಳಬೇಕಾಗಿತ್ತೋ ಹಾಗೆಯೇ ತೆಗೆದುಕೊಂಡಿದ್ದಾರೆ. ಹೇಗೆ transfer ಮಾಡಬೇಕಾಗಿತ್ತೋ, ಹಾಗೆಯೇ transfer ಮಾಡಿ jurisdictional police station ಗೆ ಪ್ರಕರಣವನ್ನು ಕಳುಹಿಸಿದ್ದಾರೆ. MLC (Medico-Legal Case) ಮೈಸೂರಿನ ಕೃಷ್ಣರಾಜಪುರಂನಲ್ಲಿ ಆಯಿತು. ಆದರೆ ಇದು ಆಲನಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತಿತ್ತು.

ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ವಕೀಲರಿದ್ದೀರಿ. ಇದು ಎರಡು ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಹೊಂದಿದ್ದರಿಂದ ಈ problem ನಲ್ಲಿ ಸ್ವಲ್ಪ ವಿಳಂಬವಾಯಿತು. ಮೊದಲನೆಯ instance ನಲ್ಲಿ ಸಂತ್ರಸ್ತೆಯ ಮೇಲೆ ದೌರ್ಜನ್ಯ ಆಗಿದೆ ಎಂದು ಆ ಹುಡುಗ ಕೂಡ ಸರಿಯಾಗಿ ಹೇಳಿರಲಿಲ್ಲ. He wanted to... ಅವರ ತಂದೆಯವರು ಮಗನ ಮೇಲೆ ದೌರ್ಜನ್ಯ ಆಗಿದೆ ಎಂದು ದೂರವಾಣಿ ಮಾಡಿ ತಿಳಿಸಿದರು. They have done their duty. ಅವರ ಸ್ಪಷ್ಟವಾಗಿ ಕ್ರಮ ತೆಗೆದುಕೊಂಡಿದ್ದಾರೆ. ಹಾಗಾದರೆ ಏಕೆ ಖಾಸಗಿ ಆಸ್ಪತ್ರೆಗೆ ಹೋದಿರಿ ಎಂದು ತಾವು ಕೇಳಿದಿರಿ. "When the victim directly approaches the SHO for registration of information...", ಈ ಕೇಸ್‌ನಲ್ಲಿ ಅವರಾಗಿಯೇ ಆಸ್ಪತ್ರೆಗೆ ಹೋಗಿದ್ದಾರೆ ಎಂಬುದನ್ನು ನಾನು ಸ್ಪಷ್ಟ ಪಡಿಸುತ್ತಿದ್ದೇನೆ. "Even otherwise, if the SHO finds that she needs immediate medical attendance and treatment, then he shall take all necessary steps to forward her to the nearest government hospital or to the nearest private hospital with women personnel." ಅಕಸ್ಮಾತ್ ಖಾಸಗಿ ಆಸ್ಪತ್ರೆಗೆ ಕಳುಹಿಸಿದ್ದರೂ, ಈಗ ಅದು ತಪ್ಪಾಗುವುದಿಲ್ಲ. ಇದು ಮೆಡಿಕಲ್ ಕಾಲೇಜು. Best available treatment ಸಿಗಬಹುದಾದ ಜೆ.ಎಸ್.ಎಸ್. ಮೆಡಿಕಲ್ ಕಾಲೇಜಿಗೆ ಅವರನ್ನು ಕರೆದುಕೊಂಡು ಹೋಗಿ ಸೇರಿಸಿರುವುದರಿಂದ ಇಲ್ಲಿ ಮುಚ್ಚುಮರೆ ಏನೂ ಇಲ್ಲ. ಏಕೆ ಸರ್ಕಾರಿ ಆಸ್ಪತ್ರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಲಿಲ್ಲ, ಇಲ್ಲಿ ಏನೋ ಮಾಡುವುದಕ್ಕೆ ಈ ರೀತಿ ಮಾಡಿದ್ದಾರೆ ಎಂಬುದನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ಏಕೆಂದರೆ ನಿಮಗೆ ಗೊತ್ತಿದೆ. ಇದರಲ್ಲಿ ಯಾರನ್ನಾದರೂ ಉಳಿಸುವುದರಿಂದ ಸರ್ಕಾರಕ್ಕೆ ಏನೂ ಆಗಬೇಕಾಗಿಲ್ಲ. ಆ ಹುಡುಗಿ ಈ ರಾಜ್ಯದವರಲ್ಲ. ಎಲ್ಲಿಂದಲೋ ಬಂದಿದ್ದವರೆಂಬುದು ನಿಮಗೂ ಗೊತ್ತಾಗಿದೆ. ಆಮೇಲೆ ಸಿ.ಆರ್.ಪಿ.ಸಿ. ಯ ಸೆಕ್ಷನ್ 164 ಅಡಿಯಲ್ಲಿ ಆಕೆ ಮ್ಯಾಜಿಸ್ಟ್ರೇಟ್‌ರವರ ಮುಂದೆ ಸಾಕ್ಷ್ಯವನ್ನು ನುಡಿಯುವವರೆವಿಗೂ ನಾವು conclusion ಗೆ ಬರುವುದಕ್ಕೆ ಆಗುತ್ತಿರಲಿಲ್ಲ. ಅಲ್ಲಿ ಕೂಡ "with her consent" ಎಂದು ಸ್ಪಷ್ಟವಾಗಿ ಕಾನೂನು ಹೇಳುತ್ತದೆ. ಆಕೆಯ consent ತೆಗೆದುಕೊಂಡು ನಾವು ಮುಂದುವರೆಯಬೇಕಿತ್ತು. ಆದರೆ ಆಕೆ ಆ ಸ್ಥಿತಿಯಲ್ಲಿರಲಿಲ್ಲ. ಆದರೂ ಪೊಲೀಸರು ಆಕೆಯನ್ನು convince ಮಾಡಿ ಆಕೆಯಿಂದ ಒಂದು ದೂರನ್ನು ಪಡೆದುಕೊಳ್ಳಲು ಸುಮಾರು 8-10 ದಿನಗಳ ಸಮಯವನ್ನು ತೆಗೆದುಕೊಂಡಿತು. ನಂತರ ಆಕೆಯನ್ನು ಕರೆದುಕೊಂಡು ಬಂದು ಮ್ಯಾಜಿಸ್ಟ್ರೇಟರವರ ಮುಂದೆ ಸಿ.ಆರ್.ಪಿ.ಸಿ. ಯ ಸೆಕ್ಷನ್ 164 ಅಡಿಯಲ್ಲಿ ಹೇಳಿಕೆಯನ್ನ ಮಾಡಿಸಿದ್ದಾರೆ. ಆಕೆ ಏನು ಹೇಳಿಕೆ ಮಾಡಿದ್ದಾರೆ ಎಂಬುದು that is between herself and the jurisdictional Magistrate ಆಗಿರುವುದರಿಂದ ನಾನು ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ.

ಇಲ್ಲಿ ನಾನು ನಿಮಗೆ ಸ್ಪಷ್ಟ ಪಡಿಸಬಯಸುವುದೇನೆಂದರೆ ನಮ್ಮ ಪೊಲೀಸ್ ಕಡೆಯಿಂದ ಯಾವ ಅಚಾತುರ್ಯ ಆಗಿರುವುದಿಲ್ಲ. ಯಾರ ಪರವಾಗಿಯೂ ಪೊಲೀಸರು ವರ್ತಿಸಿರುವುದಿಲ್ಲ. ಎಲ್ಲಿಯೋ ಒಂದು ಕಡೆ ಸರ್ಕಾರ ತಪ್ಪು ಮಾಡಿತು, ಪೊಲೀಸರು ಎಲ್ಲಿಯೋ ಒಂದು ಕಡೆ ಸಂತ್ರಸ್ತೆಯ ವಿರುದ್ಧವಾಗಿ ಆರೋಪಿಗಳಿಗೆ ಸಹಾಯ ಮಾಡಿದ್ದಾರೆ ಎನ್ನುವ ಭಾವನೆಯನ್ನು ದಯಮಾಡಿ ಮಾನ್ಯ ಸದಸ್ಯರು ಮನಸ್ಸಿನಿಂದ ತೆಗೆದುಹಾಕಬೇಕು ಎನ್ನುವುದು ಸರ್ಕಾರದ ವಿನಂತಿ. Because everything is clear. ಗಲಾಟೆಯಾಯಿತು, ಅವರಾಗಿಯೇ ಆಸ್ಪತ್ರೆಗೆ ಹೋದರು, ಅವರ ತಂದೆ message ಕೊಡುತ್ತಾರೆ, ಆಗ ನಮ್ಮ ಪೊಲೀಸ್ act ಮಾಡುತ್ತಾರೆ. ಅಷ್ಟರೊಳಗೆ they have done it properly. ಜೆ.ಎಸ್.ಎಸ್ ಮೆಡಿಕಲ್ ಕಾಲೇಜಿನಲ್ಲಿ Medico-Legal Case ಅನ್ನು attend ಮಾಡಿರುತ್ತಾರೆ. ನಂತರ ತಜ್ಞ ಮಹಿಳಾ ವೈದ್ಯರನ್ನು ಕರೆಸಿ further examination ಗೆ ತೆಗೆದುಕೊಂಡಿರುತ್ತಾರೆ. Further examination ಆದ ನಂತರ ಇದು reveal ಆಗುತ್ತದೆ. Then we have changed our FIR. ಯಾವುದೇ ಕ್ರಿಮಿನಲ್ ಕೇಸ್ ಆದರೂ UDR (Unnatural Death Report) ತೆಗೆದುಕೊಳ್ಳುತ್ತೇವೆಂಬುದು ತಮಗೆ ತಿಳಿದಿದೆ. Post-mortem report ಬಂದ ನಂತರ ಅದನ್ನು murder ಗೆ convert ಮಾಡಲಾಗುತ್ತದೆ. Straightaway we will not take any case for

murder. 'Suspicious Death' ಎಂದು ತೆಗೆದುಕೊಳ್ಳುತ್ತೇವೆ. ಆ ನಂತರ on certification of the Medical Officer, ಅದನ್ನು convert ಮಾಡಿಕೊಳ್ಳುತ್ತೇವೆ. ಇಲ್ಲಿಯೂ ಹಾಗೆಯೇ Section 354 of the Indian Penal Code ಅಡಿಯಲ್ಲಿ ತೆಗೆದುಕೊಂಡು ನಂತರ we have taken it under Section 376 of the IPC. ಅದು IPC Section 376B ಅಥವಾ 376D ಅಡಿಯಲ್ಲಿ gang rape ಗೆ ನಾವು ಕೇಸ್ ಅನ್ನು ತೆಗೆದುಕೊಂಡಿದ್ದೇವೆ. ಆದರೆ ಬಹಳ ತೀವ್ರವಾಗಿ, ಬಹಳ ತೀಕ್ಷ್ಣವಾಗಿ, ಬಹಳ ಗಂಭೀರವಾಗಿ ನಾವು ಈ ಪ್ರಕರಣವನ್ನು ತೆಗೆದುಕೊಂಡಿದ್ದೇವೆ ಎನ್ನುವುದು ತಮಗೆ ತಿಳಿಯಬೇಕು. ಎಲ್ಲೆಲ್ಲಿ ಹೋಗಬೇಕೋ ಅಲ್ಲೆಲ್ಲಾ ಹೋಗಿ ಇಷ್ಟು ಬೇಗ all the six Accused ಅನ್ನು ಕರೆತಂದು case book ಮಾಡಿ ಒಳಗೆ ಹಾಕಿರುವ ಕೆಲಸ ನಮ್ಮ ರಾಜ್ಯದ ಪೊಲೀಸರು ಮಾಡಿದ್ದಾರೆ. ಇಲ್ಲಿ ಪೊಲೀಸರಿಂದ ಅಂತಹ ಬೇಜವಾಬ್ದಾರಿ ವರ್ತನೆಯಿದೆ ಅಥವಾ negligence ಇದೆ ಎಂದು ನಾವು ಅಂದುಕೊಳ್ಳುವುದಕ್ಕಾಗುವುದಿಲ್ಲ.

ಎರಡನೆಯದಾಗಿ ಮೈಸೂರಿನಲ್ಲಿ adequate police staff ಇಲ್ಲ ಎಂದು ಚರ್ಚೆಗಳಾಗಿವೆ. ಇಡೀ ರಾಜ್ಯಕ್ಕೆ ಹೋಲಿಸಿದರೆ Mysuru is the best place where police are more in number. ಅದು ಹೇಗೆ ಎಂದು ನಾನು ನಿಮಗೆ ಮಾಹಿತಿ ಕೊಡುತ್ತೇನೆ. ಮೈಸೂರಿನಲ್ಲಿರುವಷ್ಟು ಪೊಲೀಸರನ್ನು ರಾಜ್ಯದ ಬೇರೆಲ್ಲೂ deploy ಮಾಡಿರುವುದಿಲ್ಲ. ರಾಜ್ಯದ average ಗಿಂತಲೂ ಹೆಚ್ಚು ಸಂಖ್ಯೆಯ ಪೊಲೀಸರು ಮೈಸೂರಿನಲ್ಲಿದ್ದಾರೆ. Beat ಮಾಡಬೇಕು, watch ಮಾಡಬೇಕು, intelligence ನಲ್ಲಿ ಇಂತಹ ಪ್ರಕರಣಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾವು ಅಂದುಕೊಳ್ಳಬಹುದು. ಆದರೆ ಈ rape ಪ್ರಕರಣಗಳು ದಿಢೀರ್ ಆಗುವಂತಹವು. ಅದನ್ನು ಯಾರೂ anticipate ಮಾಡುವುದಕ್ಕಾಗುವುದಿಲ್ಲ. ಎಲ್ಲಿಯೂ ಮಾತನಾಡುವುದಕ್ಕೂ ಆಗುವುದಿಲ್ಲ.

ತಮಗೆ ಹೇಳಿದರೆ ತಪ್ಪಾಗಬಾರದು. ಮೊದಲೆಲ್ಲಾ ಕೋರ್ಟ್‌ನಲ್ಲಿ saying ಇತ್ತು. ಅದೇನೆಂದರೆ, "Rape cannot be established unless there is evidence". ಅದಕ್ಕೆ counter ಹೇಗಿತ್ತೆಂದರೆ, "If there is evidence, how can the rape take place". ಸಾಕ್ಷ್ಯವಿಲ್ಲದೆ ಅತ್ಯಾಚಾರವನ್ನು establish ಮಾಡುವುದಕ್ಕಾಗುವುದಿಲ್ಲ. ಸಾಕ್ಷ್ಯ ಇದ್ದ ಕಡೆ ಅತ್ಯಾಚಾರವಾಗುವುದು ಕಷ್ಟ. ಅದು legal lacuna. ನಮ್ಮ ದೃಷ್ಟಿಯಲ್ಲಿ ತಮಗೆ ಬಂದಿರುವ ಭಾವನೆಯು ನೈಜವಾದುದಲ್ಲ. ಮೈಸೂರಿನಲ್ಲಿ ಎಷ್ಟು ಪೊಲೀಸರು ಇದ್ದಾರೆನ್ನುವ ಮಾಹಿತಿ ನನ್ನ ಬಳಿಯಿತ್ತು, ಬಹುಶಃ ನಾನು ಆ ಮಾಹಿತಿಯನ್ನು ಇಲ್ಲಿ ತಂದಿರುವುದಿಲ್ಲ. Adequate police are there in Mysuru and Mysuru establishment. ಆದ್ದರಿಂದ ನಮ್ಮ ಪೊಲೀಸರು ಬೇಜವಾಬ್ದಾರಿಯಾಗಿ ವರ್ತಿಸಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Regarding certification and all that, main question ಇಲ್ಲಿ ಸದನದ ಮುಂದೆ ಉದ್ಭವವಾಗಿದ್ದು, ಸರ್ಕಾರಿ ಆಸ್ಪತ್ರೆಗೆ ಸೇರಿಸಲಿಲ್ಲ, ಎಲ್ಲಿಯೋ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದೀರಿ, ಅದರಿಂದ ಮುಂದಿನ ದಿನಗಳಲ್ಲಿ ಕೇಸ್ weak ಆಗುವಂತಹ ಸ್ಥಿತಿ ನಿರ್ಮಾಣವಾಗುತ್ತದೆ ಎಂಬುದು. That is not the fact. Whether it is a private hospital or a medical college hospital or a government hospital, it remains same under law. ಇದು ನಾವು ಮುಂದೆ ಮಾಡುವ investigation ಗೆ ಯಾವ ರೀತಿಯಲ್ಲಿಯೂ ಈ ಕೇಸ್‌ನ ವಿರುದ್ಧವಾಗಿ ಹೋಗುವುದಿಲ್ಲ ಎನ್ನುವ ಭರವಸೆಯನ್ನು ನಿಮಗೆ ನಾವು ಕೊಡುತ್ತೇವೆ.

ಈ ಕೃತ್ಯದಲ್ಲಿ involve ಆಗಿರುವವರು criminal record ಇರುವವರೇ. ಆ ಐದಾರು ಜನರಿಗೆ ಬೇರೆ ಬೇರೆ ರಾಜ್ಯಗಳಲ್ಲಿ criminal records ಇದೆ. ಅವರು ಮಾಡಿರುವ ಅಮಾನವೀಯ ಕೃತ್ಯವು ದಿಢೀರ್ ಎಂದಾಗಿರುವುದನ್ನು ಬಿಟ್ಟರೆ ಯಾವುದೋ scheme ಮಾಡಿ, plan ಮಾಡಿ ಆ ಜಾಗಕ್ಕೆ ಬಂದು ಮಾಡುವುದಕ್ಕೆ ಅವರೂ ಸ್ಥಳೀಯರಲ್ಲ, ಇವರೂ ಸ್ಥಳೀಯರಲ್ಲ. ಇದೊಂದು ಹೀನಾಯ ಕೃತ್ಯವಾದರೂ ನಿರೀಕ್ಷೆ ಮಾಡದಂತೆ ನಡೆದಿದೆ. ನಾವು ನಮ್ಮ ಕಡೆಯಿಂದ ಏನೇನೂ ಆಗಬೇಕೋ ಆ ಎಲ್ಲಾ parameters ಅನ್ನು ಪೊಲೀಸರು ಉಪಯೋಗಿಸಿಕೊಂಡು ಅದನ್ನು establish ಮಾಡಿದ್ದಾರೆ. ನಾವು ಅವರನ್ನು ಕೋರ್ಟ್ ಮುಂದೆ ತರಲಿಕ್ಕೆ, ಅವರನ್ನು punish ಮಾಡಲಿಕ್ಕೆ ಯಾವ ರೀತಿಯಲ್ಲಿ ಮುಂದುವರೆಯಬಹುದೋ, ಆ ಎಲ್ಲಾ ರೀತಿಯ ಕ್ರಮಗಳನ್ನು ನಾವು ಜರುಗಿಸುತ್ತೇವೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇದರಲ್ಲಿ ನಾನು ಇನ್ನೂ ಹೆಚ್ಚಿಗೆ ಏನೂ ಹೇಳುವುದಕ್ಕಾಗುವುದಿಲ್ಲ. Because when the case is in the investigation stage, revealing much information is not fair on the part of the government. ಸರ್ಕಾರ ಅಥವಾ ನಾವು ಹೆಚ್ಚು ವಿಷಯ ತಿಳಿದಿದ್ದರೂ ಏನನ್ನೂ ಹೆಚ್ಚಿಗೆ ಮಾತನಾಡಬಾರದು. ನಾವು ಇಲ್ಲಿ ಏನೇ ಮಾತನಾಡಿದರೂ it goes to public domain. It entirely harpens or damages the investigation mode. ಆದ್ದರಿಂದ ಇದಕ್ಕಿಂತ ಹೆಚ್ಚಿಗೆ ಬೇರೇನನ್ನೂ ನಾನು ಹೇಳುವುದಕ್ಕಾಗುವುದಿಲ್ಲ.

ಮಾನ್ಯ ರಮೇಶ್ ಅವರೇ, ತುಮಕೂರಿನ ಘಟನೆ ನಡೆದ ಸ್ಥಳಕ್ಕೆ ನಾನೇ ಭೇಟಿ ನೀಡಿದ್ದೇನೆ. ನಾನು ಅವರಿಗೆ comfort ಮಾಡಿದ್ದೇನೆ. ದುರದೃಷ್ಟಕರ ಸಂಗತಿ ಎಂದರೆ ಗಂಡ ಯಾವುದೋ ಖಾಸಗಿ ಕಂಪನಿಯಲ್ಲಿ ಸಣ್ಣ ಕೆಲಸ ಮಾಡಿಕೊಂಡಿದ್ದನು. ಸಂತ್ರಸ್ತೆ ಗೌರವಸ್ಥೆ. ಈ ಕಾಲದಲ್ಲಿ ಅಂತಹವರು ಸಿಗುವುದಿಲ್ಲ. ಪ್ರತಿನಿತ್ಯ ದನ ಹಿಡಿದುಕೊಂಡು ಹಳ್ಳದ ಹತ್ತಿರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಯಿಸುವುದಕ್ಕಾಗಿ ಹೋಗುತ್ತಿದ್ದರು. ಹಿಂದೆ ಒಂದು ಸಲ ಯಾರೋ ಒಬ್ಬ ವ್ಯಕ್ತಿ ಬಂದು ಆ ಸ್ಥಳದಲ್ಲಿ ಕುಳಿತಿದ್ದನು ಎನ್ನುವ ಒಂದು ಮಾಹಿತಿಯು ನಮಗೆ ಇತ್ತು. ಆಕೆ ಎಂದಿನಂತೆ ಅಲ್ಲಿಗೆ ಹೋದಾಗ ಈ ಘಟನೆ ನಡೆದಿದ್ದು, ಸಾಯಂಕಾಲವಾದರೂ ಯಾರಿಗೂ ಗೊತ್ತಾಗಲಿಲ್ಲ. ಮಗು ಬಂದು ತನ್ನ ತಾಯಿಯಿಲ್ಲವೆಂದು ಅಲ್ಲಿಗೆ ಹುಡುಕಿಕೊಂಡು ಹೋದಾಗ, ತನ್ನ ತಾಯಿಯ ಮೃತದೇಹವನ್ನು ನೋಡಿತು. ಮಾಂಗಲ್ಯದಸರವನ್ನು ಕಿತ್ತು ಕರಿಮಣಿಯನ್ನು ಅಲ್ಲಿಯೇ ಬಿಟ್ಟು ಮಾಂಗಲ್ಯವನ್ನು ತೆಗೆದುಕೊಂಡು ಹೋಗಿದ್ದಾನೆ. As I am the Minister In-Charge of Tumkur District, ಬಹಳ ಗಂಭೀರವಾಗಿ ಈ ಪ್ರಕರಣವನ್ನು ಪರಿಗಣಿಸಿ ಅಂದಿನಿಂದ ಇಂದಿನವರೆವಿಗೂ ಕ್ಯಾಂಪ್ ಮಾಡಿಸಿದ್ದೇವೆ. ಐದು ತಂಡಗಳನ್ನು ರಚನೆ ಮಾಡಿ ಯಾವ ರೀತಿಯಲ್ಲಿ ಕಂಡು ಹಿಡಿಯಲು ಸಾಧ್ಯವೋ ಆ ಎಲ್ಲಾ ಮಾರ್ಗಗಳಲ್ಲಿ work ಮಾಡುತ್ತಿದ್ದೇವೆ. ಆದರೆ ಇದುವರೆವಿಗೂ clue ಸಿಗುತ್ತಿಲ್ಲ. ಆ ಹಳ್ಳಿ ಊರಿಂದ ಒಂದೆರಡು ಕಿಲೋಮೀಟರ್‌ನಷ್ಟು ದೂರವಿದೆ. ನಂಬಲರ್ಹ ಮಾಹಿತಿಯನ್ನು ನೀಡುವವರೂ ಸಿಕ್ಕುತ್ತಿಲ್ಲ. ಹಸುವನ್ನು ಮೇಯಿಸಲು ಹೋದಾಕೆ ವಾಪಸ್ ಹಿಂತಿರುಗಿ ಬರಲಿಲ್ಲ. ಅಷ್ಟು ಹುಡುಗಾಟಕ್ಕೆ ನಾವು ಈ ಪ್ರಕರಣವನ್ನು ಬಿಡುತ್ತೇವೆಂದು ತಾವು ಭಾವಿಸಿಕೊಳ್ಳಬೇಡಿ. ನಮಗೆ clue ಇಲ್ಲ.

**(...ಮುಂದು)**

(1014) 24-09-2021,12.00 ಕೆಜಿ RN **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ. ಮಾಧುಸ್ವಾಮಿ (ಮುಂದು):-**

ತನಿಖೆಯನ್ನು ಅಷ್ಟು ಸುಲಭವಾಗಿ ಮಾಡುವುದಕ್ಕೆ ಆಗುವುದಿಲ್ಲವೆಂದು ತಮಗೂ ಗೊತ್ತಿಗೆ. ಏನಾದರೂ ಸಣ್ಣ ಪುಟ್ಟ clue ಅನ್ನು ಹಿಡಿದುಕೊಂಡು ಹೋಗಬೇಕಾಗುತ್ತದೆ. ನಾವು ಬಹಳ ಪ್ರಯತ್ನ ಪಡುತ್ತಿದ್ದೇವೆ. ಏಕೆಂದರೆ, ತುಮಕೂರಿಗೆ ಇಂತಹದ್ದು ಅಪರೂಪ. ನಾವು ಇದನ್ನು ಏನಾದರೂ ಮಾಡಿ books ಗೆ ತರಲೇಬೇಕೆಂದು ಒತ್ತಡ ಮಾಡಿ ಆ ಕೇಸಿನಲ್ಲಿ ತನಿಖೆಯನ್ನು ಮಾಡುತ್ತಿದ್ದೇವೆ. ನಮ್ಮ Superintendent of Police ರವರು ಬಹಳ serious. ಅವರು ಅವತ್ತಿನಿಂದ ಅಲ್ಲಿ camp ಮಾಡಿದ್ದಾರೆ. ಅಂದರೆ, ಅಲ್ಲಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾದರೂ ಸಣ್ಣ ಪುಟ್ಟ ಮಾಹಿತಿ ಸಿಗುತ್ತದೆಯೇ ಎಂದು ಕೇಳುತ್ತಿದ್ದಾರೆ. ಆದರೆ, ಏನು ಮಾಹಿತಿ ಸಿಗುತ್ತಿಲ್ಲ. ಅವರ husband ಹತ್ತಿರ ನಾನೇ ಮಾತನಾಡಿದೆ. ಆತನಿಗೂ ಪಾಪ ಸ್ಥಳೀಯವಾಗಿ ಯಾರ ಮೇಲೆಯೂ ಅನುಮಾನ ಇಲ್ಲ. ಹಾಗಾಗಿ, ಈ ಪ್ರಕರಣದಲ್ಲಿಯೂ ಸಹ ಆರೋಪಿಗಳನ್ನು ತಂದು ಶಿಕ್ಷೆಗೆ ಒಳಪಡಿಸುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. We have hopes. ನಾವು ಮಾಡಿಯೇ ಮಾಡುತ್ತೇವೆ. ಎಷ್ಟೇ ಕಷ್ಟವಾದರೂ ಸಹ, ಆರೋಪಿಗಳನ್ನು ತಂದು ಕಾನೂನಿನ ಕಟ್ಟಲೆಗೆ ಒಪ್ಪಿಸುತ್ತೇವೆ ಎನ್ನುವಂತಹ ವಿಶ್ವಾಸ ಮತ್ತು ಅಭಿಪ್ರಾಯ ಜಿಲ್ಲಾಡಳಿತಕ್ಕೆ ಇದೆ. That we are going to do. ಮತ್ತೆ ಇದಲ್ಲದೇ ತಮಗೆ ಗೊತ್ತಿದೆ, IPC, CrPC, Evidence Act ಗಳು ಬಹಳಷ್ಟು amendment ಆಗಿವೆ. SOP (Standard Operation Procedures) ಬಿಟ್ಟು ಪೊಲೀಸರು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. I am very frank ಅವರೇ, modalities fix ಮಾಡಿಬಿಟ್ಟಿದ್ದಾರೆ. Standard Operation Procedures ಅನ್ನು ಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ. ನಾನು ತಮಗೆ SOP copy ಯನ್ನು ಕಳುಹಿಸುತ್ತೇನೆ. ಅದರಲ್ಲಿ ಏನಾಗಿದೆ ಎಂದರೆ, ಅದನ್ನು ಬಿಟ್ಟು ಅವರು follow ಮಾಡುವುದಕ್ಕೆ ಹೋದರೆ, ನಾಳೆ ದಿವಸ ಬಹಳ ತಪ್ಪಾಗುತ್ತದೆ. ನ್ಯಾಯಾಲಯದಲ್ಲಿ ಪೊಲೀಸರು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. Doctrine ತಮಗೆ ಗೊತ್ತಲ್ಲವೇ; 'Let hundred criminals get away but a single innocent shall not be punished' ಅಂತ. ಈ Doctrine ನಲ್ಲಿ ನಾವಿದ್ದೇವೆ. ನೂರು ಜನ criminals ತಪ್ಪಿಸಿಕೊಂಡರೂ ಪರವಾಗಿಲ್ಲ. ಒಬ್ಬ ನಿರಾಪರಾಧಿಗೆ ಶಿಕ್ಷೆಯಾಗಬಾರದು. ಹಾಗಾಗಿ, ಯಾರು ಆರೋಪಿ, ಯಾರು ನಿರಪರಾಧಿ ಎಂದು ತೀರ್ಮಾನ ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. ನಾವು ಅವರನ್ನುನ್ಯಾಯಾಲಯದ ಮುಂದೆ ನಿಲ್ಲಿಸಬಹುದು. ಅದೇರೀತಿ ನಾವು ಇನ್ನೊಂದು ಮಾತನ್ನು ಹೇಳುತ್ತೇವೆ. Justice hurried, Justice buried. ನಾನು ಇಲ್ಲಿ Justice hurried is Justice buried ಅಂತಾ, Justice delayed is Justice denied ಅಂತ ಒಂದರಲ್ಲಿ ಹೇಳುತ್ತೇವೆ. ಇನ್ನೊಂದು ಕಡೆ, Justice hurried is Justice buried ಎಂದು ಹೇಳುತ್ತೇವೆ. Justice ಅನ್ನು hurry ಮಾಡುವುದಕ್ಕೆ ಆಗುವುದಿಲ್ಲ. ಈ ಎರಡು contradict ಇರುವುದರಿಂದ we have to pass in such way. ನಾವು ಇದನ್ನು ಒಂದೊಂದೇ ಹಂತದಲ್ಲಿ maintain ಮಾಡಿಕೊಂಡು ಹೋಗಬೇಕಾಗಿದೆ. Government is very serious. ನಮ್ಮ ಸನ್ಮಾನ್ಯ ಗೃಹ ಸಚಿವರು ಅಲ್ಲಿ ಏನು ಮಾತನಾಡಿದ್ದಾರೆ, ಏನು ಮಾಡಿದರು, ಏನು ಬಿಟ್ಟಿದ್ದಾರೆಂದು ನಾನು ಅವರ ಪರವಾಗಿ ಇಲ್ಲಿ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. But as far as the offence is concerned Government and Police have very serious. We are going in accordance with law. They have tried every level best. Rather appreciate our Police

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Force. ಅಷ್ಟು ಬೇಗ ಎಲ್ಲೆಲ್ಲಿಗೊ ಹೋಗಿ ನಾವು ಎಲ್ಲಿಗೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಂತಹ ಕಡೆಗಳಿಂದ ಅವರನ್ನು ತಂದು ಒಳಗೆ ಹಾಕಿದ್ದಾರೆ. They have gone to parents of that victim. ಗಂಟೆ ಗಟ್ಟಲೇ, ದಿವಸಗಟ್ಟಲೇ convince ಮಾಡಿ ಅವರನ್ನು ಕರೆದುಕೊಂಡು ಬಂದು 164 CrPC., ಹೇಳಿಕೆಯನ್ನು ಕೊಡಿಸಿದ್ದಾರೆ. Honestly speaking. ಅವರು ಖಂಡಿತವಾಗಿ prepare ಆಗಿರಲಿಲ್ಲ. Forget it. ನಾವು ಆಯಿತು, ನಮ್ಮ ಪಾಡು, ಇದು ಮುಗಿದು ಹೋಯಿತು, ನಮ್ಮ ತಂಟೆಗೆ ಬರಬೇಡಿ. ಇದರಿಂದ ನಮಗೆ ಏನು ಆಗಬೇಕಾಗಿಲ್ಲ ಎನ್ನುವಂತಹ ಲೆವೆಲ್‌ನಲ್ಲಿದ್ದವರನ್ನು they have brought from other State. ಕುಳಿತುಕೊಂಡು Statement under Section.164 CrPC, ಮಾಡಿಸುವುದಕ್ಕೆ ಪೊಲೀಸರು ಅವರ ಮನವಲಿಸುವಂತಹ ಕೆಲಸವನ್ನು ಮಾಡಿದ್ದಾರೆ. ನಿನ್ನೆ ದಿವಸ ಈ ಸದನದಲ್ಲಿ ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರು ಈ ಪ್ರಕರಣದಲ್ಲಿ Section 164 CrPC, ಮಾಡಿದ್ದಾರೆಯೇ ಎಂದು ಕೇಳಿದರು. Yes, statement under 164 CrPC, ಆದ ಮೇಲೆ ಪ್ರಕರಣಕ್ಕೆ foundation ಬರುತ್ತದೆ. Section 164 CrPC, ಆಗದೆಯೇ, ಈ investigation, further proceed ಆಗುವುದಕ್ಕೆ ಆಗುತ್ತಿರಲ್ಲಿಲ್ಲ. Because statement under section 164 CrPC has already given before a Magistrate. ನಾವು ಇದನ್ನು serious ಆಗಿ ತೆಗೆದುಕೊಳ್ಳುತ್ತೇವೆ. Stringent action ತೆಗೆದುಕೊಂಡು culprits ಗಳನ್ನು bring under books. ಇದನ್ನು ತಮಗೆ ಬಹುಶಃ ಸಮಾಧಾನವಾಗಿ ಹೇಳಿದ್ದೇನೆಂದು ಅಂದುಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಇದರ ಬಗ್ಗೆ ಬಹಳ ವ್ಯಾಪಕವಾಗಿ ಮಾತನಾಡಿದ್ದಾರೆ. ನಿಜ. ಸಮಾಜ ಎಷ್ಟೇ ನಾಗರಿಕತೆಗೆ ಬಂದರೂ ಸಹ, ಪಾಶವೀ ಕೃತ್ಯ ಏನು ಮನಸ್ಸಿನಲಿ ಉದ್ಭವವಾಗುತ್ತದೆ, ಅದನ್ನು ಹತೋಟಿಗೆ ತೆಗೆದುಕೊಳ್ಳಲಾರದೆ, ಪಶುಗಳಂತೆ ವರ್ತಿಸುವ ರೀತಿ ಏನು ಕಡಿಮೆಯಾಗಿಲ್ಲ. ಮನುಷ್ಯನಿಗೆ ಮನಸ್ಸು ಇರುತ್ತದೆ. There are aesthetic senses. There are feelings. If you cannot regulate or control, you cannot be called a human being. ಅದನ್ನು ಯಾರಾದರೂ control ಮಾಡುವುದಕ್ಕೆ ಆಗಲಿಲ್ಲ, regulate ಮಾಡಲಿಕ್ಕೆ ಆಗಲಿಲ್ಲವೆಂದರೆ, ಅವರು ಮನುಷ್ಯರೇ ಅಲ್ಲ, ಮೃಗ ಎಂದು ಕರೆಯಲೇಬೇಕಾಗುತ್ತದೆ. ಈ ಮೃಗದ ಸ್ಥಿತಿ ಯಾವ ಯಾವ ಆಯಯಾಮಗಳಲ್ಲಿ ಬರುತ್ತದೆ, ಅದು ಯಾವ ರೀತಿ ಬರುತ್ತದೆ ಎಂದು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅದು ದಿಢೀರ್ ಎಂದು ಬರುತ್ತದೆ. ಇನ್ನು ಕೆಲವರು ವರ್ಷಗಟ್ಟಲೇ ಯೋಚನೆ ಮಾಡಿ ಮಾಡುವವರು ಇರುತ್ತಾರೆ. ಕೆಲವರು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಇಂತಹವರಿಗೆಲ್ಲಾ ಏನಾದರೂ ಮಾಡಲೇಬೇಕೆಂದು, ಭಾರತ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ serious ಆಗಿ ಇಷ್ಟು ಕಾನೂನುಗಳಿಗೆ IPC, CrPC and Evidence Act ಅನ್ನು ಮಾಡಿದ್ದಾರೆ. ಏಕೆಂದರೆ, ನಮಗೆ main amendment ಆಗಬೇಕಾಗಿದ್ದು, Evidence Act. ಹಾಗಾಗಿ, ಇವತ್ತು ಎಲ್ಲೋ ಕಡೆ ಬಂದು ಬಿಟ್ಟಿದ್ದೇವೆ. Evidence ಸಿಕ್ಕಲಿಲ್ಲವೆಂದರೆ, statement of victim will be treated as final ಎಂದು ಹೇಳಬೇಕಾಗುತ್ತದೆ. ಇನ್ನೇನೂ ಮಾಡುವುದಕ್ಕೆ ಆಗುವುದಿಲ್ಲ. ಆಕೆಯ ಹೇಳಿಕೆಯನ್ನೇ ಅಂತಿಮ ಎಂದು ಮಾಡಬೇಕು ಎನ್ನುವಂತಹ ಹಂತದವರೆಗೆ ಇವತ್ತು Standard Operation Procedure ಗಳನ್ನು ನ್ಯಾಯಾಲಯಕ್ಕೆ ಕಾನೂನುಗಳನ್ನು amend ಮಾಡಿಕೊಟ್ಟಿದ್ದೇವೆ. ಯಾರು ಹೇಳಲಿಲ್ಲ ಎಂದಾಕ್ಷಣಕ್ಕೆ drop ಮಾಡುವುದಕ್ಕಾಗುವುದಿಲ್ಲ. ಕೆಲವು ಸಲ ಹೆಣ್ಣು ಮಕ್ಕಳು ಆಗಿದ್ದು ಆಯಿತು, ಮರ್ಯಾದೆ ಏಕೆ ಕಳೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಬರುವುದಿಲ್ಲ. ಕೆಲವರು ಸಹಿಸಿಕೊಂಡುಬಿಡುತ್ತಾರೆ. ಏಕೆಂದರೆ, ಸಮಾಜ ಕೆಟ್ಟವರನ್ನು ಕೆಟ್ಟವರೆಂದು ಹೇಳುವುದಿಲ್ಲ. ನಮ್ಮ ಕಡೆಯ ಒಂದು ಸಂಪ್ರದಾಯದ ಮಾತನ್ನು ಹೇಳುತ್ತೇನೆ. ನಮ್ಮ ಕಡೆ ಗೊಲ್ಲರಲ್ಲಿ ಒಂದು ಸಂಪ್ರದಾಯ ಇತ್ತು. ಯಾದವರಲ್ಲಿ ಯಾರದಾದ್ರೂ ಮತ್ತೊಬ್ಬನಿಗೆ ಚಪ್ಪಲಿಯಲ್ಲಿ ಹೊಡೆದು ಬಿಟ್ಟರೆ, ಚಪ್ಪಲಿಯಿಂದ ಹೊಡೆಸಿಕೊಂಡವನನ್ನು ಊರಿನಿಂದ ಆಚೆಗೆ ಹಾಕುತ್ತಿದ್ದರು. ನಂತರ ಆತ ದೇವರ ಕೆಲಸ ಮಾಡಿ, ಧರ್ಮದ ಕೆಲಸಗಳನ್ನು ಮಾಡಬೇಕಾಗಿತ್ತು. ಕುರಿಗಳನ್ನು ಕಡಿದು ಊರಿಗೆ ಊಟ ಹಾಕಿಸಬೇಕಾಗಿತ್ತು. ಚಪ್ಪಲಿಯಲ್ಲಿ ಹೊಡೆಸಿಕೊಂಡಿದ್ದಾನೆ, ಊರಿನೊಳಗೆ ಸೇರಿಸುವುದಿಲ್ಲವೆಂದು ಹೇಳುತ್ತಿದ್ದರು. ನನ್ನ ಬಳಿಗೆ ಒಂದು ನ್ಯಾಯ ಬಂದಿತ್ತು. ಆಗ ನಾನು ನಿಜವಾದ ಸಮಾಜ ಎಂದರೆ, ಚಪ್ಪಲಿಯಿಂದ ಹೊಡೆದವನಿಗೆ ಈ ರೀತಿ ಮಾಡಬೇಕು. ಅದನ್ನು ಬಿಟ್ಟು ಹೊಡೆಸಿಕೊಂಡವನಿಗೆ ಏಕೆ ಮಾಡುತ್ತೀರಿ; ದಾರಿಯಲ್ಲಿ ಹೋಗುವವನಿಗೆ ಯಾರೋ ಚಪ್ಪಲಿ ಎಸೆದು ಹೋದರೆ ಅದಕ್ಕೆ ಅವನು ನಿಮಗೆ ದಂಡ ಕೊಡಬೇಕೇ ಎಂದು ಕೇಳಿದ್ದೆ. ಯಾರಿಗೆ ಶಿಕ್ಷೆಯಾಗಬೇಕೋ ಅವನನ್ನು ಬಿಟ್ಟು ಇಲ್ಲಿ ಪಾಪ victim ಗೆ ಶಿಕ್ಷೆಯಾಗುತ್ತದೆ. ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಈ ಸಂಪ್ರದಾಯ ನಮ್ಮಲ್ಲಿ ಇತ್ತು. ಯಾರಾದರೂ ಚಪ್ಪಲಿಯಿಂದ ಹೊಡಿಸಿಕೊಂಡ ಎಂದರೆ, ಅವನನ್ನು ಊರಿನಿಂದ ಆಚೆಗೆ ಹಾಕಿ ಧರ್ಮ ಮಾಡು, ದೇವರನ್ನು ಕರೆದುಕೊಂಡು ಬಾ ಊರಿಗೆ ಊಟ ಹಾಕಿಸಿ ಊರಿನೊಳಗೆ ಬಾ ಎಂದು ಹೇಳುತ್ತಿದ್ದರು. ಚಪ್ಪಲಿಯಿಂದ ಹೊಡೆದವನು scot free ಆರಾಮವಾಗಿ ಓಡಾಡುತ್ತಿರುತ್ತಾರೆ. ಹಾಗಾಗಿ, ಅಲ್ಲಿನ ಹುಡುಗರು ಮಾತು ಎತ್ತಿದರೆ, ಚಪ್ಪಲಿಯಲ್ಲಿ ಹೊಡೆದು ಬಿಡುತ್ತೇವೆಂದು ಹೇಳುವುದಕ್ಕೆ ಶುರು ಮಾಡಿಬಿಟ್ಟಿದರು, ಅದರಲ್ಲೂ ಪೂಜೆ ಮಾಡುವಂತಹ ಪೂಜಾರಪ್ಪರವರನ್ನು ನಾವು ಅಲ್ಲಿ ಪಟ್ಟದಪೂಜಾರಿ ಎಂದು ಕರೆಯುತ್ತೇವೆ. ಪಟ್ಟದ ಪೂಜಾರಿಗಳು ಎಂದರೆ, ಅಲ್ಲಿನ ಜನರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆಯೇ ನಡುಗುತ್ತಿದ್ದರು. ಒಬ್ಬ ಅಯೋಗ್ಯನನ್ನು ಕರೆದರೆ ಒಂದೂವರೆ ಕೀಲೋಮೀಟರ್ ದೂರ ಹೋಗುತ್ತಿದ್ದರು. ಏನಾದರೂ ಹೆಚ್ಚು ಕಡಿಮೆಯಾದರೆ ನನ್ನ ಗತಿ ಏನೆಂದು ಹೋಗುತ್ತಿದ್ದರು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇವರು ಏನಾದರೂ ಪೂಜಾರಿಗೆ ಹೊಡೆದುಬಿಟ್ಟರೆ ಏನು ಆಗುತ್ತಿತ್ತು?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಪಟ್ಟದ ಪೂಜಾರಿಗಳು ಮತ್ತೆ ಅವರು ದೇವಸ್ಥಾನದೊಳಗೆ ಹೋಗುವಂತಿಲ್ಲ. ಅವರ ಸಂಪ್ರದಾಯ ಯಾವ ರೀತಿ ಇದೆ ಎಂದರೆ, ಬೇರೆಯವರ ಮನೆಯಲ್ಲಿ ಒಂದು drop ಕಾಫಿ ಸಹ ಕುಡಿಯದಂತೆ ಪೂಜೆ ಕೆಲಸಗಳನ್ನು ಮಾಡಿಕೊಂಡು ಆ ಸಮಾಜದಲ್ಲಿದ್ದಾರೆ. ಅಂತಹ ಕೆಲವು ಸಂಪ್ರದಾಯಗಳು ನಮ್ಮಲಿವೆ. ಇಲ್ಲೂ ಅದೇರೀತಿ ಅವರು ಆರಾಮವಾಗಿ ಓಡಾಡಿಕೊಂಡು ಇರುತ್ತಾರೆ. ಪಾಪ ಹೆಣ್ಣು ಮಕ್ಕಳು ಸೊರಗಿ ಸೊರಗಿ ಹೋಗಿರುತ್ತಾರೆ. ಯಾರು ಜೀವನದಲ್ಲಿ ಏನು ಬೇಕೋ ಅದನ್ನು ಮಾಡುತ್ತಾರೆ, ಅಂತಹವರಿಗೆ ಏನೂ ಆಗುವುದಿಲ್ಲ. ಇನ್ನೂ ಬೇಕಾದರೆ, ಮೀತಿಮಿರಿ ಯಾರ ಬಳಿಯಾದರೂ ಹೇಳಿಕೊಂಡು ಮೆರೆಯುತ್ತಾರೆ. ಹಾಗಾಗಿ, ಇದಕ್ಕೆ ಏನಾದರೊಂದು ಆಗಲೇಬೇಕು. ಇದನ್ನು ಹೀಗೆಯೇ ಬಿಟ್ಟುಕೊಂಡು ಹೋದರೆ, ನಾವು ನಾಗರಿಕ ಸಮಾಜವನ್ನು ರಕ್ಷಣೆ ಮಾಡುತ್ತಿದ್ದೇವೆ, ಬೆಳೆಸುತ್ತಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ನಾವು attempt ಮಾಡಿದ್ದೇವೆ. ನಮ್ಮ ರಾಜ್ಯ ಸರ್ಕಾರ ಶ್ರೀಮತಿ ಪ್ರಮೀಳಾ ನೇಸರ್ಗಿರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿತ್ತು. ಮಾನ್ಯ ರಮೇಶ್‌ಕುಮಾರ್‌ರವರು Speaker ಆಗಿದ್ದಂತಹ ಸಂದರ್ಭದಲ್ಲಿ ಒಂದು ಸದನ ಸಮಿತಿಯನ್ನು ಮಾಡಿದ್ದರು. Atrocities on Women ಗೆ ಏನು recommendations ಕೊಡಬೇಕು, ಅದರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಎಂದು ಮಾಡಿದ್ದರು. ನಾವು ಕೊಟ್ಟಿದ್ದೇವು. ಆಮೇಲೆ ಮಾನ್ಯ ವಿ.ಎಸ್.ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಿತ್ತು. ಈ ಮಧ್ಯೆ ಶ್ರೀಮತಿ ಜಯಮಾಲ ಅವರಿಗೆ ಅಧಿಕಾರ ಕೊಟ್ಟು ಒಂದು ವರದಿಯನ್ನು ತರಿಸಿಕೊಂಡಿದ್ದೇವೆ.

ಮಾನ್ಯ ಸಭಾಪತಿಯವರೇ, ನಮಗೆ Criminal Law amendment ಸ್ವಲ್ಪ ಅಡಚಣೆಯಾಗಿದೆ. ಅದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಾಗುತ್ತದೆ. ನಾವು ಈಗ ಏನೇನು ಮಾಡಬಹುದು ಎನ್ನುವ recommendations ಅನ್ನು ಕೊಟ್ಟಿದ್ದೇವೆ. ಈಗ ಎಲ್ಲವೂ incorporate ಆಗಿದೆ. Acid ಹಾಕಿದರೆ ಏನು ಮಾಡಬೇಕು, acid ಎಸೆಯುವುದಕ್ಕೆ ಹೋದವನಿಗೆ ಏನು ಮಾಡಬೇಕು; Modesty ಗೆ ಏನಾದರೂ ತೊಂದರೆ ಮಾಡಿದರೆ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು, ಕಣ್ಣು ಹೊಡೆಯುವವನಿಗೆ ಏನು ಮಾಡಬೇಕು; ಇವೆಲ್ಲವನ್ನು IPC ನಲ್ಲಿ ತಂದಿದ್ದಾರೆ. ಆದರೆ, ಇನ್ನೂ stringent action ಇಲ್ಲಿ ಆಗಲೇಬೇಕು. We are committed. But we cannot go for Shariat Law for this. ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದಂತೆ, we cannot enact a Shariat Law. ಅವರಿಗೆ ಹೇಳಬೇಕು. ಇಲ್ಲಿ Shariat Law cannot be made use in a civilized country. ಇಲ್ಲಿ ಆಗಲ್ಲ. ಕಳ್ಳತನ ಮಾಡಿದರೆ ಕೈಕಡಿದು ಹಾಕು, ಬೇರೆ ಏನು ಮಾಡಿದರೆ ಅಂಗಾಂಗ ತೆಗೆದುಹಾಕು ಎಂದು ಕಾನೂನಿನಲ್ಲಿ ತರುವುದಕ್ಕೆ ಅಗುವುದಿಲ್ಲ. We have to establish. ಈಗ term of punishment ಹೆಚ್ಚಿಗೆ ಮಾಡಿದ್ದೇವೆ. Imprisonment ಹೆಚ್ಚಿಗೆ ಮಾಡಿದ್ದೇವೆ. ಈಗ seven to ten years, if it is more even up to twenty years or even to till life ಎಂದೇ ಮಾಡಿದ್ದೇವೆ. ಕಾನೂನನ್ನು ಬಹಳ ಮಾಡಿದ್ದೇವೆ. With fine and with rigorous imprisonment. ಇವೆಲ್ಲವನ್ನು amend ಮಾಡಿ ಕೇಂದ್ರ ಸರ್ಕಾರ ನಮಗೆ ಶಕ್ತಿ ಕೊಟ್ಟಿದೆ. ಆದರೆ, burden of proof is on the victim. The burden of proof ಅನ್ನು ಎಲ್ಲಿಯಾದರೂ ಸ್ವಲ್ಪ alter ಮಾಡಬೇಕೆಂದು ಯೋಚನೆ ಮಾಡುತ್ತಿದೇವೆ.

**(ಮುಂದು.,) .**

**(1015) 24-09-2021 (12.10) ಎಂವಿ-ಆರ್‌ಎನ್**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು...):-**

They may not be able to prove. ಇಲ್ಲಿ consensual sex, accidental sex, husband raping wife, husband going against her will. ಸುಮಾರು ingredients ಈ ಕಾನೂನಿನಲ್ಲಿ ಇರುವುದರಿಂದ, ನಾವು ಏಕಾಏಕಿ ಕಾನೂನುಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಕಾನೂನಿನಲ್ಲಿ ಕೆಲವಕ್ಕೆ ರಿಯಾಯಿತಿ ನೀಡುತ್ತಾರೆ. ಮೋಸ ಮಾಡಿ ಗಂಡ rape ಮಾಡಿದ ಎಂದು ಹೇಳುವುದು. ನಾವು ಇವೆಲ್ಲವನ್ನು ಸಹ ಐ.ಪಿ.ಸಿ.,ಯಲ್ಲಿ quote ಮಾಡಿಕೊಂಡು, ಅದನ್ನು ಹೇಳುತ್ತಾ ಬಂದಿದ್ದೇವೆ. Still, I certainly feel it is inadequate. The punishment which is proposed to be awarded to an accused is inadequate. The mode of investigation must be further strengthened it has to be rigorous. ಅದರಲ್ಲಿ ಯಾವುದೇ ರೀತಿಯ ಅನುಮಾನವಿಲ್ಲ. ನಾನು ಬಹಳ ಸ್ಪಷ್ಟವಾಗಿ as a Law Minister of the State ಹೇಳುತ್ತಿದ್ದೇನೆ. ಇದು ಎಲ್ಲಿಯಾದರೂ ಆದಾಗ, ಅಕಸ್ಮಾತ್ ಅವರು ಇದರಲ್ಲಿ ಸಿಕ್ಕಿ ಹಾಕಿಕೊಂಡರೆ ನಮ್ಮ ಜನ್ಮ ಮುಗಿದು ಹೋಯಿತು ಎನ್ನುವಂತಹ ಸ್ಥಿತಿಗೆ ತರದೇ ಹೋದರೆ,

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವುಗಳಿಗೆಲ್ಲಾ ನಾವು ಪರಿಹಾರ ಕಂಡು ಹಿಡಿಯುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಏನು ಮಾಡಿದರೂ ಸಹ ಅದು ನಡೆಯುತ್ತಲೇ ಇದೆ. ಇದಕ್ಕೆ ನಾವು ಎಲ್ಲಾ ರೀತಿಯ ಕಾನೂನುಗಳನ್ನು ತಂದಿದ್ದೇವೆ. ಅಂದರೆ, ಕಚೇರಿಯಲ್ಲಿ ಆದರೆ ಏನು ಮಾಡಬೇಕು? Employer, Employee ಮಧ್ಯ ಆದರೆ ಏನು ಮಾಡಬೇಕು ಮತ್ತು ಮನೆಯಲ್ಲಿ ಆದರೆ ಏನು ಮಾಡಬೇಕು? We have made all provisions under IPC and CrPC., still they are getting out of all these. Rate of punishment is very less because stringent provision of law. Provision of law ಆ ರೀತಿ ಇದೆ. ಅಮಾಯಕನಿಗೆ ಏನಾದರೂ ಶಿಕ್ಷೆ ಆಗುತ್ತದೆಯೇ ಎನ್ನುವಂತಹ ದೃಷ್ಟಿಯಲ್ಲಿ Law constitute ಮಾಡಿರುವುದರಿಂದ, ಸ್ವಲ್ಪ ಮಟ್ಟಿಗೆ ಆಗಿದೆ. But this Government is committed. I am committed. ಇದಕ್ಕೆ ಇನ್ನು ಏನಾದರೂ ತಿದ್ದುಪಡಿಗಳನ್ನು ತಂದು, ಇಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಕ್ಕೆ ನಾವು ಶಾಸನ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗಿದ್ದನ್ನು ಮಾಡಿ, ಉಳಿದಿದ್ದನ್ನು ಏನು ಕೇಂದ್ರದಲ್ಲಿ ನಮ್ಮ ಸರ್ಕಾರವಿದೆ, ಕೇಂದ್ರ ಸರ್ಕಾರಕ್ಕೂ ಶಿಫಾರಸ್ಸು ಮಾಡುತ್ತೇವೆ. ನಮಗೆ ಕಾನೂನು ಅಯೋಗದ ಮುಖಾಂತರ ಶಿಫಾರಸು ಕಳುಹಿಸುವುದಕ್ಕೆ ಅಧಿಕಾರವಿರುವುದರಿಂದ we request the Law Commission to see some amendments are further added to this. ಮತ್ತೆ ಮಾನ್ಯ ಭಾರತಿ ಶೆಟ್ಟಿಯವರು ಹೇಳಿರುವಂತಹ ಮಾತನ್ನು ಒಪ್ಪುತ್ತೇನೆ. ಅವನು ಒಬ್ಬ ಮನುಷ್ಯನಾಗಿ ಬಾಳಬಾರದು. ಅಂತಹ ಒಂದು ಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಖಂಡಿತವಾಗಿ ನಾವು ಪ್ರಯತ್ನ ಮಾಡುತ್ತೇವೆ. ಇದನ್ನು ಸಹಿಸುವುದಿಲ್ಲ. ಇದು ತಲೆ ತಗ್ಗಿಸುವಂತಹ ಸಂಗತಿ. ಮನುಷ್ಯತ್ವ ಇರುವವರು ಇದನ್ನು defend ಮಾಡುವುದಕ್ಕೆ ಆಗುವುದಿಲ್ಲ. As a Government I am bowed. ನಾವು ಈ ರೀತಿಯ ಹಗರಣಗಳನ್ನು ಸರಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ನಾನು ತಮಗೆ ಪ್ರಾಮಾಣಿಕವಾಗಿ ಹೇಳಿದ್ದೇನೆ. ನೀವು ಏನಾದರೂ ಹೇಳಿ, Police have done their duty in accordance with the SOP (Standard Operation Procedures) ಏನು Standard Operation Procedures ಇದೆ, ಅದು 2016 amendments ಆದಮೇಲೆ issue ಆಗಿದೆ. ಆ SOP ಪ್ರಕಾರವೇ ಮಾಡಿಕೊಂಡು ಬರುತ್ತಿದ್ದೇವೆ. ಅಂದರೆ, ಮೊದಲು ಎಫ್.ಐ.ಆರ್., ಅನ್ನು ಯಾವ ಸೆಕ್ಷನ್‌ನಲ್ಲಿ ಹಾಕಬೇಕು. ಆಮೇಲೆ ಅದನ್ನು convert ಮಾಡಬೇಕು. ಆ ನಂತರ statement under Sec.164 Cr.PC ಮಾಡಿಸಬೇಕು. ತದನಂತರ ವಿಚಾರಣೆಯನ್ನು ಪ್ರಾರಂಭ ಮಾಡಬೇಕು. ಇದು ಕ್ರಮಬದ್ಧವಾಗಿದೆ. You have to trust this Government. ಈ ಪ್ರಕರಣದಲ್ಲಿ ಯಾರನ್ನೋ ಉಳಿಸುವುದು ಮತ್ತು ರಕ್ಷಣೆ ಮಾಡುವುದು ಏನೂ ಇಲ್ಲ. ಇಲ್ಲಿ ಯಾರಿಗೆ ಯಾರು ಸಹ ಸಂಬಂಧವಿಲ್ಲ. ಅವರು ಯಾರಿಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧವಿಲ್ಲದವರು. ಅವರು ಪಾಪದವರು. ಹಾಗಾಗಿ ಅದು apprehension ಇರಬಹುದು. We are not acting; we are trying to protect. ಇದೆಲ್ಲವನ್ನು ಸಹ ಮನಸ್ಸಿನಿಂದ ತೆಗೆದುಹಾಕಿ, ಸರ್ಕಾರದ ಮೇಲೆ ವಿಶ್ವಾಸವಿಡಿ. ಇದಕ್ಕೆ ಇನ್ನೂ ಏನಾದರೂ ಅಗತ್ಯ ಬಿದ್ದರೆ, ಇಲ್ಲಿಗೆ ಬಹಳ Skilled ಅಥವಾ Trained Officers ಅನ್ನು ನಿಯೋಜನೆ ಮಾಡಿ, investigation ಅನ್ನು ತೀವ್ರತರವಾಗಿ ಮಾಡಿಸುತ್ತೇವೆ. We have very good lady officers. ನಮ್ಮ ಪೊಲೀಸ್ ಅಧಿಕಾರಿಗಳಿದ್ದಾರೆ. We will call them. ಅವರನ್ನೇ ನಿಯೋಜನೆ ಮಾಡುತ್ತೇವೆ. ಈಗಾಗಲೇ, ನಾವು ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. As a Law Minister, even though there is no SOP. POCSO cases ಗೆ ಸಾಧ್ಯವಾದಷ್ಟು ಮಹಿಳಾ ವಕೀಲರನ್ನೇ ನೇಮಕ ಮಾಡಲು ತೀರ್ಮಾನ ಮಾಡಿದ್ದೇವೆ. Because victim cannot depose before a man. ಅವರ ಮುಂದೆ ಹೇಳಿಕೊಳ್ಳುವುದಿಲ್ಲ. ಅವರು ವಕೀಲರ ಮುಂದೆ ಹೇಳಿಕೊಳ್ಳಬೇಕು ಎನ್ನುವುದಾದರೆ, wherever possible. ಈಗ ನಾವು POCSO Special Court ಗಳನ್ನು ಮಾಡಿದ್ದೇವೆ. ನಮಗೆ ಭಾರತ ಸರ್ಕಾರದಿಂದ ಒಂದು conditions ಇದೆ. More than hundred cases in a District ಇರುವಂತಹ ಕಡೆಗಳಲ್ಲಿ ಮಾತ್ರ ನಾವು POCSO Special Court ಗಳನ್ನು ಮಾಡಬಹುದು. ಈಗಾಗಲೇ ಹತ್ತರಿಂದ ಹನ್ನೆರಡು special court ಗಳನ್ನು ಮಾಡಿದ್ದೇವೆ. ಅಲ್ಲಿಗೆ ಸರ್ಕಾರಿ ವಕೀಲರನ್ನು ನೇಮಕ ಮಾಡಬೇಕಾದರೆ, as for as possible if there is good Standing Lady Advocate, ಅವರಿಗೆ ಕೊಡಬೇಕೆಂದು, ಎಲ್ಲಾ political ಒತ್ತಡಗಳನ್ನು ಮೀರಿ, ನಾನು accommodating Lady Advocates for that posts. ಸರ್ಕಾರದ ಪರವಾಗಿ POCSO ಕೇಸ್‌ಗಳನ್ನು ನಡೆಸುವವರಿಗೆ ಇಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಏಕೆಂದರೆ, ಹನ್ನೆರಡು ವರ್ಷ ಮತ್ತು ಹದಿನೈದು ವರ್ಷದ ಹೆಣ್ಣು ಮಕ್ಕಳ ಮೇಲೆ ಏನು ಅತ್ಯಾಚಾರವಾಗಿರುತ್ತದೆ, ಅದೆಲ್ಲವನ್ನು ಅವರು ಒಬ್ಬ male lawyer ಬಳಿ ಹೇಳುವುದಕ್ಕೆ ಕಷ್ಟವಾಗುತ್ತದೆ ಎಂದು. ಅದು ಏನು gender may not difference between lawyer and victim. ಅದನ್ನು in-camera ದಲ್ಲೆ ಮಾಡುವುದರಿಂದ, ಎಲ್ಲವನ್ನು ಸಹ in-camera ದಲ್ಲೇ ಮಾಡಿದರೂ ಸಹ ಏನೋ ಒಂದು ಕಡೆ ಅದನ್ನು ಹೇಳಿಕೊಳ್ಳುವುದಕ್ಕೆ hesitation ಬರುತ್ತದೆ ಎನ್ನುವುದು ಅದು ಒಂದೇ ಯೋಚನೆಯಾಗಿದೆ. ಹಾಗಾಗಿ ಈ POCSO Court ಅನ್ನು ಏನು ಮಾಡಿದ್ದೇವೆ, ಹಾಗೆಯೇ ಕಾನೂನು ತಿದ್ದುಪಡಿ ಸಹ ಮಾಡಿದ್ದೇವೆ. Charge sheet has to be filed before 90 days ಎಂದು ಸ್ಪಷ್ಟವಾಗಿ ಮಾಡಿದ್ದೇವೆ. ಅಲ್ಲಿ 60 days ಮಾಡಿದ್ದೇವೆ. ಇಲ್ಲಿ 90 days ಮಾಡಿದ್ದೇವೆ. ನಾವು ಇದನ್ನು ಸಹ ಬರೆಯುತ್ತೇವೆ. ಅಂದರೆ, if ingredients are fulfilled ಆದಷ್ಟು ಬೇಗ charge sheet ಅನ್ನು ಸಲ್ಲಿಸಿ, ಆದಷ್ಟು ಬೇಗ trial ಮಾಡಿ ಎಂದು. ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣವನ್ನು ನಡೆಸುವುದಕ್ಕೆ ಸರ್ಕಾರದ ಪರವಾಗಿ ಉತ್ತಮವಾದ ವಕೀಲರನ್ನು ನೇಮಕ ಮಾಡಿಕೊಳ್ಳುತ್ತೇವೆ. ಈಗ ಇರುವಂತಹ ಒಳ್ಳೆಯ ವಕೀಲರನ್ನು ನೇಮಕ ಮಾಡಿ, ಈ case trial ಅನ್ನು ಬಹಳ ಗಂಭೀರವಾಗಿ ಎಲ್ಲೂ lapse ಆಗದ ರೀತಿ, ಅದರ trial ಮಾಡಿ, ಇವತ್ತು ಏನು ಆರು ಜನರನ್ನು ಅರೆಸ್ಟ್ ಮಾಡಿದ್ದೇವೆ, if they found guilty ಅವರಿಗೆ ತೀವ್ರವಾದ ಶಿಕ್ಷೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಈಗ ಮಾನ್ಯ ಭಾರತಿ ಶೆಟ್ಟಿಯವರಿಗೆ ಉತ್ತರ ಹೇಳುತ್ತೇನೆ. ಅವರು ನಿನ್ನೆಯಿಂದ ಕುಳಿತಿದ್ದಾರೆ. ಮಾನ್ಯ ಲಿಂಗಪ್ಪನವರೆ, ನಾನು ಈಗ ಒಟ್ಟಿಗೆ ಉತ್ತರ ಹೇಳಿ ಮುಗಿಸುತ್ತೇನೆ.

**ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮಧ್ಯಪ್ರದೇಶದಲ್ಲಿ ಇದೇ ರೀತಿಯ ಪ್ರಕರಣವಾಗಿರುತ್ತದೆ. ನ್ಯಾಯಾಧೀಶರು ಕೇವಲ 9 ದಿನದಲ್ಲಿ ಆ ಪ್ರಕರಣದ trials ಅನ್ನು ಮುಗಿಸುತ್ತಾರೆ. ಮತ್ತೆ ಹದಿಮೂರನೆ ದಿನಕ್ಕೆ ಅಪರಾಧಿಗೆ ಮರಣದಂಡನೆ ಶಿಕ್ಷೆ ವಿಧಿಸುತ್ತಾರೆ. ಆಮೇಲೆ ಅವನು ಮೇಲ್ಮನವಿ ಮಾಡುತ್ತಾನೆ. ಆದರೂ ಕಡೆಗೆ ಒಂದು ದಿವಸ ಅವನಿಗೆ ಮರಣ ದಂಡನೆಯಾಗುತ್ತದೆ. ಅವನ ಕತ್ತಿಗೆ ಹಗ್ಗವನ್ನು ಹಾಕುತ್ತಾರೆ. ಈಗ ಏನು ಉದ್ದೇಶಿತ ವಿಶೇಷ ನ್ಯಾಯಾಲಯ ಮಾಡಬೇಕು ಎಂದು ಇದ್ದಾರೆ, ಅವರು ಆ ಮಟ್ಟದಲ್ಲಿ ಕೆಲಸ ಮಾಡಿದರೆ, ಖಂಡಿತವಾಗಿ ಕರ್ನಾಟಕದಲ್ಲಿ ಇಂತಹ ಕೆಟ್ಟ ಪದ್ಧತಿಗಳು ನಿಲ್ಲುತ್ತವೆ ಎಂಬುದು ನನ್ನ ಆಶಾಭಾವನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಅದು POCSO ಪ್ರಕರಣದಲ್ಲಿ ಆಗಿರುವಂಥದ್ದು. ಆದರೆ ಅದನ್ನು ಮಾನ್ಯ ಸುಪ್ರೀಂ ಕೋರ್ಟ್ struck down ಮಾಡಿಬಿಟ್ಟಿದೆ. ಅಷ್ಟು ಬೇಗ ಅದನ್ನು carry ಮಾಡಿ close ಮಾಡುವುದಕ್ಕೆ ಆಗುವುದಿಲ್ಲವೆಂದು, ಹಾಗಾಗಿ ಅವರಿಗೆ limited time ಮತ್ತು ಅವಕಾಶ ಕೊಡದೆ; ಇದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ನಾವು opportunity ಎಂಬ ಪದವನ್ನು ಬಳಸುತ್ತೇವೆ. ಆ opportunity extend ಎಂಬ ಪದ ಬಳಸದೇ trial close ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾ, ಅದನ್ನು close ಮಾಡಿದರು. Justice hurried Justice buried. ಅದರಲ್ಲಿ ಆರು ಜನ ಅಪರಾಧಿಗಳು, ಒಬ್ಬ ಬಾಲಕ ಸಂಘರ್ಷಕ್ಕೆ ಒಳಗಾಗಿದ್ದಾನೆ. ಪೊಲೀಸ್‌ನವರು ಆ ಏಳು ಜನರನ್ನು ಹಿಡಿದಿದ್ದಾರೆ. Accused are six. ಇನ್ನೊಬ್ಬ ಸಂಘರ್ಷಕ್ಕೆ ಒಳಗಾದ ಬಾಲಕ ಎಂದು name ಮಾಡಿರುವುದರಿಂದ charge sheet ಪ್ರಕಾರ ಆರು ಜನರು. ಆದರೆ, ಏಳು ಜನರನ್ನು ಕಸ್ಟಡಿಗೆ ತೆಗೆದುಕೊಂಡಿದ್ದೇವೆ. Accused are six. ಅವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೆ. ಅಂದರೆ, POCSO ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾದರೂ Special Courts, ಕೆಲವು ಕೋರ್ಟ್‌ಗಳಿಗೆ delegation of powers ಕೊಟ್ಟು, ಇಂತಹವುಗಳು ವಿಶೇಷ ಪ್ರಕರಣಗಳೆಂದು ತೆಗೆದುಕೊಂಡು, speedy trial ಮಾಡುವುದಕ್ಕೆ ಅವುಗಳಿಗೆ in-camera trial ಗಳನ್ನು close ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆ. We have enough number of Police Stations. ಎಲ್ಲ ಜಿಲ್ಲೆಗಳಲ್ಲೂ ಸಹ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪನೆ ಮಾಡಿದ್ದೇವೆ. ಅದೇ ರೀತಿ ಬೇರೆ ಪೊಲೀಸ್ ಸ್ಟೇಷನ್‌ಗಳಲ್ಲಿ ಎರಡರಿಂದ ಮೂರು ಜನ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಇವುಗಳೆಲ್ಲವನ್ನು ಮಹಿಳಾ ಪೊಲೀಸ್ ಠಾಣೆಗೆ ತರುವುದರಿಂದ, ಅವರು ಸಾಕ್ಷ್ಯ ಮತ್ತು ಅವರ ಮನಸ್ಸಿನಲ್ಲಿ ಇರುವುದನ್ನು ಹೇಳಿಕೊಳ್ಳುವುದಕ್ಕೆ ಯಾವುದೇ ರೀತಿಯ ಅಡಚಣೆಯು ಬರದಂತಹ ರೀತಿಯಲ್ಲಿ ಕಾನೂನಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಅನಿವಾರ್ಯವಾದರೆ ಇಂತಹ ಪ್ರಕರಣಗಳನ್ನು ಮಹಿಳಾ ನ್ಯಾಯಾಧೀಶರ ಮುಂದೆ ಸಹ ತರಬಹುದೇ ಎಂದು ಯೋಚನೆ ಮಾಡುತ್ತಿದ್ದೇವೆ. We have enough numbers of lady Magistrates also. ನಾವು ಈ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆ. ಹಾಗಾಗಿ ಎಲ್ಲಿಯಾದರೂ ಅವರುಗಳು ಯಾರಾದರೂ ಒಂದು ಕಡೆ ಒಂದು ಸಲ culprit ಗಳು ಬುಕ್ ಆದರೆ, ಇನ್ನೊಂದು ಬಾರಿ ಅಂತಹವರುಗಳು ತಲೆ ಎತ್ತಬಾರದು. ಅದರ ಮುಖಾಂತರ ಸಮಾಜಕ್ಕೆ ಒಂದು ಸಂದೇಶ ಹೋಗಬೇಕು. ಈಗ ಹುಡುಗಾಟ ಆಡುವ ಕಾಲವಲ್ಲ, ಅದು ಮುಗಿದು ಹೋಯಿತು, ಇನ್ನು ಇದು ಇಲ್ಲಿ ನಡೆಯುವುದಿಲ್ಲ, ನಮ್ಮನ್ನು ಮುಗಿಸುತ್ತಾರೆ ಎಂಬ ಸ್ಥಿತಿಯನ್ನು ನಿರ್ಮಾಣ ಮಾಡಬೇಕು ಎಂಬ ಆಲೋಚನೆ ನಮಗೆ ಇದೆ. ನಾವು ಬಹಳ ಗೌರವವನ್ನು ಹೆಣ್ಣು ಮಕ್ಕಳಿಗೆ ಕೊಟ್ಟುಕೊಂಡು ಬರುತ್ತಿರುವುದರಿಂದ, ಇಂತಹ ಪಾಶವಿ ಕೃತ್ಯವನ್ನು ಸಹಿಸುವುದಕ್ಕೆ ಆಗುವುದಿಲ್ಲ. ಶ್ರೀಮತಿ ಭಾರತಿ ಶೆಟ್ಟಿಯವರು ನಮ್ಮ ಮೇಲೆ ಏನು ಅಪೇಕ್ಷೆ ಇಟ್ಟುಕೊಂಡಿದ್ದಾರೆ, ಅಂದರೆ ತೀವ್ರತರವಾದ ಶಾಸನ ತರಬೇಕು ಮತ್ತು ತೀವ್ರತರವಾದ ಶಿಕ್ಷೆಗೆ ಅವರನ್ನು ಗುರಿ ಮಾಡಬೇಕೆಂದು ಖಂಡಿತವಾಗಿ ಕುಳಿತುಕೊಂಡು ಚರ್ಚೆ ಮಾಡಿ ಅದನ್ನು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಕಾನೂನು ತಜ್ಞರ ಜೊತೆ ಕುಳಿತುಕೊಂಡು ಮಾತನಾಡಿ ಆಲೋಚನೆ ಮಾಡುತ್ತೇವೆ. ಆ ನಂತರ ನಮ್ಮ Solicitor General ರವರ ಜೊತೆಯಲ್ಲಿಯೂ ಸಹ ಮಾತನಾಡಿ, ಅದಕ್ಕೆ ಏನಾದರೂ ಐ.ಪಿ.ಸಿ., ಮತ್ತು ಸಿ.ಆರ್.ಪಿ.ಸಿ. ತಿದ್ದುಪಡಿಯಾಗಬೇಕೆ ಎಂದು ಕೇಳುತ್ತೇವೆ. ಹಾಗೆಯೇ State Act ನಲ್ಲಿ ಏನಾದರೂ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದ್ದರೆ, ಖಂಡಿತವಾಗಿ ಅದನ್ನು ಮಾಡುತ್ತೇವೆ. ಇದನ್ನು ಸ್ವಲ್ಪ ತೀವ್ರತರವಾಗಿ ಮಾಡುತ್ತೇವೆ. But vigilance is a tough task. ಏಕೆಂದರೆ, ಅದನ್ನು ಸುಮ್ಮನೆ ಹೇಳಿ ಹೋಗುವುದಕ್ಕೆ ಆಗುವುದಿಲ್ಲ. ಅದು ಎಲ್ಲಿ ಆಗುತ್ತದೋ? ಯಾವಾಗ ಆಗುತ್ತದೋ? ಅದು ಅವರಿಗೆ ಗೊತ್ತಿರಲಿಲ್ಲವೇ? ಅಲ್ಲಿ ಪೊಲೀಸ್‌ನವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಲಿಲ್ಲವೇ? ಅಲ್ಲಿ ಅವರು ಓಡಾಡುತ್ತಿರಲಿಲ್ಲವೆ? ಇದಕ್ಕೆಲ್ಲಾ ಉತ್ತರ ಹೇಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

**(ಮುಂದು...**

(1016) 24.09.2021 12.20 LL-VK

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ನಾವು ಕೆಲವು ಏರಿಯಾಗಳನ್ನು ಪೊಲೀಸ್ ಗಸ್ತು ಮಾಡುವುದಕ್ಕಾಗಿ ಗುರುತಿಸಿರುತ್ತೇವೆ ಮತ್ತು ಆ ಏರಿಯಾಗಳನ್ನು ನಾವು ಪೊಲೀಸ್ ಸಹಾಯದಿಂದ ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಸಹಾಯದಿಂದ ಮಾನಿಟರ್ ಮಾಡುತ್ತಿರುತ್ತೇವೆ. ಹೀಗೆ stray sides ನಲ್ಲಿ ಆದಾಗ, ನಾವು ದಿಢೀರ್ ಎಂದು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಉತ್ತರ ಹೇಳುವುದಕ್ಕೂ ಸಹ ಆಗುವುದಿಲ್ಲ. ಆ ಸಮಯದಲ್ಲಿ ಪೊಲೀಸರು ಏನು ಮಾಡುತ್ತಿದ್ದರು ಎಂದು ಪ್ರಶ್ನೆ ಕೇಳಿದರೆ, ಎಲ್ಲಾ ಕಡೆಗಳಲ್ಲಿಯೂ ಸಹ ಪೊಲೀಸರು ಹೇಗೆ ಇರುತ್ತಾರೆ?

ಹಾಗಾಗಿ, ಇನ್ನು ಮುಂದೆ ಈ ರೀತಿಯ ಪ್ರವಾಸಿ ಸ್ಥಳಗಳು, ದೇವಸ್ಥಾನಗಳು ಅಥವಾ ಹುಡುಗ-ಹುಡುಗಿಯರು ಹೋಗಿ ಬರುವಂತಹ ಜಾಗಗಳು ಏನಿವೆ, ಆ ಜಾಗಗಳಲ್ಲಿ ಪೊಲೀಸ್ ಗಸ್ತನ್ನು ವಿಸ್ತರಣೆ ಮಾಡುವುದಕ್ಕೆ ಮತ್ತು ಹೆಚ್ಚು ಮಾಡುವುದಕ್ಕೆ ಕ್ರಮ ಜರುಗಿಸುತ್ತೇವೆ. ಈಗಾಗಲೇ ನಾವು ಪಟ್ಟಣ ಪ್ರದೇಶಗಳಲ್ಲಿ ರಾತ್ರಿ 9.30 ಗಂಟೆ 10.00 ಗಂಟೆಯವರೆಗೆ ಪೊಲೀಸ್ ಗಸ್ತನ್ನು ಇಡಲಾಗಿರುತ್ತದೆ. ಏಕೆಂದರೆ, ಯಾವುದಾದರೂ ಹೆಣ್ಣುಮಕ್ಕಳು ಓಡಾಡುವಾಗ ಯಾರಾದರೂ ಕೀಟಲೆ ಮಾಡುತ್ತಾರೆಂದು ಪೊಲೀಸ್ ಗಸ್ತು ಇಡಲಾಗಿದೆ. ಇಂತಹ ಜಾಗದಲ್ಲಿಯೂ ಕೂಡ ಅಂದರೆ, ಜನಸಂದಣಿ ಇಲ್ಲದೇ ಇರುವ ಕಡೆಗಳಲ್ಲಿ identify ಮಾಡಿ ಆ ರೀತಿಯ ಚಲನವಲನಗಳು ಇರುವ ಕಡೆ ಸ್ವಲ್ಪ observe and watch ಮಾಡುವುದಕ್ಕೆ ಸರ್ಕಾರದಿಂದ ಸೂಚನೆ ಕೊಡುತ್ತೇವೆ.

ಶ್ರೀಮತಿ ಭಾರತಿಶೆಟ್ಟಿಯವರ ಮನಸ್ಸಿನಲ್ಲಿ ಏನಿದೆಯೆಂದರೆ, some rigid law, some stringent law has to be brought in. ಅದಕ್ಕೆ ಖಂಡಿತ ನಾನು ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆ. I am assuring this House. ಮಾನ್ಯ ಸದಸ್ಯರ ಭಾವನೆಯನ್ನು ನಾನು ನಿನ್ನೆಯ ದಿವಸ ಈ ಸದನದಲ್ಲಿ ಕುಳಿತು ಕೇಳಿರುತ್ತೇನೆ. ಅದರಿಂದಾಗಿ, ನನಗೂ ಸಹ ನೋವಾಗಿದ್ದು, ಕಳೆದ ಎರಡು ದಿನಗಳಿಂದ ಉತ್ತರ ಹೇಳಲೇಬೇಕೆಂದು ಈ ಸದನದಲ್ಲಿ ನಾನು ಕುಳಿತಿರುತ್ತೇನೆ. No other business. ಏಕೆಂದರೆ, ಇದು ಸರ್ಕಾರದ ಆದ್ಯತೆಯಾಗಿರುತ್ತದೆ. Any State

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Government, it has to maintain law and order first. ಆ ನಂತರ, ಅಭಿವೃದ್ಧಿ, social reformation. Law and order fail ಆದಾಗ ಒಳ್ಳೆಯ ಸರ್ಕಾರ ನಡೆಸುತ್ತೇನೆಂದು ಯಾರು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. **(ಗೊಂದಲ)** ತಾಲಿಬಾನ್ ಅಲ್ಲ. ತಾಲಿಬಾನ್‌ನವರು ಬಂದು ಆಫ್ಘಾನಿಸ್ತಾನ ಆಗುತ್ತದೆ. ಹಾಗಾಗಿ, we have given topmost priority to maintain law and order ಎಂದು ಹೇಳುತ್ತಾ, ಮಾನ್ಯ ಸದಸ್ಯರು ಯಾವ ವಿಷಯ ಮನಸ್ಸಿನಲ್ಲಿಟ್ಟುಕೊಂಡು, "ಎಲ್ಲಿಯೋ ಒಂದು ಕಡೆ ಸರ್ಕಾರ ಅಥವಾ ಪೊಲೀಸ್ ಉದಾಸೀನ ಮಾಡಿದೆ" ಎಂದು ಏನು ಪ್ರಶ್ನೆ ಕೇಳಿದ್ದಾರೆ. ಅದನ್ನು ಅಷ್ಟೊಂದು ತೀವ್ರವಾಗಿ ಭಾವಿಸಬಾರದೆಂದು ಹೇಳುತ್ತೇನೆ.

They have taken all possible steps under their limit. ನಾನು ಈ ವಿಷಯವನ್ನು ಇಲ್ಲಿ ಹೇಳಬಾರದು. But still, I appreciate Mysore Police. They have acted very well. 6-7 ಜನ ಆರೋಪಿಗಳನ್ನು ಅಷ್ಟು ಬೇಗ ಕಸ್ಟಡಿಗೆ ತೆಗೆದುಕೊಂಡು, ಜೈಲಿಗೆ ಕಳುಹಿಸಿ ಇಷ್ಟೆಲ್ಲಾ ಮಾಡಿದವರಿಗೆ ನಾವು ಒಂದು ಒಳ್ಳೆಯ ಮಾತು ಹೇಳಬೇಕಾಗುತ್ತದೆ. This is a problem, MLC (Medico-Legal Case) ಯನ್ನು ಒಬ್ಬ ಡಾಕ್ಟರ್ ಮಾಡುತ್ತಾರೆ. ಆದರೆ, ಸಾಮಾನ್ಯವಾಗಿ ಡಾಕ್ಟರ್‌ಗಳು ಎಂ.ಎಲ್.ಸಿ. ಮಾಡುವಾಗ, ಸಂಬಂಧಪಟ್ಟ ವ್ಯಕ್ತಿ ಆಸ್ಪತ್ರೆಗೆ ದಾಖಲಾದ ತಕ್ಷಣವೇ ಮಾಡುತ್ತಾರೆ. ಆಗ ಆ ಮಾಹಿತಿ ಪೊಲೀಸ್ ಇಲಾಖೆಗೆ ಹೋಗುತ್ತದೆ. ಆದರೆ, sexual harassment ಅಂದ ಮೇಲೆ ಒಬ್ಬ ಮಹಿಳಾ ಡಾಕ್ಟರ್ ಬರಲೇಬೇಕು. She has to examine and give report, ಆ ನಂತರ ಅವರು ಬೇರೆ ವರದಿ ಕಳುಹಿಸುತ್ತಾರೆ. ತದನಂತರ, ಪೊಲೀಸ್ ಇಲಾಖೆಯವರು ಎಫ್.ಐ.ಆರ್.ನಲ್ಲಿ ಸೆಕ್ಷನ್‌ಗಳನ್ನು ಬದಲಾವಣೆ ಮಾಡುತ್ತೇವೆಯೇ ಹೊರೆತು, 'ಯಾವುದೋ ಕಾರಣಕ್ಕೆ ಮೊದಲು ಸೆಕ್ಷನ್ 354 ರ ಮೇರೆಗೆ ಎಫ್.ಐ.ಆರ್. ದಾಖಲಿಸಿದ್ದು, ಒತ್ತಡ ಬಂದ ನಂತರ ಸೆಕ್ಷನ್ 376 ತೆಗೆದುಕೊಂಡಿದ್ದಾರೆನ್ನುವುದಲ್ಲ'. Mode of operating ಬಗ್ಗೆ ತಮಗೆ ಗೊತ್ತಿದೆ.

ನಾನು ಈಗಾಗಲೇ ಹೇಳಿದಂತೆ, suspicious death ನಲ್ಲಿ ಏಕಾಏಕಿ ಸೆಕ್ಷನ್ 302 ಹಾಕುವುದಿಲ್ಲ. ಬದಲಾಗಿ, ಯು.ಡಿ.ಆರ್. ದಾಖಲಿಸುತ್ತೇವೆ. ಒಂದು ವೇಳೆ ಸಾವಿನ ಬಗ್ಗೆ ಏನಾದರೂ ಅನುಮಾನಗಳಿದ್ದರೆ, ಮರಣೋತ್ತರ ಪರೀಕ್ಷೆ ಮಾಡುವುದಕ್ಕೆ ಹೇಳುತ್ತೇವೆ. ಮರಣೋತ್ತರ ವರದಿ ಬಂದ ನಂತರ automatic ಆಗಿ ಸೆಕ್ಷನ್ 307 ಅಥವಾ 302 ರ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಹೇಗೆ ವಿಚಾರಣೆ ಪ್ರಾರಂಭ ಮಾಡುತ್ತಾರೋ, ಅದೇ ರೀತಿ ಈ ಪ್ರಕರಣದಲ್ಲಿಯೂ ಕೂಡ ಸೆಕ್ಷನ್ 376 ದಾಖಲು ಮಾಡಿರುತ್ತೇವೆ, ನಿಜವಾಗಿಯೂ ಈ ಪ್ರಕರಣವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿಸುವುದಕ್ಕೆ ಸರ್ಕಾರ ಎಲ್ಲಾ ರೀತಿಯಲ್ಲಿಯೂ ಪ್ರಯತ್ನ ಮಾಡುತ್ತದೆ ಮತ್ತು ಈ ಪ್ರಕರಣದಲ್ಲಿ ಒಳ್ಳೆಯ ವಕೀಲರನ್ನು ನೇಮಕ ಮಾಡಿ, ಟ್ರೈಯಲ್‌ನಲ್ಲಿ ಅವರಿಗೆ ಶಕ್ತಿ ತುಂಬುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಂತರ ತಮಗೆ ಅವಕಾಶ ನೀಡುತ್ತೇನೆ. ಈಗ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಲಿ. ಏಕೆಂದರೆ, ಸದರಿ ಪ್ರಶ್ನೆಯನ್ನು ಅವರೇ ಕೇಳಿರುತ್ತಾರೆ.

**ಶ್ರೀ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡುತ್ತಾ, "ಶಿಕ್ಷೆಯ ಪ್ರಮಾಣ ಕಡಿಮೆ ಇದೆಯೆಂದು, ಕಠಿಣಾತಿಕಠಿಣ ಶಿಕ್ಷೆಯನ್ನು ನಾವು ಕೊಡಬೇಕೆಂದು" ಹೇಳಿದರು. ಈ ವಿಷಯದಲ್ಲಿ ಅವರ ಕಳಕಳಿ ನನಗೆ ಅರ್ಥವಾಯಿತು. ಜೊತೆಗೆ, ಅವರು ಈ ವಿಷಯದಲ್ಲಿ ಆಶ್ವಾಸನೆಯನ್ನು ಸಹ ಕೊಟ್ಟಿರುತ್ತಾರೆ. ಅದರಿಂದಾಗಿ, ಅಳಬೇಕೋ ಅಥವಾ ನಗಬೇಕೋ ನನಗೆ ಗೊತ್ತಿರುವುದಿಲ್ಲ. ಏಕೆಂದರೆ, ಈ ಸದನದಲ್ಲಿ ನಾವೆಲ್ಲರೂ ಕುಳಿತಿದ್ದೇವೆ. ನಮ್ಮ ಮನೆಯಲ್ಲಿಯೂ ಸಹ ಹೆಣ್ಣುಮಕ್ಕಳಿದ್ದಾರೆ. ನನಗೆ ಜನ್ಮ ಕೊಟ್ಟವಳು ಒಬ್ಬಳು ತಾಯಿ. ಅತ್ಯಾಚಾರ ಪ್ರಕರಣಗಳಲ್ಲಿ ಅಪರಾಧ ಪ್ರಮಾಣ ಯಾವ ರೀತಿ ಇರುತ್ತದೆಯೆಂದರೆ ಅಥವಾ ಅವರ ಅಟ್ಟಹಾಸ ಯಾವ ರೀತಿ ಇರುತ್ತದೆಯೆಂದರೆ, ನಿರ್ಭಯ ಪ್ರಕರಣ ಏನೂ ಇರುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಾಂಗ್ಲಾ ಮಹಿಳೆಯ ಮೇಲೆ ಆದಂತಹ ಅತ್ಯಾಚಾರ ಪ್ರಕರಣ. ಮೊನ್ನೆಯ ದಿವಸ ಮುಂಬಯಿಯಲ್ಲಿ ಆದಂತಹ ಅತ್ಯಾಚಾರ ಪ್ರಕರಣ. ಎಲ್ಲಿ ನೀನು ಜನ್ಮ ತಾಳುತ್ತೀಯಾ, ಆ ಪ್ರದೇಶಕ್ಕೆ ರಾಡನ್ನು ಹಾಕುತ್ತಾನೆ ಅಥವಾ ಬಾಟಲಿಯನ್ನು ಹಾಕುತ್ತಾನೆ ಎಂದು ಹೇಳಿದ್ದನ್ನು ಕೇಳಿದರೆ ನಮಗೆ ಹೇಗೆ ಆಗಬೇಕು? ಅವರಿಗೆ ಎಂತಹ ಶಿಕ್ಷೆ ಕೊಡಬೇಕು?

ನಮ್ಮ ಸೋದರ ಸದಸ್ಯರೊಬ್ಬರು ಆಗಲೇ ಮಾತನಾಡುತ್ತಾ, "ಮಧ್ಯಪ್ರದೇಶ ರಾಜ್ಯದಲ್ಲಿ ಅತ್ಯಾಚಾರ ಮಾಡಿದವರಿಗೆ ಕೂಡಲೇ ಮರಣ ದಂಡನೆ ನೀಡಿದರು" ಎಂದು ಹೇಳಿದರು. ನಾನು ಈಗಾಗಲೇ ಸರ್ಕಾರದಲ್ಲಿ, "ಅತ್ಯಾಚಾರಿಗೆ ಏಕಾಂತ ಶಿಕ್ಷೆ ಕೊಟ್ಟು, ನಂತರ ಮರಣದಂಡನೆಯನ್ನು ಕೊಡಬೇಕೆಂದು" ಹೇಳಿದ್ದೇನೆ. ಆದರೆ, ಮಾನ್ಯ ಕಾನೂನು ಸಚಿವರು civilised ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಕಳೆದ ಎರಡು ದಿನಗಳಿಂದ ನಿಜವಾಗಿಯೂ ನಾನು ಈ ವಿಷಯದ ಬಗ್ಗೆ ಅವರಿಗೆ ಪ್ರಶ್ನೆ ಕೇಳುವುದು, ಆಗ ಅವರು ಇಲ್ಲಿ ಕುಳಿತುಕೊಳ್ಳುವುದು. ಅವರಿಗೆ ಆಚೆ ಹೋಗಲಿಕ್ಕೂ ಅಲ್ಲ, ಇಲ್ಲಿ ನಿಲ್ಲಲಿಕ್ಕೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲ. ಆದರೆ, ಇವೊತ್ತಿನ ದಿವಸ ಈ ಕೃತ್ಯ ಯಾವ ಪ್ರಮಾಣದಲ್ಲಿ ನಡೆಯುತ್ತದೆಯೆಂದರೆ, "ಕಾಮಾತುರಾಣಂ ನಾ ಲಜ್ಜಾ ನಾ ಭಯಂ" ಎನ್ನುವ ರೀತಿ ಇದೆ. ಭಯವೇ ಇರುವುದಿಲ್ಲ. ಲಜ್ಜೆ ಮೊದಲೇ ಇರುವುದಿಲ್ಲ. ಭಯ ಇಲ್ಲದಿದ್ದರೆ ಅವರಿಗೆ ಭಯ ತರುವಂತಹ ಕಾನೂನು ನಾವು ತರದಿದ್ದರೆ ಹೇಗೆ?

ನಿನ್ನೆಯ ದಿವಸ ತಡರಾತ್ರಿ 12.00 ಗಂಟೆ 01.00 ಗಂಟೆಯವರೆಗೆ ಅನೇಕ ವಿಧೇಯಕಗಳಿಗೆ ತಿದ್ದುಪಡಿ ಮಾಡಿದ್ದು ಏನು? "ಆ ಆಟ ಆಡಿದರೆ, ಇದಕ್ಕೆ ತಪ್ಪಿಸಿದರೆ, ಅವರನ್ನು ಹೇಗೆ ಸಿಕ್ಕಿಸಬಹುದು, ಹಾಗೆ ಸಿಕ್ಕಿಸಬೇಕು" ಎಂದು ತಿದ್ದುಪಡಿ ತಂದಿರುವ ವಿಧೇಯಕಕ್ಕೆ ರಿಪೇರಿ ಮಾಡುವಂತಹ ಎಲ್ಲಾ ರೀತಿಯ ಬುದ್ಧಿವಂತಿಕೆ ಇದೆ. ಆದರೆ, ಇಂತಹ ವಿಷಯಗಳಿಗೆ ಏನಾದರೂ ತಿದ್ದುಪಡಿ ತರಬಹುದಾಗಿತ್ತು. ಅದರ ಬದಲಾಗಿ, ಮಾನ್ಯ ಕಾನೂನು ಸಚಿವರು ಆಗಲೇ ಮಾತನಾಡುತ್ತಾ, "ಶ್ರೀ ವಿ.ಎಸ್. ಉಗ್ರಪ್ಪನವರ ಸಮಿತಿ ವರದಿ, ಶ್ರೀಮತಿ ಪ್ರಮೀಳಾ ನೇಸರ್ಗಿಯವರ ಸಮಿತಿ ವರದಿ ಹಾಗೂ ಶ್ರೀಮತಿ ಜಯಮಾಲಾರವರ ಸಮಿತಿ ವರದಿಯನ್ನು ತೆಗೆದುಕೊಂಡಿರುತ್ತೇವೆಂದು" ಹೇಳಿದರು. ಆದರೆ, ಆ ವರದಿಗಳನ್ನು ತೆಗೆದುಕೊಂಡು ಏನು ಮಾಡಿರುತ್ತಾರೆ? ಇದರಿಂದಾಗಿ, ಶಿಕ್ಷೆಯಲ್ಲಿ ಏನಾದರೂ ಬದಲಾವಣೆಯಾಗಿದೆಯೇ?

ಅತ್ಯಾಚಾರಿಗಳಿಗೆ ಏಕಾಂತ ಶಿಕ್ಷೆ ಜರ್ಮನಿ ದೇಶದಲ್ಲಿದೆ, ಅಮೇರಿಕಾ ದೇಶದಲ್ಲಿದೆ. ಆದರೆ, ನಮ್ಮ ದೇಶದಲ್ಲಿ ಏತಕ್ಕೆ ಆಗಬಾರದು? ವಿದೇಶದಲ್ಲಿರತಕ್ಕಂತಹ 'living together' ನ್ನು ನಮ್ಮ ಕಾನೂನಿನಲ್ಲಿ ತಿದ್ದುಪಡಿ ತರುವುದಕ್ಕೆ ಸಾಧ್ಯವಿದೆ. ಈ ಹಿಂದೆ ಯಾರಾದರೂ ಗಂಡು ಮತ್ತು ಹೆಣ್ಣು ಒಟ್ಟಿಗೆ ಇರಬೇಕೆಂದು ಹೇಳಿದರೆ, ಅದು ಯಾವುದೇ ಧರ್ಮ ಆಗಿರಬಹುದು..? ಈ ದೇಶದಲ್ಲಿ, ನಮ್ಮ ಭಾರತದ ನೆಲದಲ್ಲಿ ಅಥವಾ ನಮ್ಮ ಸಂಸ್ಕೃತಿಯಲ್ಲಿ ಹುಟ್ಟಿದಂತಹ ಎಲ್ಲರೂ ಕೂಡ, ಅವರು ಹಿಂದೂ ಆಗಿರಬಹುದು, ಮುಸಲ್ಮಾನ ಅಥವಾ ಕ್ರೈಸ್ತ ಆಗಿರಬಹುದು, ಅವರಿಗೆ ಮದುವೆ ಎನ್ನುವ ಮೊಹರಂ ಬಿದ್ದರೆ ಮಾತ್ರ ಅವರು ಒಟ್ಟಿಗೆ ಸಂಸಾರ ಮಾಡುವುದಾಗಿದೆ. ಅಪ್ಪಿತಪ್ಪಿ ಯಾರಾದರೂ ಒಟ್ಟಿಗೆ ಇದ್ದರೆ, "ಅಯ್ಯೋ ನೋಡು, ಅದು ಅನೈತಿಕ ಸಂಬಂಧ" ಎಂದು ಗಂಡು ಮತ್ತು ಹೆಣ್ಣು ಒಟ್ಟಿಗೆ ಇರುವುದಕ್ಕೆ ಹೆದರುತ್ತಿದ್ದರು. ಏಕೆಂದರೆ, "ಯಾರಾದರೂ ಚೀ...ಥೂ... ಎಂದು ಹೇಳುತ್ತಾರೆ, ಹಾಗೆ ಹೇಳುತ್ತಾರೆ, ಹೀಗೆ ಹೇಳುತ್ತಾರೆ" ಎಂದು ಹೆದರುತ್ತಿದ್ದರು. ಆದರೆ, ಇವೊತ್ತಿನ ದಿವಸ ಈ ಕಾನೂನು ಯಾವ ಮಟ್ಟಿಗೆ ಹೋಗಿದೆಯೆಂದರೆ, ನನಗೆ ನಿಜವಾಗಿಯೂ ಅಸಹ್ಯ ಎನಿಸುತ್ತಿದೆ.

ನಾನು ಇತ್ತೀಚೆಗೆ ಒಂದು ಬ್ಯೂಟಿ ಪಾರ್ಲರ್‌ನಲ್ಲಿ ಕುಳಿತಿದ್ದಾಗ, ಒಂದು ಹೆಣ್ಣುಮಗಳು ಅಂದರೆ, ಎರಡು ಮಕ್ಕಳ ತಾಯಿ, ಗಂಡ ಮತ್ತು ಮಕ್ಕಳನ್ನು ಬಿಟ್ಟು ಒಬ್ಬ ಹುಡುಗನ ಜೊತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಟ್ಟಿಗೆ ಇದ್ದಾಳೆ. ಆತ ಕೂಡ, ತನ್ನ ಹೆಂಡತಿಯನ್ನು ಬಿಟ್ಟಿರುತ್ತಾನೆ. ಅದನ್ನೂ ಆಕೆ ಸ್ಟೈಲ್ ಆಗಿ, 'we are living together' ಎಂದು ಹೇಳುತ್ತಾಳೆ. ಇದು ಏನು ಸ್ವಾಮಿ? ನಮ್ಮ ಸಂಸ್ಕೃತಿಯನ್ನು ನಾಶ ಮಾಡುವಂತಹದ್ದನ್ನು ಇವೊತ್ತಿನ ದಿವಸ 'ಸಿಂಧು ' ಎಂದು ಹೇಳುವಂತಹ ಕಾನೂನು ನಮ್ಮ ಕಾನೂನಿನಲ್ಲಿದೆ. ಆದರೆ, ನಮಗೆ ಜನ್ಮ ನೀಡುವಂತಹ ತಾಯಿಗೆ ಇಷ್ಟು ಹಿಂಸೆ ಕೊಡುವಂತಹ ಅಪರಾಧಿಗಳನ್ನು/ಅತ್ಯಾಚಾರಿಗಳನ್ನು ನಾನು ಕೈ ಕಡಿಯಬೇಕು ಮತ್ತು ಅವರ ಪುರುಷತ್ವ ನಾಶ ಮಾಡಬೇಕೆಂದು ಹೇಳುವುದರಲ್ಲಿ ಯಾವ ತಪ್ಪಿದೆ? ಆದರೆ, "ಅತ್ಯಾಚಾರ, ಅತ್ಯಾಚಾರ ಎಂದು ಹೇಳಿಕೊಂಡು, ಇವರದ್ದು ಮುಗಿಯುವುದಿಲ್ಲ" ಎಂದು ಎಲ್ಲರೂ ತಮಾಷೆ ಮಾಡುತ್ತಾರೆ. ನಾನು ಹೇಳುವುದರಲ್ಲಿ ಯಾವ ತಪ್ಪಿದೆ? ಅತ್ಯಾಚಾರಕ್ಕೊಳಗಾದ ಹೆಣ್ಣುಮಗಳು ನಿರಂತರವಾಗಿ ಕೋಮಾದಲ್ಲಿದ್ದು, ನಂತರ ಸಾಯುತ್ತಾಳೆ. ಆದರೆ, ಅತ್ಯಾಚಾರ ಮಾಡಿದವನು ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಿ, ಹೊರಗಡೆ ಬಂದು, ಮದುವೆಯಾಗಿ ಹೆಂಡತಿ-ಮಕ್ಕಳ ಜೊತೆ ಆರಾಮಾಗಿ ಇರುತ್ತಾನೆ. ಒಂದು ವೇಳೆ ಆತನ ಪುರಷತ್ವ ನಾಶ ಮಾಡಿದ್ದರೆ, ಆತ ಅಷ್ಟು ಆರಾಮಾಗಿ ಇರುತ್ತಿದ್ದನೇ? ಶಿಕ್ಷೆ ಹೆಣ್ಣುಮಗಳಿಗೆ ಮಾತ್ರವೇ? ನಮ್ಮ ರಾಜ್ಯದಲ್ಲಿ ಕೇವಲ 504 ಅತ್ಯಾಚಾರ ಪ್ರಕರಣ ಆಗಿರುವುದಿಲ್ಲ. ಇದಕ್ಕಿಂತಲೂ ನೂರು ಪಟ್ಟು ಅಧಿಕ ಅತ್ಯಾಚಾರ ಪ್ರಕರಣಗಳು ನಡೆಯುತ್ತಿದ್ದು, ಅವು ಹೊರಗಡೆ ಬರುತ್ತಿಲ್ಲ.

ಈ ವಿಷಯದಲ್ಲಿ ಸರ್ಕಾರ, "ನಾವು ಆ ಕಾನೂನನ್ನು ಜಾರಿಗೆ ತಂದಿದ್ದೇವೆ, ಈ ಕಾನೂನನ್ನು ಜಾರಿಗೆ ತಂದಿದ್ದೇವೆಂದು" ಹೇಳುವಂಥದ್ದನ್ನು ನಾನು ಒಪ್ಪುತ್ತೇನೆ. ಜೊತೆಗೆ, ಮೈಸೂರು ನಗರದ ಪ್ರಕರಣದಲ್ಲಿ ನಡೆದಂತಹ ಅತ್ಯಾಚಾರ ಪ್ರಕರಣದಲ್ಲಿ, "ಸೆಕ್ಷನ್ 340 ಮೇರೆಗೆ ಪ್ರಕರಣ ದಾಖಲಿಸಿರುತ್ತೇವೆಂದು" ಹೇಳಿರುತ್ತಾರೆ. ಅದನ್ನು ಸಹ ನಾನು ಒಪ್ಪುತ್ತೇನೆ. ಆದರೆ, ಆ ಕೆಲಸವನ್ನು ಎಲ್ಲಾ ಸರ್ಕಾರ ಕೂಡ ಮಾಡುತ್ತದೆ. ಅದರಲ್ಲಿ ಯಾವುದೇ ವಿಶೇಷ ಇರುವುದಿಲ್ಲ. ಆದರೆ, ಅವರವರ ಪರಿಧಿಗೆ ಮಾಡುತ್ತಾರೆ. ಮಹಿಳಾ ಮತ್ತು ಮಕ್ಕಳ ಇಲಾಖೆಯ ಜಾಹೀರಾತನ್ನು ಸಹ ನಾನು ನೋಡಿರುತ್ತೇನೆ. ಅಂದರೆ, ಅತ್ಯಾಚಾರ ಆದ ನಂತರ ಸಂತ್ರಸ್ತೆಗೆ ಕೊಡುವಂತಹ ಎಲ್ಲಾ ಸೌಲಭ್ಯಗಳನ್ನು ಕೊಡುವಂಥದ್ದು ಮತ್ತು ಅದನ್ನು ತಡೆಗಟ್ಟುವ ಬಗ್ಗೆ ಚಂದನ ವಾಹಿನಿಯಲ್ಲಿ ಜಾಹೀರಾತು ನೀಡಲಾಗಿರುತ್ತದೆಯೆಂದು ಹೇಳಿರುತ್ತಾರೆ. ಆದರೆ, ಈಗ ಚಂದನ ವಾಹಿನಿಯನ್ನು ಯಾರು ನೋಡುತ್ತಾರೆ? ಅಥವಾ ಅದನ್ನು ನೋಡುತ್ತಾರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿರುವುದಿಲ್ಲ. ಜೊತೆಗೆ, ನಮಗೆಲ್ಲರಿಗೂ ಆಂಬ್ಯುಲೆನ್ಸ್ ಸಹಾಯವಾಣಿ ನಂಬರ್ ನೆನಪಿದೆ. ಆದರೆ, ಮಹಿಳಾ ಸಹಾಯವಾಣಿ ನಂಬರ್ ಯಾರಿಗೂ ಸಹ ನೆನಪಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1017) 24-09-2021 YL-VK 12.30 (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ(ಮುಂದು):-**

ಈ ಅಪರಾಧಿಗಳಿಗೆ ಭಯ ಹುಟ್ಟಿಸುವಂಥ ವಾತಾವರಣ ನಿರ್ಮಾಣವಾಗಬೇಕು. ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಏಕಾಂತ ಶಿಕ್ಷೆಯನ್ನು ನೀಡುವಂಥ ಕಾನೂನಿಗೆ ಹೆಚ್ಚು ಒತ್ತು ನೀಡಿ, ಜಾರಿಗೆ ತರುವಂಥ ಕೆಲಸ ಮಾಡಲೇಬೇಕಾಗಿದೆ. ಏಕಾಂತ ಶಿಕ್ಷೆಯನ್ನು ನೀಡಿದ ನಂತರ ಅವರ ಅಪರಾಧ ಪ್ರಮಾಣಕ್ಕೆ ತಕ್ಕ ಹಾಗೆ 10 ದಿವಸಗಳ ನಂತರ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಮಂಪರು ಪರೀಕ್ಷೆಗೆ ಒಳಪಡಿಸಿದ ನಂತರ ಆತ ಮಾಡಿದ ಕೆಲಸ ತಪ್ಪು ಎನಿಸದಿದ್ದ ಪಕ್ಷದಲ್ಲಿ ಪುನಃ ಏಕಾಂತ ಶಿಕ್ಷೆಯನ್ನು ನೀಡಬೇಕು. ನಾನು ಈ ಮಾತನ್ನು ತಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಜೈಲಿನಲ್ಲಿದ್ದಂತಹ ಅತ್ಯಾಚಾರಿ ಬಗ್ಗೆ ಮಾನಸಿಕ ತಜ್ಞರೊಂದಿಗೆ ಚರ್ಚೆ ಮಾಡಿದ್ದೇನೆ. ಯಾವುದೇ ಒಬ್ಬ ಅತ್ಯಾಚಾರಿಗಾಗಲಿ ಆತನಿಗೆ ತಾನು ಅತ್ಯಾಚಾರ ಮಾಡಿದ್ದೇನೆ ಎನ್ನುವಂಥ ಭಯವೇ ಇರುವುದಿಲ್ಲ. ತನ್ನ ಮನೆಯ ಪಕ್ಕದ ಮಗುವಿನ ಮೇಲೆ ಕರುಣೆ ಇಲ್ಲದೇ ಅತ್ಯಾಚಾರ ಮಾಡಿ, ಕೊಲೆ ಮಾಡಿರುವ ಪ್ರಕರಣಗಳಿವೆ. ಈ ರೀತಿಯಾದರೆ ಹೇಗೆ? ಶೇಕಡ 71 ರಷ್ಟು ಭಾಗ ಪರಿಚಯಸ್ಥರೇ ಇಂತಹ ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಹಾಗಾದರೆ, ಯಾವ ರೀತಿಯಲ್ಲಿ ಈ ವ್ಯವಸ್ಥೆ ಇದೆ? ಈ ವಿಚಾರವನ್ನು ನಾವು ಕಠಿಣವಾಗಿ ತೆಗೆದುಕೊಳ್ಳಬೇಕೇ, ಬೇಡವೇ? ಹಾಗಾಗಿ ಮೊದಲು ಕಾನೂನಿನಲ್ಲಿ ತಿದ್ದುಪಡಿಯಾಗಬೇಕು. ಪೂಜ್ಯ ಮಹಾತ್ಮ ಗಾಂಧೀಜಿಯವರು 'ಮಧ್ಯ ರಾತ್ರಿಯಲ್ಲಿ ಒಬ್ಬ ಹೆಣ್ಣು ಮಗಳು ಹೊರಗೆ ಹೋಗುವ ವ್ಯವಸ್ಥೆ ಆದ ದಿನ ನಮ್ಮ ದೇಶಕ್ಕೆ ಸ್ವತಂತ್ರ್ಯ ದೊರೆಯುತ್ತದೆ' ಎನ್ನುವಂಥ ಮಾತನ್ನು ಹೇಳಿದ್ದರು. ಆ ಸ್ವತಂತ್ರ್ಯ ಸಿಕ್ಕಿದೆಯೇ? ಇವತ್ತು ನಾವು 75ನೇ ಅಮೃತ ಮಹೋತ್ಸವದಲ್ಲಿದ್ದು, ನಿನ್ನೆಯಾಗಲಿ, ಇವತ್ತಿಗಾಗಲಿ ಸ್ವತಂತ್ರ್ಯ ಸಿಕ್ಕಿಲ್ಲ, ಮುಂದೆ ಸಿಗುತ್ತದೆಯೋ, ಇಲ್ಲವೋ ಅದು ಸಹ ನನಗೆ ಗೊತ್ತಾಗುತ್ತಿಲ್ಲ. ಹಾಗಾಗಿ ಶಿಕ್ಷಣದಲ್ಲಿ ಬದಲಾವಣೆ ತರಬೇಕು, ಶಿಕ್ಷಣದಲ್ಲಿ ನೀತಿ ಪಾಠ ತರಲಿಲ್ಲವೆಂದರೆ,... ನಾನು ಈ ಮಾತನ್ನು 3ನೇ ಸಲ ಹೇಳುತ್ತಿದ್ದೇನೆ, 10 ವರ್ಷಗಳ ಹಿಂದೆಯೂ ಹೇಳಿದ್ದೇನೆ. ಹಿಂದೆ ಮಕ್ಕಳಿಗೆ ಚಂದಮಾಮ, ಹಕ್ಕಿ, ರಸ್ತೆಯಲ್ಲಿ ಓಡಾಡುವ ಗಾಡಿಯನ್ನು ತೋರಿಸಿ ಊಟ ಮಾಡಿಸುತ್ತಿದ್ದೆವು. ಆದರೆ, ಇವತ್ತಿನ ಮಕ್ಕಳು ಟ್ಯಾಬ್ ಕೊಟ್ಟರೆ ಮಾತ್ರ ಊಟ ಮಾಡುತ್ತವೆ. ಇವತ್ತಿನ ದಿವಸ ಅಂತಹ ಸ್ಥಿತಿ ಬಂದಿದೆ. ಈಗಾಗಲೇ ಮಾನ್ಯ ಸಚಿವರಿಗೆ ಶಿಕ್ಷಣದ ಕುರಿತು ಉಲ್ಲೇಖ ಮಾಡಿದ್ದು, ಮಾನ್ಯ ಸಚಿವರು ಸಹ ಮಾಡುತ್ತೇನೆ ಎನ್ನುವಂಥ ವಿಶ್ವಾಸವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿದ್ದರು. ಹಾಗೆಯೇ ಹದಿ-ಹರೆಯರ ಮಕ್ಕಳಿಗೆ ಅಂದರೆ 8, 9ನೇ ತರಗತಿಯಿಂದಲೇ ನಮ್ಮ ಸಂಸ್ಕೃತಿ, ಪದ್ಧತಿ, ಸೋದರತೆ, ಪ್ರೀತಿ-ವಿಶ್ವಾಸವನ್ನು ನೀಡುವಂಥ ವಾತಾವರಣ ಶಾಲೆಯಿಂದಲೇ ಕಲಿಯಬೇಕು. ಜೊತೆಗೆ ಅತ್ಯಾಚಾರವಾದರೆ ಏನೇನು ಕಠಿಣ ಶಿಕ್ಷೆಗಳಾಗುತ್ತದೆ, ಎಂಬುದರ ಕುರಿತು ಹೆಣ್ಣಾಗಲಿ, ಗಂಡಾಗಲಿ ಆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವಂಥ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಚೆಂಡು ಈಗ ಮಾನ್ಯ ಕಾನೂನು ಸಚಿವರ ಕೋರ್ಟ್‌ನಲ್ಲಿದೆ. ಈಗಾಗಲೇ ಈ ಬಗ್ಗೆ ರಚಿಸಲಾಗಿದ್ದ ಬೇರೆ ಬೇರೆ ಸಮಿತಿಗಳಲ್ಲಿ ಡಾ|| ಜಯಮಾಲ, ಶ್ರೀಮತಿ ಪ್ರಮೀಳಾ ನೇಸರ್ಗಿ, ಶ್ರೀ ವಿ.ಎಸ್.ಉಗ್ರಪ್ಪನವರು ಸಾಕಷ್ಟು ಚರ್ಚೆಗಳನ್ನು ನಡೆಸಿರುವುದರಿಂದ ಆ ವಿಚಾರದ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೇ ಮಾನ್ಯ ಸಚಿವರ ಅವಧಿಯಲ್ಲಿಯೇ ಅತೀ ಶೀಘ್ರವಾಗಿ ಮಾಡಬೇಕು. ಏನೇನು ಕಾನೂನು ತಿದ್ದುಪಡಿ ಮಾಡುತ್ತಾರೆಯೋ ನಮಗೆ ಗೊತ್ತಿಲ್ಲ. ಮಾನ್ಯ ಸಚಿವರು ತರುವಂಥ ಕಾನೂನು ತಿದ್ದುಪಡಿಗೆ ಸದನದ ಸದಸ್ಯರೆಲ್ಲರೂ ಸಾಕ್ಷಿಯಾಗಲು ಬದ್ಧರಾಗಿದ್ದೇವೆ. ಅಂತಹ ಒಂದು ಕಾನೂನು ಜಾರಿಗೆ ತರಲು ಭಗವಂತ ನಮಗೆ ಒಂದು ಅವಕಾಶ ನೀಡಿರುವುದರಿಂದ ನಾವು ಈ ಸದನದ ಸದಸ್ಯರಾಗಿದ್ದೇವೆ. ನಮ್ಮ ಅವಧಿಯಲ್ಲಿಯೇ ಅಂತಹ ಒಂದು ಕಾನೂನು ಜಾರಿಗೆ ಬಂದಿದೆ ಎನ್ನುವಂಥ ತೃಪ್ತಿ ಏನಿದೆ, ಅದು ನಾವು ಹೊರಗೆ ಹೋದಾಗ ಆಗಬೇಕೆನ್ನುವ ಮಾತನ್ನು ಹೇಳುತ್ತಾ, ಆದಷ್ಟು ಶೀಘ್ರವಾಗಿ ಅಂತಹ ಕಾನೂನು ಜಾರಿಗೆ ತರಬೇಕೆಂದು ಹೇಳುತ್ತಾ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಕಾನೂನು ಜಾರಿಗೆ ತರಲು ಆಗುವುದಿಲ್ಲ. ಏಕೆಂದರೆ, ಇದು IPC, CRPC and Evidence Act, Parliament ನಲ್ಲಿ amendment ಆಗಬೇಕಾದ ಪ್ರಯುಕ್ತ ಇಲ್ಲಿಯವರೆಗೂ ತಡೆಹಿಡಿದು ಸಭೆಯ ಮುಂದೆ ಮಾತನಾಡಿದ್ದೇನೆ. ರಾಜ್ಯ ಸರ್ಕಾರಕ್ಕೆ IPC, CRPC and Evidence Act amendment ಮಾಡುವ ಅಧಿಕಾರ ಇರುವುದಿಲ್ಲ. ಕೇಂದ್ರ ಸರ್ಕಾರವೇ ಮಾಡಬೇಕು. ಅದಕ್ಕಾಗಿ ನಮ್ಮ Law Commission ರವರ ಸಲಹೆಯನ್ನು ಪಡೆದುಕೊಂಡು ಶಿಫಾರಸ್ಸು ಮಾಡಿ, ಕೇಂದ್ರ ಸರ್ಕಾರದ ಮೊರೆ ಹೋಗಿ, ಇದಕ್ಕೆ ಏನು ಮಾಡಬಹುದೆಂದು ಪ್ರಯತ್ನ ಮಾಡಲಾಗುವುದು. ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿ, IPC, CRPC and Evidence Act ನಲ್ಲಿ ತಿದ್ದುಪಡಿ ಮಾಡಬೇಕಾದರೆ, Natural justice, innocent punish ಆಗಬಾರದು ಎಂಬುದೆಲ್ಲವನ್ನೂ ನೋಡಿ ಮಾಡಬೇಕಾಗಿರುವುದರಿಂದ trial before Court ಆಗಬೇಕು. ನ್ಯಾಯಾಲಯವು ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತ್ಯಾಚಾರಿಯನ್ನು ಕತ್ತಲೆ ಅಥವಾ ಬೆಳಕಿಗೆ ಕಳುಹಿಸುವಂಥ ಕೆಲಸ ಏನಿದೆ, ಅದು ನ್ಯಾಯಾಧೀಶರ ಕೈಯಲ್ಲಿ ಆಗಬೇಕಾಗಿರುವುದರಿಂದ ನಾನು ಹೇಗೆ ಇಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ? ನಾನು ಕತ್ತಲೆ ಕೋಣೆಯಲ್ಲಿ ಕೂರಿಸುತ್ತೇನೆ ಎಂದು ಹೇಳಲು ಸಾಧ್ಯವೇ? ಏನು confinement ಆಗಬೇಕೆಂಬುದನ್ನು ನ್ಯಾಯಾಧೀಶರು ಹೇಳಬೇಕಾಗಿದೆ. ಕಠಿಣ ಶಿಕ್ಷೆ, ಸಾಧಾರಣ ಶಿಕ್ಷೆ, ಗಲ್ಲು ಶಿಕ್ಷೆ, ಮರಣ ದಂಡನೆ ಏನೇ ಇರಲಿ, ಆ ಕುರ್ಚಿಯಲ್ಲಿ ಆಸೀನರಾಗಿರುವವರ domain, ಶಕ್ತಿಯಾಗಿರುತ್ತದೆ. ಹಾಗಾಗಿ ಇದು ಕಾನೂನಿನ ಮೇಲೆ ಅವಲಂಬಿತವಾಗಿದ್ದು, ಆತನ ತಪ್ಪು ಸಾಬೀತು ಆದ ಮೇಲೆ ಏನು ಶಿಕ್ಷೆ ವಿಧಿಸಬೇಕೆಂಬುದನ್ನು ಕೇಂದ್ರ ಸರ್ಕಾರದ ಮೂಲಕ ರಾಜ್ಯ ಸರ್ಕಾರದಲ್ಲಿ ಜಾರಿಗೆ ತರುವಂಥ ಪ್ರಯತ್ನವನ್ನು ಮಾಡಿ, ಮಾನ್ಯ ಸದಸ್ಯರ ಆಸೆ, ಆಶೋತ್ತರವೇನಿದೆ, ಅದಕ್ಕೆ ಸ್ಪಂದಿಸುವಂಥ ಕೆಲಸ ಮಾಡಲಾಗುವುದು. ಜೊತೆಗೆ ಶಿಕ್ಷಣದಲ್ಲಿ ನೀತಿ ಪಾಠ ತರುವಂಥ ಕೆಲಸವಾಗಬೇಕು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ, ಆ ಸಂಬಂಧ ಸರ್ಕಾರದೊಂದಿಗೆ ಮಾತನಾಡಿ....

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಷ್ಟೆಲ್ಲಾ ಹೇಳುವುದು ಬೇಡ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಲ್ಲ. ಮಾನ್ಯ ಸದಸ್ಯರ ವಿದ್ಯಾಭ್ಯಾಸ ಸಂದರ್ಭದಲ್ಲಿ ನೀತಿ ಪಾಠ ಅಸ್ತಿತ್ವದಲ್ಲಿತ್ತು ಎನ್ನುವಂಥ ಮಾತನ್ನು ಹೇಳಿದ್ದಾರೆ. ಹಾಗಾಗಿ ತಂದೆ-ತಾಯಿಯರು, "ಹೆಣ್ಣು ಮಕ್ಕಳ ಬಗ್ಗೆ ಗೌರವನ್ನಿಟ್ಟುಕೊಳ್ಳಪ್ಪ, ಇಲ್ಲದಿದ್ದರೆ ಶಾಪಗ್ರಸ್ತನಾಗುತ್ತೀಯಾ" ಎಂದು ಹೇಳುವುದರ ಬಗ್ಗೆ ಸಹ ಪ್ರಯತ್ನ ಮಾಡಲಾಗುವುದು.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ಮುಜರಾಯಿ, ಹಜ್ ಮತ್ತು ವಕ್ಫ್):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಧನ್ಯವಾದಗಳನ್ನು ಸಲ್ಲಿಸಲು ಬಯಸುತ್ತೇನೆ. ಏಕೆಂದರೆ, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಅಸ್ತಿತ್ವದಲ್ಲಿದೆ. ಬೆರಳೆಣಿಕೆ ಅಷ್ಟು ಮಹಿಳಾ ಸಚಿವರು ಈ ಸದನದಲ್ಲಿದ್ದಾರೆ. ಆದರೆ, ಕೋಟ್ಯಂತರ ತಾಯಿಯಂದಿರು ಅತ್ಯಾಚಾರಕ್ಕೆ ಸಂಬಂಧಿಸಿದಂತೆ ನೋಡುತ್ತಿದ್ದಾರೆ, ಕೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ನಿನ್ನೆ ದಿವಸ ತುಂಬಾ ಚೆನ್ನಾಗಿ ಮಾತನಾಡಿದ್ದರು. ಆ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಆದರೆ, ಇವತ್ತು ಮಾನ್ಯ ಸದಸ್ಯರು ತಿಳಿಸಿದ ಹಾಗೆ ಕೇಂದ್ರದಲ್ಲಿಯು ನಮ್ಮ ಸರ್ಕಾರವೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಸ್ತಿತ್ವದಲ್ಲಿರುವುದರಿಂದ ಪಕ್ಷಾತೀತವಾಗಿ ಮಹಿಳಾ ಸದಸ್ಯರೆಲ್ಲರೂ ಅಲ್ಲಿ ಹೋಗಿ ಮಾತನಾಡುವಂಥ ಕೆಲಸ ಮಾಡಲಾಗುವುದು. ಈ ಅತ್ಯಾಚಾರ ಪ್ರಕರಣ ಕುರಿತು ಒಂದು ಇತ್ಯರ್ಥವಾಗಬೇಕಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಮಹಿಳೆಯರಿಗೆ ಮತ್ತು ಪುರುಷರಿಗೆ ಯಾವ ರೀತಿ ಸಮಾನತೆ ಇದೆ ಎಂಬುದರ ಕುರಿತು ಒಂದು ಸಾಹಿತ್ಯವನ್ನು ಉಲ್ಲೇಖಿಸಿದ್ದಾರೆ, ಅದೇನೆಂದರೆ:-

ಮೊಲೆ, ಮುಡಿ ಬಂದಡೆ ಹೆಣ್ಣೆಂಬರು,
ಗಡ್ಡ, ಮೀಸೆ ಬಂದಡೆ ಗಂಡೆಂಬರು,
ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ!

ಎಂದು ಹೇಳಿದ್ದಾರೆ. 12ನೇ ಶತಮಾನದಲ್ಲಿಯೇ ಮಹಿಳೆಯರಿಗೆ ಒಂದು ಸ್ಥಾನವನ್ನು ಹಾಗೂ ಸಂವಿಧಾನದಲ್ಲಿ ಒಂದು ಕಲ್ಪನೆಯನ್ನು ಕಲ್ಪಿಸಿದಂಥವರು ಬಸವಣ್ಣನವರು. ಇವತ್ತು ನಾವು 21ನೇ ಶತಮಾನದಲ್ಲಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗೆ ಸರಿ-ಸಮಾನವಾಗಿ ಕೆಲಸ, ಕಾರ್ಯಗಳನ್ನು ಸಮರ್ಪಕವಾಗಿ ಮಾಡುತ್ತಿದ್ದಾರೆ. ಯಾವುದೇ ಕ್ಷೇತ್ರದಲ್ಲಿಯು ಸಹ ಮಹಿಳೆಯರು ಹಿಂದೆ ಇದ್ದಾರೆ ಎಂಬ ಮಾತಿಲ್ಲ. ಆದರೂ ಸಹ ಬೇಟಿ ಬಚಾವೋ, ಬೇಟಿ ಪಡಾವೋ ಎಂದು ಸರ್ಕಾರದಿಂದ ಸುಕನ್ಯ ಸಮೃದ್ಧಿ, ಭಾಗ್ಯಲಕ್ಷ್ಮಿ ಯೋಜನೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತಿದೆ. ಏಕೆಂದರೆ, ಎಲ್ಲಿಯೋ ಒಂದು ಕಡೆ ಲಿಂಗ ತಾರತಮ್ಯ ಆಗುತ್ತಿದೆ, ತಾಯಿಯಂದಿರು ಹೆಣ್ಣು ಮಗು ಬೇಡವೆಂದು ಭ್ರೂಣ ಹತ್ಯೆ ಮಾಡುತ್ತಿದ್ದಾರೆ. ಹೆಣ್ಣು ಮಗು ಹುಟ್ಟಿದರೆ ಪೀಡೆ ಎಂದು ಭಾವಿಸಿ, ಗಂಡು ಮಗು ಹುಟ್ಟಿದರೆ ಪೇಡಾ ಹಂಚುವರು. ಹೆಣ್ಣು ಮಗು ಹುಟ್ಟಿದರೆ 'ಹುಣ್ಣು' ಎನ್ನುವರು, ಗಂಡು ಹುಟ್ಟಿದರೆ 'ಹೊನ್ನಾ ಬಂತು' ಎನ್ನುವರು. ಪುರುಷರಿಗೆ ಸರಿಸಮಾನವಾಗಿ ನಿಲ್ಲುವಳು ಹೆಣ್ಣು, ಅಂದಿನ ಕಿತ್ತೂರು ರಾಣಿ ಚೆನ್ನಮ್ಮ ಹೆಣ್ಣು, ಒನಕೆ ಓಬವ್ವ ಹೆಣ್ಣು, ಈ ರೀತಿಯಾಗಿ ಹೆಣ್ಣು ಇಲ್ಲದೇ ಗಂಡು ಬಂದದ್ದು ಎಲ್ಲಿಂದ ಎಂದು ಕೆಲವು ವಚನಗಳನ್ನು ನೋಡುತ್ತಿರುತ್ತೇವೆ. ಆದರೆ, ಇವತ್ತಿನ ದಿವಸ ಅಂತಹ ಹೆಣ್ಣು ಮಕ್ಕಳ ಶಾರೀರಿಕ, ಮಾನಸಿಕತೆಯನ್ನು ನೋಡಿದಾಗ ನಿಜವಾಗಿಯು ಎಲ್ಲಾ ತಾಯಿಯಂದಿರ ಕರುಳು ಕಿವುಚಿದಂತಾಗುತ್ತಿದೆ. ಹಾಗಾಗಿ ಮಾನ್ಯ ಕಾನೂನು ಸಚಿವರು ಹಾಗೂ ಎಲ್ಲರಿಗೂ ಸಹ ವಿನಂತಿಸಿಕೊಳ್ಳುವುದೇನೆಂದರೆ, ನಾನು ಒಬ್ಬ ಮಹಿಳೆಯಾಗಿ ಎಲ್ಲಾ ಮಹಿಳಾ ಸದಸ್ಯರ ಪರವಾಗಿ ಎಲ್ಲರೂ ಒಗ್ಗಟಾಗಿ ನಮ್ಮ ಕರ್ನಾಟಕದ ತಾಯಂದಿರಿಗೆ ಒಂದು ಒಳ್ಳೆಯ ಸಂದೇಶವನ್ನು ತರುವಂಥ ಕೆಲಸವಾಗಬೇಕಾಗಿದೆ. ದೇಶದ ಎಲ್ಲಾ ತಾಯಂದಿರಿಗೂ ನಮ್ಮ ಕರ್ನಾಟಕ ರಾಜ್ಯ ಒಳ್ಳೆಯ ನಿರ್ಣಯ ತೆಗೆದುಕೊಂಡಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂಥ ಸಂದೇಶ ತಲುಪಬೇಕೆನ್ನುವ ದೃಷ್ಟಿಕೋನದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತಾ, ಮತ್ತೊಮ್ಮೆ ಶುಭಾ ಕೋರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಹಳ ಚೆನ್ನಾಗಿ ಸರ್ಕಾರವನ್ನು defend ಮಾಡಿಕೊಂಡಿದ್ದಾರೆ. He argued very well, vehemently he has argued to defend the Government. I am confined to only clarifications. ನಿನ್ನೆ ದಿವಸ ಈ ಸಂಬಂಧ ಬಹಳ ಸುದೀರ್ಘವಾಗಿ ಮಾತನಾಡಿದ್ದೇವೆ. ಆ ಯುವಕನ ಮೇಲೆ ಹಲ್ಲೆ ಮಾಡಿದ್ದಾರೆ. IPC Section 397 ದಾಖಲೆ ಮಾಡಿದ್ದಾರೆ.

(...ಮುಂದು)

(1018) 24.09.2021/12.40/ ಎಸ್‌ಕೆ- ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಸೆಕ್ಷನ್ 397 ಏನು ಹೇಳುತ್ತದೆ ಎಂದರೆ, ಅದಕ್ಕೆ ಸ್ವಲ್ಪ ಜಿಜ್ಞಾಸೆ. ಅದಕ್ಕೆ ಆ ಕ್ಲಾರಿಫಿಕೇಷನ್. Section 397 reads thus: "***Robbery or dacoity, with attempt to cause death or grievous hurt.*** *If, at the time of committing robbery or dacoity, the offender uses any deadly weapon, or causes grievous hurt to any person, so attempts to cause death or grievous hurt to any person, the imprisonment with which such offender shall be punished shall not be less than seven years.*" ನನಗೆ ಮೊದಲು ಏನು ಅನ್ನಿಸುತ್ತದೆ ಎಂದರೆ, first of all ಅಲ್ಲಿ ಆರು ಜನರು ಏನಿದ್ದಾರಲ್ಲ, ಅವರು robbery ಮತ್ತು ಡಕಾಯಿತಿ ಮಾಡಬೇಕೆಂದು ಹೇಳಿ, ಆ ಯುವಕನ ಮೇಲೆ ಹಲ್ಲೆ ಮಾಡಿಲ್ಲ. ಆ ಯುವಕ ತನ್ನ ಯುವತಿಯ guardian ಇದ್ದ ಹಾಗೇ. ಆ ಯುವತಿಯ ಮೇಲೆ ಅತ್ಯಾಚಾರ ಮಾಡಬೇಕೆನ್ನುವ ಉದ್ದೇಶದಿಂದ ಆ ಯುವಕ, he was acting like a guardian. ಅವನು guardian ಆಗಿ ಇದ್ದಾನೆ. ಆ ಯುವಕ ಏನಾದರೂ ಅಲ್ಲಿ ಇದ್ದರೆ, ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲ ಎಂಬ ಕಾರಣದಿಂದಾಗಿ, ಆ ಯುವಕನ ಮೇಲೆ ಹಲ್ಲೆ ಮಾಡಿದ್ದಾರೆ. They wanted to finish

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

him. ಅವನು ಇಲ್ಲವೆಂದರೆ, ಅವರು ಮುಂದೆ ನಡೆಸುವಂತಹ ಕೃತ್ಯ ಸರಾಗವಾಗಿ ನಡೆಯುತ್ತದೆ. ಇಲ್ಲವೆಂದರೆ, ಆ ಯುವಕ ನಮ್ಮ ಮಧ್ಯೆದಲ್ಲಿ ಬಂದು, ಯಾರನ್ನಾದರೂ ಕೂಗಿ ಕರೆಯಬಹುದು ಅಥವಾ ಯುವತಿಯನ್ನು ರಕ್ಷಣೆ ಮಾಡಬಹುದು ಎಂಬ ಉದ್ದೇಶದಿಂದ, ಆ ಯುವಕನ ಮೇಲೆ ಹಲ್ಲೆ ಮಾಡಿದ್ದಾರೆ. ಪೊಲೀಸ್ ಇಲಾಖೆಯವರು ಸೆಕ್ಷನ್ 397 ಹಾಕುವ ಬದಲಿ, ಸೆಕ್ಷನ್ 307 ಹಾಕಬೇಕಾಗಿತ್ತು. ಅವರ ಉದ್ದೇಶ ಇವನನ್ನು ಮುಗಿಸಬೇಕಾಗಿತ್ತು. ಏಕೆಂದರೆ, ಅವನು ಮಧ್ಯೆದಲ್ಲಿ ಬರಬಾರದು. ಜನರನ್ನು ಕೂಗಬಾರದು. ಅಷ್ಟೇ ಅಲ್ಲ, ಆಮೇಲೆ ಅವನು ಪ್ರಜ್ಞೆಹೀನ ಸ್ಥಿತಿಯಲ್ಲಿದ್ದಾನೆ. ಅವನಿಗೆ ಪ್ರಜ್ಞೆ ಬಂದ ಮೇಲೆ ಅವನಿಗೆ ಒತ್ತಾಯ ಮಾಡಿ, ಅವನ ತಂದೆ ಕಡೆಯಿಂದ ಅವನ ಮೊಬೈಲ್‌ನಿಂದ ಫೋನ್ ಮಾಡಿಸಿ, ಮೂರು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಬಾ ಎಂದಿದ್ದು ನಂತರ. ಮೊದಲು ಅವರ ಉದ್ದೇಶ ಏನಿತ್ತು? ಇವನನ್ನು ಮುಗಿಸಬೇಕೆನ್ನುವ ಉದ್ದೇಶವಿತ್ತು. ಇವನು ಇಲ್ಲವೆಂದರೆ, ಆ ಮಹಿಳೆಯ ಜೊತೆ ಅತ್ಯಾಚಾರ ಮಾಡಬೇಕಾಗಿತ್ತು ಅದಕ್ಕೆ ಆ ಯುವಕ ಇದಕ್ಕೆ ಅಡ್ಡ ಇದ್ದಾನೆ. ಅವನನ್ನು ಮುಗಿಸಬೇಕು ಎನ್ನುವ ಉದ್ದೇಶದಿಂದ ಆ ಯುವಕನ ಮೇಲೆ attack ಮಾಡಿದ್ದಾರೆ. ನನ್ನ ದೃಷ್ಟಿಯಲ್ಲಿ ಸೆಕ್ಷನ್ 397 ಗಿಂತ ಸೆಕ್ಷನ್ 307 ಅದಕ್ಕಿಂತ ಬಹಳ severe punishment. ಇದಕ್ಕೆ ಏಳು ವರ್ಷವಿದ್ದರೆ, ಅದಕ್ಕೆ ಹತ್ತು ವರ್ಷಗಳು ಇದೆ. ಸೆಕ್ಷನ್ 307 ಅಡಿಯಲ್ಲಿ sometimes, life imprisonment ಆಗುತ್ತದೆ. ಅದಕ್ಕಾಗಿ ಸೆಕ್ಷನ್ 397 ಏಕೆ? ಅಲ್ಲಿ ಅವರು robbery ಮಾಡಬೇಕು. ಡಕಾಯಿತಿ ಮಾಡಬೇಕು. ಅವರ ಕೈಯಲ್ಲಿ ಹಣ ಕಿತ್ತುಕೊಳ್ಳಬೇಕೆಂದರೆ, ಅವರು ಮಹಿಳೆಗೆ ಏನು ಮಾಡುತ್ತಿರಲಿಲ್ಲ. ಮಹಿಳೆಯನ್ನು ರಕ್ಷಣೆ ಮಾಡಬಾರದು. ಅವರು ಕೃತ್ಯ ಮಾಡುವಂತಹ ಸಂದರ್ಭದಲ್ಲಿ, ಆ ಯುವಕ ಯಾರಿಗಾದರೂ ಹೋಗಿ ಕೂಗಿ ಕರೆಯಬಹುದು ಮತ್ತು ನಾವೆಲ್ಲಾ ಸಿಕ್ಕಿ ಹಾಕಿಕೊಳ್ಳುತ್ತೇವೆ ಎನ್ನುವ ಅಂಜಿಕೆಯಿಂದ ಒಟ್ಟಾರೆ they wanted to finish him. ಅಂದಮೇಲೆ ಅವನು ಉಳಿದಿದ್ದಾನೆ. At least attempt to commit murder ಹಾಕಬೇಕಾಗಿತ್ತು. ಸೆಕ್ಷನ್ 397 ಎಷ್ಟರ ಮಟ್ಟಿಗೆ appropriate? In my opinion, it may be right or wrong but it is my perception. ಐ.ಪಿ.ಸಿ. ಸೆಕ್ಷನ್ 397 ಹಾಕುವ ಬದಲಿ, ಅವನ ಮೇಲೆ attempt to commit murder under Section 307 ಹಾಕಿದ್ದರೆ proper ಆಗುತ್ತಿತ್ತು. ಪೊಲೀಸರು ಯಾವ ರೀತಿ ಯೋಚನೆ ಮಾಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಇದೊಂದು ಮೊದಲನೆ ಕ್ಲಾರಿಫಿಕೇಷನ್. ಆಮೇಲೆ delay in filing FIR. ಮಾನ್ಯ ಸಚಿವರು ಸ್ವಲ್ಪ ಗಮನಿಸಬೇಕು. Basically, he being an advocate, he tried to defend Police. ನನಗೂ, I do not want to demoralise police force. ಅವರು attempt ಮಾಡಿದ್ದಾರೆ. ಏಳು ಜನರನ್ನು ಅರೆಸ್ಟ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಅದರಲ್ಲಿ ಆರು ಜನ ಅರೋಪಿಗಳಿದ್ದಾರೆ. ಅವರಲ್ಲಿ ಲೆಕ್ಕವಿಲ್ಲದವರು ಇದ್ದಾರೆ. ಅವರಲ್ಲಿಎಲ್ಲೆಲ್ಲಿ ಹೋಗಿದ್ದಾರೆ, herculean task ಮಾಡಿದ್ದಾರೆ. ಅದರಲ್ಲಿ ನಾನು ಎಲ್ಲದಕ್ಕಿಂತ ಹೆಚ್ಚು appreciate ಮಾಡುವುದೇನೆಂದರೆ, ಅವರು ಆ ಮಹಿಳೆಯನ್ನು ಮನವೊಲಿಸಿ, ಕಲಂ 164 ಸಿ.ಆರ್.ಪಿ.ಸಿ. ಅಡಿಯಲ್ಲಿ ಹೇಳಿಕೆಯನ್ನು ನ್ಯಾಯಾಧೀಶರ ಮುಂದೆ ಮಾಡಿಸಿದ್ದಾರೆ. ಅದಕ್ಕೆ ನಾನು ಪೊಲೀಸ್‌ರಿಗೆ appreciate ಮಾಡುತ್ತೇನೆ. Usually ಏನಾಗಿರುತ್ತದೆ ಎಂದರೆ, ಅವಳ ತಂದೆ-ತಾಯಿಯವರು ನನ್ನ ಮಗಳಿಗೆ ಮಾನಭಂಗ ಆಯಿತು. ಇನ್ನು ಮುಂದೆ ಕೋರ್ಟ್‌ನಲ್ಲಿ ಕೇಸ್ ಆದರೆ ಮುಂದೆ ನನ್ನ ಮಗಳ ಭವಿಷ್ಯವೇನು ಎಂಬ ಪ್ರಶ್ನೆ ಬರುತ್ತದೆ. ಅವರು, they will be much reluctant. ಆಮೇಲೆ ಆ ವಿದ್ಯಾರ್ಥಿನಿ ಅವಳು ಕೂಡ ಎಲ್ಲಪ್ಪಾ ಕೇಸ್? ಈಗಾಗಲೇ ಎಲ್ಲವೂ ಮುಗಿದು ಹೋಗಿದೆ. ಇನ್ನು ಕೇಸ್ ಹಾಕಿದರೆ, ನಮ್ಮ ಗೌರವಕ್ಕೆ ಚ್ಯುತಿ ಬರುತ್ತದೆ ಎಂದು avoid ಮಾಡುತ್ತಾರೆ. ಆದರೆ ಪೊಲೀಸರು ಮನವೊಲಿಸಿ, ಕಲಂ 164 ಸಿ.ಆರ್.ಪಿ.ಸಿ. ಅಡಿಯಲ್ಲಿ ಮಾನ್ಯ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡಿಸಿದ್ದು, ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. I have to appreciate the police force.

ಮಾನ್ಯ ಸಚಿವರೇ, ನನ್ನದು ಇಲ್ಲಿ ಒಂದು ಜಿಜ್ಞಾಸೆ ಇದೆ. ಸೆಕ್ಷನ್ 397 ಏನಿದೆ, ತಾವು ಇದನ್ನು ಕೇಳದೇ ಹೊರಗಡೆ ಹೋಗಿದ್ದಿರಿ. ಸೆಕ್ಷನ್ 397 ಕ್ಕಿಂತ ಸೆಕ್ಷನ್ 307 ಅಡಿ attempt to commit murder ಹಾಕಬೇಕಾಗಿತ್ತು. ನಾನು ಹೇಳಿದ ಮೇಲೆ ತಾವು ಆಮೇಲೆ ಉತ್ತರವನ್ನು ಹೇಳಿಬಿಡಿ. ಅವರ ಉದ್ದೇಶ ಏನಿದೆ ಎಂಬುದನ್ನು ಹೇಳಿದ್ದೇನೆ. It has gone on record. ಇದು ತಮಗೆ ಹೇಳಬೇಕು ಎಂದರೆ ನಾನು ಹೇಳುತ್ತೇನೆ. So, I need not explain that point.

ಎರಡನೆಯದಾಗಿ, delay of 15 hours in filing FIR ಎಂದು ಇದೆಯೆಲ್ಲಾ, ಅದು ಇಲ್ಲ. ಪ್ರತಿಷ್ಠಿತ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಆಸ್ಪತ್ರೆ. ಅದು really a prestigious medical college and well equipped hospital. ಅದರ ಬಗ್ಗೆಯೂ ಇಲ್ಲ. ಡಾ. ಸುಮಾ ಎನ್ನುವವರು ಒ.ಬಿ.ಜಿ.ಯ ಮುಖ್ಯಸ್ಥರು. ಡಾ. ಸುಮಾ ಎನ್ನುವವರು Medico-legal case ನಲ್ಲಿ ಸಹಿ ಮಾಡಿ, ಹಲ್ಲೆ ಎಂದು ಬರೆದು ಕಳುಹಿಸುತ್ತಾರೆ. ಏಕೆಂದರೆ, ಗುಪ್ತಾಂಗದಲ್ಲಿ ರಕ್ತಸ್ರಾವ ಇದ್ದಿದ್ದನ್ನು ನೋಡಿದ್ದಾರೆ. ಮೈಮೇಲೆ ಗಾಯವಾಗಿದ್ದನ್ನು ನೋಡಿದ್ದಾರೆ. ಅವರು ಆ ರೀತಿ ಏಕೆ ಬರೆದು ಕಳುಹಿಸಿದರು ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ಕಳುಹಿಸಿದ ಕೂಡಲೇ ಏನಾಗುತ್ತದೆ ಎಂದರೆ, ಒಂದು offence ಆದಾಗ, ನನ್ನ ಪೊಲೀಸ್ ಸ್ಟೇಷನ್‌ಗೆ ಬರುವುದಿಲ್ಲ. ಸರ್ಕಾರ ಹಿಂದೆ ಒಂದು ಸೂಚನೆಯನ್ನು ಕೊಟ್ಟಿದೆ. ದೂರು ಬಂದ ತಕ್ಷಣ ಅದು offence ಆ ಪೊಲೀಸ್ ಸ್ಟೇಷನ್ ವ್ಯಾಪ್ತಿಯೊಳಗೆ ಬರುವುದು ಅಥವಾ ಬರುವುದಕ್ಕಿಲ್ಲ. But, immediately they have to register the case. Then, it should be transferred to the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

concerned police station. ಈಗ ನನ್ನ ಪೊಲೀಸ್ ಸ್ಟೇಷನ್‌ಗೆ ಬರುವುದಿಲ್ಲ. ನೀನು ಅಲ್ಲಿ ಹೋಗು, ಅವನು ಹೋದರೆ, ಇಲ್ಲಿ ಬರುವುದಿಲ್ಲ. ನೀನು ಅಲ್ಲಿ ಹೋಗು ಎನ್ನುವುದಕ್ಕೆ ಆಗುವುದಿಲ್ಲ. ಅಲ್ಲಿ delay ಏನಾಗುತ್ತದೆ ಎಂದರೆ, after thought ಎಂದು ಆಗುತ್ತದೆ. ಕೋರ್ಟ್‌ನಲ್ಲಿ ಹೋದರೆ, benefit of doubt ಅನ್ನು accused ತೆಗೆದುಕೊಳ್ಳುತ್ತಾನೆ. There is 15 hours delay in sending FIR means it is a considerable delay. Delay of every minute has to be explained by the police officers before the Court. ನ್ಯಾಯಾಲಯದಲ್ಲಿ ಅತ್ಯಾಚಾರ ಪ್ರಕರಣದ ಮೇಲೆ ಚರ್ಚೆಯಾಗುತ್ತದೆ. ಆಗ ವಕೀಲರು ಕೇಳುತ್ತಾರೆ. ಒಂದು ನಿಮಿಷದ delay ಕೂಡ ಆರೋಪಿಗೆ benefit ಆಗುತ್ತದೆ. ಇಲ್ಲಿ ಹದಿನೈದು ಗಂಟೆಗಳು ತಡವಾಗಿದೆ. ಈ ಪೊಲೀಸ್ ಸ್ಟೇಷನ್‌ಗೆ ಹೋಗುವ ಬದಲಿ ಬೇರೆ ಪೊಲೀಸ್ ಸ್ಟೇಷನ್‌ಗೆ ತಪ್ಪಿ ಹೋಗಿತ್ತು. ಅದು ಎಲ್ಲಿ ಹೋಗಿದ್ದರು. ಅಲ್ಲಿ ಅವರು ಕೇಸ್‌ನ್ನು ನೊಂದಣಿ ಮಾಡಿಕೊಳ್ಳಬೇಕು. ಆಮೇಲೆ offence ಯಾವ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಆಗಿದೆ, ಅದನ್ನು ಕಂಡುಕೊಂಡು ಆ ಪೊಲೀಸ್ ಸ್ಟೇಷನ್‌ಗೆ ವರ್ಗಾವಣೆ ಮಾಡಬೇಕು. This is not the valid defence taken by the Hon'ble Law Minister. I feel so. ಮೊದಲನೆಯದು ಭಾರತೀಯ ದಂಡ ಸಂಹಿತೆ ಸೆಕ್ಷನ್ 397 ಬಗ್ಗೆ ಸರಿಯಾದ ಸೆಕ್ಷನ್‌ನ್ನು ಅಪ್ಲೈ ಮಾಡಿಲ್ಲವೆಂದು ನಾನು ಹೇಳುತ್ತೇನೆ. Sec.397 along with Sec.307 of IPC ಹಾಕಬಹುದಾಗಿತ್ತಲ್ಲ. ಇರಲಿ let it be. ಆಮೇಲೆ ಹದಿನೈದು ಗಂಟೆಗಳ ಕಾಲ ತಡ ಮಾಡಿದ್ದಾರೆ. The explanation given by the Hon'ble Law and Parliamentary affairs Minister is not satisfactory. ಏಕೆಂದರೆ, ಅದು ಬೇರೆ ಪೊಲೀಸ್ ಸ್ಟೇಷನ್‌ಗೆ ಹೋಯಿತು ಎಂಬುದು ಅದು ಕಾರಣವಲ್ಲ. There is negligence on the part of police. ಅದು medico-legal case ವರದಿ ಬಂದಿದೆ. ಆ ವರದಿ ಬಂದ ತಕ್ಷಣ they would have swing into action. Immediately they would have gone to the hospital. ಜೆ.ಎಸ್.ಎಸ್. ಆಸ್ಪತ್ರೆಗೆ ಹೋಗಬೇಕಾಗಿತ್ತು. ಅವರು ಅಲ್ಲಿಗೆ ಹೋಗಿ ಹೇಳಿಕೆಯನ್ನು ಪಡೆಯಬೇಕಾಗಿತ್ತು. ಆ ಯುವಕ ದೂರು ಕೊಟ್ಟಿದ್ದಾನೆ. ಆ ಯುವಕ ದೂರು ಕೊಟ್ಟಾಗ, naturally ಇದರ ಬಗ್ಗೆ mention ಮಾಡಿ ಕೊಟ್ಟಿರುತ್ತಾನೆ. ಇಂತಹ ಒಂದು heinous offence involving moral turpitude, ಇಂತಹ heinous offence ಆದಾಗ, ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಮತ್ತೊಂದು ಪೊಲೀಸ್ ಸ್ಟೇಷನ್ ಗೆ ದೂರು ಕೊಡಿರಿ ಎಂದು ಹೇಳುತ್ತಾರೆ ಎಂದರೆ, it is definitely a lapse on the part of police. ಆದರೆ ಕಲಂ 164 ಸಿ.ಆರ್.ಪಿ.ಸಿ. ಅಡಿ ಮಾಡಿದ ಹೇಳಿಕೆಗೆ, it is commendable. I really appreciate about it. ಇಲ್ಲಿ ಹದಿನೈದು ಗಂಟೆಗಳ ಕಾಲ ತಡವಾಗಿದ್ದು, ನ್ಯಾಯಾಲಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟಳೆ ನಡೆದಾಗ, ಇದನ್ನು explanation ಮಾಡುವಾಗ, it is humanly impossible. Because I have conducted criminal cases also. Even a minute's delay has to be explained to the Court. Sessions Judge ಮುಂದೆ ಚರ್ಚೆಗೆ ಬರುತ್ತದೆ. ಸಹೋದರಿಯಾದ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದ ಹಾಗೇ, ಏಕೆ ಶಿಕ್ಷೆ ಆಗುವುದಿಲ್ಲ ಹೇಳಿ ಎಂದರು. These are the reasons. ಈಗ ಆರೋಪಿ ಹೇಗೆ escapes from the clutches of law. Benefit of doubt ಇರುತ್ತದೆ. ಆ benefit of doubt will be given to the accused. ಆ benefit of doubt ಏನಿದೆ ಅದು ಆರೋಪಿಗೆ ಲಾಭವಾಗುತ್ತದೆ. ಪೊಲೀಸರು ಈ ರೀತಿ ಮಾಡಿದ್ದು ಸರಿಯಲ್ಲ.

(ಮುಂದು)

(1019) 24.09.2021, 12.50, ಟಿಸಿಹೆಚ್-ಬಿಎನ್ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಮತ್ತೆ SOP (Standard Operating Procedure) ಇದೆ. ಈ SOP ಕೂಡ ಇಲ್ಲಿ ಫಾಲೋ ಆಗಿಲ್ಲ. I did not bring that. ಇವತ್ತು ನಾನು ಅದನ್ನು ನೋಡಿದೆನು. ಆದರೆ ಇಲ್ಲಿಗೆ ತರಲಿಲ್ಲ. ಮಾನ್ಯ ಸಚಿವರೇ, ಆ SOP ನನ್ನ ಕಡೆ ಇತ್ತು. I have referred to it. ಆ SOPನಲ್ಲಿ ಪೊಲೀಸರಿಗೆ ನಿರ್ದೇಶನಗಳು ಮತ್ತು ಪ್ರಾಕ್ಟೀಸ್ ಏನಿದೆಯೋ strictly they have not adhered to SOP. They have failed in it. ಆಮೇಲೆ ಗಸ್ತು ಬಗ್ಗೆ ಹೇಳಿದರು. ಹಾಲೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಒಟ್ಟು 60 ಪೊಲೀಸ್ ಸಿಬ್ಬಂದಿ ಇದ್ದಾರೆ. ಅಲ್ಲಿ ಮಹಿಳಾ ಪೊಲೀಸರು, ಪೊಲೀಸ್ ಹೆಡ್ ಕಾನ್ಸ್‌ಟೇಬಲ್, ನಾಲ್ಕು ಜನ ಎ.ಎಸ್.ಐ, ಒಬ್ಬರು ಸಬ್ ಇನ್ಸ್‌ಪೆಕ್ಟರ್ ಮತ್ತು ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ. ಒಟ್ಟು 60 ಜನ ಪೊಲೀಸ್‌ನವರು ಇದ್ದಾರೆ, ಆ ಪೊಲೀಸ್ ಠಾಣೆ ಸುಮಾರು 15 ಕಿ.ಮೀ. radial distance ಇದೆ. ಆ ನಿರ್ಜನ ಪ್ರದೇಶದೊಳಗೆ ಪೊಲೀಸ್ ಗಸ್ತು ವಾಹನಗಳನ್ನು ಕಳುಹಿಸಬೇಕಲ್ಲವೇ? ಆ ಪ್ರದೇಶದಲ್ಲಿ ಗಸ್ತು ವಾಹನಗಳು ಹಾದುಹೋದಲ್ಲಿ ಆರೋಪಿಗಳು ಯಾರೂ ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅಲ್ಲಿ ಪೊಲೀಸರು ಮತ್ತು ಪೊಲೀಸ್ ವಾಹನ ಬರುತ್ತದೆ. ನಾವೇನಾದರು ಅಪರಾಧ ಮಾಡಿದರೆ ಪೊಲೀಸ್‌ನವರ ಕೈಗೆ ಸಿಕ್ಕಿಬೀಳಬೇಕಾಗುತ್ತದೆ ಎಂದು ಆರೋಪಿಗಳು ಇಂತಹ ಹೀನ ಕೃತ್ಯಕ್ಕೆ ಹೋಗುವುದಿಲ್ಲ. ಎಲ್ಲಾ ಕಡೆ ಗಸ್ತು ವಾಹನ ಹಾಕುವುದು it is difficult ಎಂದು ಹೇಳುತ್ತಾರೆ. ಕೆಲವು ಬಾರಿ ಒಪ್ಪುತ್ತೇನೆ. ಆದರೆ ಅದು ಅರ್ಧ ಸತ್ಯ. ನಾನು ಇದೊಂದೇ ಕಡೆ ಗಸ್ತು ಹಾಕಿ ಎಂದು ಹೇಳುವುದಿಲ್ಲ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿ ನಿರ್ಜನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರದೇಶಗಳಿರುತ್ತವೋ ಅಂತಹ ಕಡೆಗಳಲ್ಲಿ ಒಂದೆರಡು ಬಾರಿ ಪೊಲೀಸ್ ವಾಹನಗಳು ಒಂದು ರೌಂಡ್ ಸೈರನ್ ಬಾರಿಸಿಕೊಂಡು ಹೋಗಬೇಕು. ಅಲ್ಲಿ ಪೊಲೀಸ್ ವಾಹನ ಓಡಾಡುತ್ತಿದ್ದರೆ ಯಾವ offence ಕೂಡ ಆಗುವುದಿಲ್ಲ. ಅದು prevention. ಇವತ್ತಿನ ದಿವಸ ಅಲ್ಲೂ ಕೂಡ ಪೊಲೀಸರು ವಿಫಲರಾಗಿದ್ದಾರೆ. ಮಾನ್ಯ ಸಭಾಪತಿಯವರೇ, ಈಗ ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಿದ್ದರೆ ಒಳ್ಳೆಯದಿತ್ತು. ಅವರು ಆ ಮಹಿಳೆ ರಾತ್ರಿ ಸುಮಾರು 7 ಗಂಟೆಗೆ ಹೋಗಬಾರದಿತ್ತು ಎಂದು ಹೇಳಿದ್ದಾರೆ. ನಾನು ಕೂಡ ರೆಫರ್ ಮಾಡಿದೆನು. ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರಬೇಕಾದರೆ, "ಒಬ್ಬ ಮಹಿಳೆ ಮಧ್ಯ ರಾತ್ರಿಯಲ್ಲಿ ಸುರಕ್ಷಿತವಾಗಿ ಯಾವುದೇ ಅಂಜಿಕೆ ಮತ್ತು ಅಳುಕಿಲ್ಲದೇ ಮನೆ ತಲುಪಿದರೆ ಆಗ ನಮ್ಮ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದಂತೆ "ಎಂದು ಹೇಳಿದ್ದಾರೆ. ಈ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿ, ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂಥ ಬ್ರಿಟೀಷರನ್ನು ನಮ್ಮ ದೇಶದಿಂದ ಹೊರಗೆ ಕಳುಹಿಸಿ, ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಂಥ ಮಹಾತ್ಮರು ಇದನ್ನು ಹೇಳಿರುವುದು. ಒಬ್ಬ ಮಹಿಳೆ ರಾತ್ರಿ 12 ಗಂಟೆಯಲ್ಲೂ ಸುರಕ್ಷಿತವಾಗಿ ಇರಬೇಕೆಂದು ಹೇಳುತ್ತಾರೆ. ಆದರೆ ಮಾನ್ಯ ಗೃಹ ಸಚಿವರು ರಾತ್ರಿ 7 ಗಂಟೆಗೆನೇ ಅಲ್ಲಿಗೆ ಏಕೆ ಹೋಗಬೇಕಾಗಿತ್ತು ಎಂದು ಹೇಳಿದ್ದಾರೆ. ಅಂದರೆ ಇದರ ಅರ್ಥ ' ಅಲ್ಲಿಗೆ ಹೋಗಿದ್ದು ಆ ವಿದ್ಯಾರ್ಥಿಯದ್ದೇ ತಪ್ಪು. ಆರೋಪಿಗಳದ್ದು ತಪ್ಪು ಇಲ್ಲ' ಎನ್ನುವಂಥ ಸಂದೇಶ ಹೋಗಿದೆ. ಜನಸಾಮಾನ್ಯರು ಇದರ ಬಗ್ಗೆ ಮಾತನಾಡುವುದನ್ನು ಹೇಳುತ್ತಿದ್ದೇನೆ. ಇದು ಜನಸಾಮಾನ್ಯರ ಭಾವನೆ, ನನ್ನ ಭಾವನೆ ಅಲ್ಲ. ಒಬ್ಬ ಮಹಿಳೆ ಹೊರಗಡೆ ಕಾಲು ಇಡಬಾರದು, ಹೆಣ್ಣುಮಕ್ಕಳು ಹೊಸಲು ದಾಟಿ ಹೋಗಬಾರದು. ಇದು ಯಾವ ದೇಶದ ಸಂಸ್ಕೃತಿ. ನಾವು 21ನೇ ಶತಮಾನದ ಹೊಸ್ತಿಲಿನಲ್ಲಿದ್ದೇವೆ. ಇವತ್ತಿನ ದಿವಸ ಮಹಿಳೆಯವರು ಎಲ್ಲಾ ರಂಗದಲ್ಲೂ ನಮಗಿಂತಲೂ ಮುಂದಿದ್ದಾರೆ. ಅವರು ಇಲ್ಲವೆಂದು ಒಮ್ಮೆ ಹೇಳಿಬಿಡಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅವರು ನಿನ್ನೆ ದಿವಸ ಇದರ ಬಗ್ಗೆ ವಿಧಾನ ಸಭೆಯಲ್ಲಿ clarify ಮಾಡಿದ್ದಾರೆ. ಏನೋ ಮಾತನಾಡಿದ್ದಾರೆ ಎನ್ನುವುದನ್ನು ಕಾಂಗ್ರೆಸ್ ಪಾರ್ಟಿಯವರೆಲ್ಲಾ ಒಪ್ಪಿಕೊಂಡಿದ್ದಾರೆ. ಅವರು ಯಾವ ಭಾವನೆಯಲ್ಲಿ ಹೇಳಿದ್ದಾರೆ ಎನ್ನುವುದನ್ನು ಅಲ್ಲಿ explain ಮಾಡಿದ್ದಾರೆ. ಬೇಕಾದರೆ ನನ್ನ ಹತ್ತಿರ ಇರುವ ಪೇಪರ್ ಕಳುಹಿಸುತ್ತೇನೆ ಒಮ್ಮೆ ಓದಿ. ನಾನು ಅದನ್ನು ತರಿಸಿಕೊಂಡಿದ್ದೇನೆ. ಈಗ ಅದನ್ನೇ issue ಮಾಡಿಕೊಂಡು ಹೋದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾವು ಅವರಿಗೆ you be tough ಎಂದು ಹೇಳಿದೆವು. ಇಲಾಖೆಯನ್ನು ಸಮರ್ಪಕವಾಗಿ ನಡೆಸಬೇಕು. ಸರ್ಕಾರದ ಬಗ್ಗೆ ಅವರಿಗೆ ಕಳಕಳಿ ಇದೆ. ನಾನು ನಿನ್ನೆ ದಿವಸ ಅವರ ಜೊತೆ ಮಾತನಾಡಿದ್ದೇನೆ. ಈ ರೀತಿಯಾದ ಸಂದೇಶ ಸಮಾಜಕ್ಕೆ ಹೋಗುತ್ತದೆ. ಆಮೇಲೆ ನಮ್ಮ ಪಾರ್ಟಿಯವರು ರೇಪ್ ಕುರಿತು ಕೆಳಮನೆಯಲ್ಲಿ ಹೇಳಿರುವುದನ್ನು ನಾನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಏನು ಮಾತನಾಡಿದ್ದಾರೋ ಅದನ್ನು ಮಾತನಾಡಿದ್ದೇನೆ. ಮಾನ್ಯಈಶ್ವರಪ್ಪನವರೇ, ಹೆಣ್ಣುಮಕ್ಕಳು ಹೊಸಲು ದಾಟಿ ಹೋಗಬಾರದು, ಹೆಣ್ಣುಮಕ್ಕಳು ಹೊರಗೆ ಹೋಗಬಾರದು ಎಂದು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ. Naturally, ಈಗ ಮಹಿಳೆಯರು ನಮಗಿಂತಲೂ ಎಲ್ಲಾ ಕ್ಷೇತ್ರದಲ್ಲೂ ಮುಂದೆ ಇದ್ದಾರೆ. ನಾವೇ ಹಿಂದಿದ್ದೇವೆ. ಮಾನ್ಯ ಸಭಾಪತಿಯವರೇ, ನೀವು ಇದನ್ನು ಒಪ್ಪುತ್ತೀರೋ, ಇಲ್ಲವೋ. ಗಂಡು ಮಗು ಹುಟ್ಟಬೇಕು ಎನ್ನುತ್ತಾರೆ...

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರ; ಶ್ರೀಮತಿ ಭಾರತಿ ಶೆಟ್ಟಿಯವರೇ ಒಂದು ನಿಮಿಷ. ನಾನು ತಮ್ಮ ಪರವಾಗಿಯೇ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿದ್ದು ಸಾಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದೊಂದು ಲಾಸ್ಟ್ ಮಾತನಾಡುತ್ತೇನೆ. ನಾನು ಅದನ್ನು ಬಹಳ ಲಂಬಿಸುವುದಕ್ಕೆ ಹೋಗುವುದಿಲ್ಲ.

**ಶ್ರೀ ಮಾಧುಸ್ವಾಮಿ:-** ಲಂಬಿಸಿ ಆಗಿ ಹೋಯಿತಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ರೀತಿಯಾದಂಥ ಹೇಳಿಕೆ ಮಾನ್ಯ ಗೃಹ ಸಚಿವರಿಂದ ಬರುವುದು ಒಳ್ಳೆಯದಲ್ಲ. ಮಾನ್ಯ ಗೃಹ ಸಚಿವರು ತಕ್ಷಣವೇ ಅಲ್ಲಿಗೆ ಹೋಗಿ ಭೇಟಿ ಕೊಟ್ಟಿಲ್ಲ. He has not inspected the spot. ಅವರು ಮೈಸೂರಿನಲ್ಲೇ ಇದ್ದು, ಬೇರೆ ಬೇರೆ ಕಡೆ ಸಭೆ ಮಾಡಿ ಕೊನೆಗೆ ಆ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಅಂದರೆ ಇಂತಹ offense ಆದಾಗ one should be very serious. Government should be very vigilant and active. ಸರ್ಕಾರ ತಕ್ಷಣವೇ ಸ್ಪಂದನೆ ಮಾಡಬೇಕು. ಸೆಕ್ಷನ್ 164 ರಡಿ ಹೇಳಿಕೆ ಪಡೆದಿರುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು appreciate ಮಾಡುತ್ತೇನೆ. ಆಮೇಲೆ ಈ ಕೇಸ್ speedy disposal ಆಗಬೇಕು. No doubt, 90 ದಿನಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸುತ್ತಾರೆ. ಇದಕ್ಕಾಗಿ ಒಂದು ವಿಶೇಷ ನ್ಯಾಯಾಲಯವನ್ನು ನೇಮಿಸಬೇಕು. ಅಂದರೆ ಒಂದು ವಿಶೇಷ ನ್ಯಾಯಾಲಯವನ್ನು ನೇಮಿಸಿದಾಗ ತಕ್ಷಣವೇ through special Court speedy trial ಮಾಡಿ, ಆರೋಪಿಗಳಿಗೆ ಸುಮಾರು 6 ತಿಂಗಳೊಳಗೆ punishment ಆದಲ್ಲಿ it will act like a deterrent. I will defend this as a deterrent theory.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿದ್ದು ಸಾಕು. ಇನ್ನೂ ಮಾತನಾಡುವವರು ಬಹಳ ಮಂದಿ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Deterrent theory ಮಾಡಬೇಕು. ರೇಪ್‌ಗಳಂಥ ಪ್ರಕರಣದಲ್ಲಿ ಭಾಗಿಯಾದರೆ ಸುಮಾರು ಐದಾರು ತಿಂಗಳಿನಲ್ಲಿ ಶಿಕ್ಷೆಯಾಗುತ್ತದೆ, ಗಲ್ಲಿಗೇರಿಸುತ್ತಾರೆ ಎನ್ನತಕ್ಕಂಥ ಅಂಜಿಕೆ ಜನರಲ್ಲಿ ಮೂಡುತ್ತದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರ ಒಂದು ವಿಶೇಷ ನ್ಯಾಯಾಲಯವನ್ನು ರಚಿಸಿ, speedy disposal ಮಾಡಿ ಸುಮಾರು ಆರು ತಿಂಗಳೊಳಗೆ ಆರೋಪಿಗಳಿಗೆ ಅತ್ಯಂತ ಕಠಿಣವಾದಂಥ ಶಿಕ್ಷೆ ಆಗುವಂತೆ ಮಾಡಬೇಕು. ಇವರಿಗೆ ಬರೀ life imprisonment ಮಾಡುವುದಲ್ಲ. ಕನಿಷ್ಟವೆಂದರೆ death sentence ಆಗಬೇಕು. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಯಾರ domain ನಲ್ಲಿದೆ ಅವರು ಮಾತನಾಡಬೇಕು, ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲವೆಂದರು. ನಾನು ಅವರ ಕಳಕಳಿಯನ್ನು appreciate ಮಾಡುತ್ತೇನೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ಆಗುವಂಥ ದೌರ್ಜನ್ಯದ ಬಗ್ಗೆ ಅವರೇನು ಮಾತನಾಡಿದರಲ್ಲಾ, I really appreciate her concern. ಧನ್ಯವಾದಗಳು.

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಬಹಳ ಪ್ರಮುಖವಾದ ವಿಚಾರ ಚರ್ಚೆಯಾಗುತ್ತಿದೆ. ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಕಾನೂನಿನಲ್ಲಿ ಗಟ್ಟಿಯಾದ ಬಿಗಿಯಾದ clause ಗಳಿವೆ. ಕಲಂ 376 ಐ.ಪಿ.ಸಿ.ಯಲ್ಲಿ punishment ನ್ನು ಸರಿಯಾಗಿ define ಮಾಡಿದ್ದಾರೆ. ಆದರೆ ದುರಂತವೇನೆಂದರೆ, ಶಿಕ್ಷೆಯ ಪ್ರಮಾಣ ಮತ್ತು ಶಿಕ್ಷೆಗೆ ಒಳಗಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಪೊಲೀಸ್‌ನವರು ನೀಡಿರುವ ವರದಿಯಲ್ಲಿ 2018ರಲ್ಲಿ ಪ್ರಕರಣ ದಾಖಲಿಸಿಕೊಳ್ಳುತ್ತಾರೆ. 2020ರಲ್ಲಿ punishment ಘೋಷಣೆ ಮಾಡುತ್ತಾರೆ. ಕಾನೂನು ಏನು ಹೇಳುತ್ತದೆಂದರೆ 60 ದಿನದೊಳಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಬೇಕು. ಇದರಲ್ಲಿ Investigation Officer ರವರ ಪಾತ್ರ ಬಹಳ ಮುಖ್ಯವಾದುದು. ನನ್ನ ಮನವಿ ಏನೆಂದರೆ, ಈ ರಾಜ್ಯಕ್ಕೆ ಬಹಳ ದಿನಗಳಾದ ನಂತರ ಅತ್ಯಂತ ದಕ್ಷ, ಪ್ರಾಮಾಣಿಕ . . .

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ತಾವು ಸ್ವಲ್ಪ short ಆಗಿ ಮುಗಿಸಿ. ಇನ್ನೂ ಬಹಳ ಸದಸ್ಯರು ಮಾತನಾಡುವವರು ಇದ್ದಾರೆ.

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಒಂದೇ ನಿಮಿಷ ಮಾತನಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, clarification ಕೇಳಿ ಎಂದರೆ ಭಾಷಣ ಮಾಡುತ್ತಿದ್ದೀರಲ್ಲ.

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಕಾನೂನಿನಲ್ಲಿ ಪ್ರಬುದ್ಧತೆಯನ್ನು ಹೊಂದಿರುವಂಥ ಕಾನೂನು ಸಚಿವರು ಸಿಕ್ಕಿದ್ದಾರೆ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ತಾವು ಕ್ಲಾರಿಫಿಕೇಷನ್ ಕೇಳಿ.

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕ್ಲಾರಿಫಿಕೇಷನ್ನೇ ಕೇಳುತ್ತಿದ್ದೇನೆ. ನಾನು ಇಲ್ಲಿ ಭಾಷಣ ಮಾಡುತ್ತಿಲ್ಲ. ನನ್ನ apprehension ಏನೆಂದರೆ, ಕರ್ನಾಟಕದಲ್ಲಿ prosecution rate ಕಡಿಮೆಯಾಗಿರುವುದಕ್ಕೆ ಏನು ಕಾರಣ? ಅದಕ್ಕಾಗಿ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, Prosecution Department ಗೃಹ ಇಲಾಖೆಯ ಅಧೀನದಲ್ಲಿ ಬರುತ್ತಿದೆ. ಕಾನೂನು ಇಲಾಖೆ ಬೇರೆ, Prosecution Department ಬೇರೆ ಇದೆ. ನಾನು ಮಾನ್ಯ ಕಾನೂನು ಸಚಿವರಿಗೆ ಮನವಿ ಮಾಡುವುದೇನೆಂದರೆ, ಈಗಲಾದರೂ ಆ ಅಭಿಯೋಜನಾ ಇಲಾಖೆಯನ್ನು ತೆಗೆದುಕೊಂಡು Law Departmentಗೆ ಸೇರಿಸಿದರೆ ಹೊಣೆಗಾರಿಕೆ ಹೆಚ್ಚಾಗಿರುತ್ತದೆ. ತ್ವರಿತಗತಿಯಲ್ಲಿ trial ಎಲ್ಲಾ ಆಗುತ್ತದೆ. ಶಿಕ್ಷೆ ಪ್ರಮಾಣ ಹೆಚ್ಚಿಸಲು ಸಾಧ್ಯವಾಗುತ್ತದೆ. ಶಿಕ್ಷೆ ಪ್ರಮಾಣ ಕಡಿಮೆಯಾಗಿರುವುದರಿಂದ ಈ ಅತ್ಯಾಚಾರಿಗಳಿಗೆ, ಅಪರಾಧಿಗಳಿಗೆ ಭಯವಿಲ್ಲ. ಆದ್ದರಿಂದ ನನ್ನ ಮನವಿ. ಅಭಿಯೋಜನಾ ಇಲಾಖೆಯನ್ನು ಕಾನೂನು ಇಲಾಖೆಗೆ ಸೇರಿಸಿಕೊಳ್ಳಲು ಗಮನಹರಿಸಬೇಕು. ಕಾನೂನು ಇಲಾಖೆಗೆ ಸೇರಿಸಿಕೊಳ್ಳಲು ಪ್ರಯತ್ನ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ ಒಂದು ನಿಮಿಷ. . . ದಯಮಾಡಿ ಲೋಕಸಭೆಯ ಸ್ಪೀಕರ್‌ರವರು ಬಂದಿದ್ದಾರೆ. ನಾವೆಲ್ಲರೂ ಅಲ್ಲಿಗೆ ಹೋಗಬೇಕಾಕಿದೆ. ಇನ್ನೂ ಒಂದು ವಿಧೇಯಕ ಕೂಡ ಇದೆ. ಮಾನ್ಯ ಸದಸ್ಯರುಗಳು ಸಹಕಾರ ಕೊಡಬೇಕು. ಮಧ್ಯಾಹ್ನ ಒಂದೂವರೆ ಗಂಟೆಯೊಳಗೆ ಸದನದ ಕಲಾಪಗಳನ್ನು ಮುಗಿಸುವಂಥ ಪ್ರಯತ್ನ ಮಾಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಈ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗಲಿಲ್ಲ. ಸಹೋದರಿಯಾದ ಶ್ರೀಮತಿ ಭಾರತಿ ಶೆಟ್ಟಿಯವರು ಏನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ನನ್ನ ಪ್ರಶ್ನೆ ಇಷ್ಟೆ. ಒಂದು ಅತ್ಯಾಚಾರ ಪ್ರಕರಣವಾದ ನಂತರ ಅದು Parliament ಇರಬಹುದು ಅಥವಾ Assembly ಇರಬಹುದು. ನಾವು ಒಂದು ದಿವಸ ಅಥವಾ ಎರಡು ದಿವಸ ಚರ್ಚೆ ಮಾಡುತ್ತೇವೆ, ಅಲ್ಲಿಗೆ ಇದು ಮುಗಿಯಿತು.

**(ಮುಂದು...)**

**(1020)24.9.2021/1.00/ಎಂ.ಎಂ-ಜಿ.ಆರ್**

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ [ಮುಂದು]:-**

ಯಥಾಸ್ಥಿತಿ ಇದು ಮರುಕಳಿಸುತ್ತಲೇ ಇರುತ್ತದೆ. ಮಾನ್ಯ ಸಚಿವರಾದ ಮಾಧುಸ್ವಾಮಿಯವರಿಗೆ ಗಾದೆ ಚೆನ್ನಾಗಿ ಗೊತ್ತಿರುತ್ತದೆ. ಇದು **"ಸ್ಮಶಾನ ವೈರಾಗ್ಯ, ಪ್ರಸೂತಿ ವೈರಾಗ್ಯ"** ರೀತಿ. ನಾವು ಸ್ಮಶಾನಕ್ಕೆ ಹೋದಾಗ ಅಯ್ಯೋ, ಪಾಪ! ಎಂದೆಲ್ಲಾ ಮಾತನಾಡುತ್ತೇವೆ. ಪುನಃ ಇದ್ದೇ ಇರುತ್ತದೆ. ಪ್ರಶ್ನೆ ಇಷ್ಟೇ. ನಮ್ಮ ಸಹೋದರಿ ಭಾರತಿ ಶೆಟ್ಟಿಯವರು ಬಹಳ ಗಂಭೀರವಾಗಿ ಈ ರೀತಿ ಕಠಿಣ ಶಿಕ್ಷೆಯಾಗಬೇಕೆಂದಾಗ ಕೆಲವೆಲ್ಲಾ ಅಂಶಗಳನ್ನು ಹೇಳಿದರು. ಮಾನ್ಯ ಮಾಧುಸ್ವಾಮಿಯವರು ಸಹ ಅದನ್ನು ಪ್ರಸ್ತಾಪ ಮಾಡಲಿಲ್ಲ. ಪೊಲೀಸರು ಏನಾದರೂ ಯಾವುದಾದರೂ ಅಪರಾಧಿಗೆ ದೊಣ್ಣೆಯಲ್ಲಿ ಹೊಡೆದರೂ ಸಹ ಮಾನವ ಹಕ್ಕುಗಳ ಆಯೋಗಕ್ಕೆ ಹೋಗಿ ಕಂಪ್ಲೇಂಟ್ ಕೊಟ್ಟು ಪೊಲೀಸರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈ ಕಾಲು ಎಲ್ಲವನ್ನೂ ಕಟ್ಟಿ ಹಾಕಿ ಬಿಡುತ್ತಾರೆ. ಮಾನ್ಯ ಸಚಿವರು **“ಬೇಟಿ ಬಚಾವೋ, ಬೇಟಿ ಪಡಾವೋ”** ಎಂದು ಹೇಳಿದರು. ಅದು ರೇಪ್ ವಿಚಾರದಲ್ಲಿ ಬಂದಿದ್ದಲ್ಲ, ಹರಿಯಾಣದಲ್ಲಿ ಮಹಿಳೆಯರ ಭ್ರೂಣ ಹತ್ಯೆಯಾಗುತ್ತಿತ್ತು, ಆಗ “**ಬೇಟಿ ಬಚಾವೋ, ಬೇಟಿ ಪಡಾವೋ”** ಎಂದು ಬಂತು. ಅಲ್ಲಿ ಗಂಡು, ಹೆಣ್ಣು ಮಕ್ಕಳ ratio 800-1000 ವರೆಗೆ ಬಂದಿತ್ತು. ಬೇರೆ ರಾಜ್ಯದಿಂದ ಮದುವೆ ಮಾಡುತ್ತಿದ್ದರು. ಅಲ್ಲಿ ಭ್ರೂಣ ಹತ್ಯೆ ಮಾಡುವವರು ಯಾರೆಂದರೆ, ಗಂಡಸರೇನೂ ಮಾಡುವುದಿಲ್ಲ, ಮಾಡುವವರು ಹೆಂಗಸರೇ. ಆದ್ದರಿಂದ ತಮಗೆ ಗೊತ್ತಿದೆ. ನಾವು 2005 ರಲ್ಲಿ Protection of Women from Domestic Violence Act ಮಾಡಿದೆವು. ಆಗ **'ಟೈಮ್ಸ್ ಆಫ್ ಇಂಡಿಯಾ'** ಪತ್ರಿಕೆಯ ಮಾಜಿ ಸಂಪಾದಕರಾದ ಗೌತಮ್ ಅಧಿಕಾರಿ ಎನ್ನುವವರು **'The Intolerant Indian'** ಎನ್ನುವ ಒಂದು ದೊಡ್ಡ ಪುಸ್ತಕವನ್ನು ಬರೆದರು. ಅದರಲ್ಲಿ ಹೇಳಿರುವಂತೆ, ಶೇ.80 ರಷ್ಟು domestic violence ಮನೆಯಲ್ಲಿ ಆ ಹೆಣ್ಣುಮಗಳ ಮೇಲೆ ಅಥವಾ ಪತ್ನಿಯ ಮೇಲೆ ಹೊಡೆದಾಟ, ಬಡಿದಾಟವಾಗುವುದು ಏತಕ್ಕೆಂದರೆ, 'ಉಪ್ಪಿಲ್ಲ, ಸಕ್ಕರೆಯಿಲ್ಲ, ಬೆಂಕಿ ಪೊಟ್ಟಣವಿಲ್ಲ, ಇಂತಹದ್ದನ್ನು ತಂದಿಲ್ಲ ಎಂದು ಶೇ.80ರಷ್ಟು ಹಿಂಸಾಚಾರವಾಗುತ್ತಿತ್ತು. ಅದಕ್ಕೆ ನಮ್ಮ ವಿಶ್ವನಾಥ್‌ರವರ ಶಿಷ್ಯ, Ex-Mayor, B.B.M.P., ರಘುರವರು ಇದ್ದಾರೆ. ಅವರು ನನಗೊಂದು Will Durant ರವರ ಪುಸ್ತಕವೊಂದನ್ನು ತಂದು ಕೊಟ್ಟರು. Will Durant ರವರ ಹೆಸರನ್ನು ತಾವು ಕೇಳಿರುತ್ತೀರಿ. ಅವರು British Philosopher. ಅವರು ಹೇಳುತ್ತಾರೆ, ಯಾವುದಾದರೂ ರಾಷ್ಟ್ರ, ಬಹಳ ಆಧುನಿಕ ರಾಷ್ಟ್ರ, ಅಥವಾ ಮುಂದುವರೆದ ರಾಷ್ಟ್ರ, ಬಲಿಷ್ಠ ರಾಷ್ಟ್ರವೆಂದು ಹೇಳಿಕೊಳ್ಳಬೇಕಾದರೆ ಅಲ್ಲೇನೂ ಬ್ಯಾಂಕು, ರಾಕೆಟ್, ಬಾಂಬ್, ಟ್ಯಾಂಕ್ ಇರಬೇಕಾದ್ದಿಲ್ಲ. ಯಾವುದಾದರೂ ರಾಷ್ಟ್ರ, ಆಧುನಿಕ ರಾಷ್ಟ್ರ, ಮುಂದುವರೆದ ರಾಷ್ಟ್ರ, ಬಲಿಷ್ಠ ರಾಷ್ಟ್ರವಾದರೆ ಆ ರಾಷ್ಟ್ರದಲ್ಲಿ ಜನರು ಮಕ್ಕಳನ್ನು ಯಾವ ರೀತಿ ಟ್ರೀಟ್ ಮಾಡುತ್ತಾರೆ, ಹೆಣ್ಣುಮಕ್ಕಳನ್ನು ಯಾವ ರೀತಿ ಟ್ರೀಟ್ ಮಾಡುತ್ತಾರೆ, ಅಂಗವಿಕಲರನ್ನು ಯಾವ ರೀತಿ ಟ್ರೀಟ್ ಮಾಡುತ್ತಾರೆ ಮತ್ತು ವಯಸ್ಸಾದವರಿಗೆ ಯಾವ ರೀತಿ ಟ್ರೀಟ್ ಮಾಡುತ್ತಾರೆ, ಈ ನಾಲ್ಕು ಅಂಶಗಳಲ್ಲಿ ಎಲ್ಲಾ ಅಂಶಗಳೂ ಸರಿಯಾಗಿದ್ದರೆ ಆ ರಾಷ್ಟ್ರವೇ ಬಲಿಷ್ಟವಾದ ರಾಷ್ಟ್ರ, ಆಧುನಿಕ ರಾಷ್ಟ್ರ, ಮಾದರಿ ರಾಷ್ಟ್ರ ಎಂದು ಹೇಳುತ್ತೇವೆ ವಿನಃ ಅದಕ್ಕೋಸ್ಕರ ನಮ್ಮ ಸಹೋದರಿ ಭಾರತಿ ಶೆಟ್ಟಿಯವರು ಏನನ್ನು ಹೇಳಿದರು, ನಿನ್ನೆ ಎಲ್ಲಾ ನಾವು ರಾಷ್ಟ್ರೀಯ ಶಿಕ್ಷಣ ನೀತಿ ವಿಷಯದ ಮೇಲೆ ಬಂದೆವಲ್ಲಾ ಅದನ್ನು ಎಲ್ಲಾದರೂ ಒಂದು ಕಡೆ ಸೇರಿಸಿ ಮಕ್ಕಳನ್ನು ಗೌರವದಿಂದ ನೋಡಿಕೊಳ್ಳಬೇಕು, ಹೆಂಗಸರನ್ನು ಗೌರವದಿಂದ ನೋಡಿಕೊಳ್ಳಬೇಕು ಮತ್ತು ಅಂಗವಿಕಲರನ್ನು ಸರಿಯಾಗಿ ನೋಡಿಕೊಳ್ಳಬೇಕು. ಈಗ ಸುಮಾರು 18,000

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅನಾಥಾಶ್ರಮಗಳು ವಯಸ್ಸಾದವರನ್ನು ನೋಡಿಕೊಳ್ಳುವುದಕ್ಕೆ ಬಂದಿವೆ. ಆದ್ದರಿಂದ ಮಾನ್ಯ ಸಚಿವರಾದ ಮಾಧುಸ್ವಾಮಿಯವರು ಮನಸ್ಸು ಮಾಡಿದರೆ ಆಗುತ್ತದೆ. ಇದಕ್ಕೆಲ್ಲಾ ನಾವು ಕೇಂದ್ರಕ್ಕೆ ಹೋಗಬೇಕಾದ್ದಿಲ್ಲ. ಮನಸ್ಸು ಮಾಡಿ; ಇವೆಲ್ಲವನ್ನೂ ಸಹ ಮೊದಲಾದರೆ ನಾವೆಲ್ಲಾ ಜಾಸ್ತಿ ನೀವೇ ಹೇಳುತ್ತಿದ್ದಿರಿ, ಸಂಸ್ಕೃತ ಮಾತನಾಡುವವರು "ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ" ಎಂದು ಹೇಳಿ ಸ್ವಲ್ಪ ಅಲ್ಲೂ ಇಲ್ಲೂ ಗೌರವ ಇಟ್ಟುಕೊಂಡಿದ್ದೀರಿ. ಅಲ್ಲಿಯೂ ಹೆಚ್ಚು ಕಡಿಮೆಯಾಗಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, (ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಈ ವಿಚಾರದಲ್ಲಿ ರಾಜಕೀಯವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ರಾಜಕೀಯವಲ್ಲ, ನಮ್ಮ ಜೀವನದ ವಿಧ ಆ ರೀತಿ ಇದೆಯೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹೋಗಲಿ ಬಿಡಿ. There is no point. ಮಾನ್ಯ ಮಾಧುಸ್ವಾಮಿಯವರೇ, ನಮ್ಮ ಮಾನ್ಯ ನಾರಾಯಣಸ್ವಾಮಿಯವರು 'The most competent Law Minister, we have ever seen.' ಎಂದು ಹೇಳಿದರು. ನೀವು ಮನಸ್ಸು ಮಾಡಿದರೆ ಆಗುತ್ತದೆ. ಈ ನಾಲ್ಕು ಅಂಶಗಳನ್ನು ಯಾವ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿ ಮಕ್ಕಳಿಗೆ; ಏಕೆಂದರೆ there is no dearth of law. ತಮಗೆ ಗೊತ್ತಿದೆ, ತಾವು ಒಳ್ಳೆಯ ವಕೀಲರು. ಕಾನೂನಿನಲ್ಲಿ ಎಷ್ಟು ಸೆಕ್ಷನ್‌ಗಳಿವೆ, ಪೊಲೀಸರಿಗೆ ಹೇಳಿದರೆ ಎಲ್ಲವನ್ನೂ ಹಾಕಿ ಅವನು ಜೀವನಪೂರ್ತಿ ಆಚೆಗೆ ಬರದಂತೆ ಮಾಡುತ್ತಾರೆ. ಆದರೆ ನೀವು ವಕೀಲರುರಾಗಿರಿ, ಅವನನ್ನು ಬಿಡಿಸಿಕೊಂಡು ಬರುತ್ತೀರಿ. ಆದ್ದರಿಂದ ಈ contradictory situation ನಲ್ಲಿ ಸಮಾಜವನ್ನು ಸುಧಾರಣೆ ಮಾಡಬೇಕು. Society prefaces the crime, criminal commits it. ಸಮಾಜದಲ್ಲಿ ಸುಧಾರಣೆಯಾಗಬೇಕಾದರೆ ಯಾವ ಯಾವ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಬರಬೇಕೆನ್ನುವುದನ್ನು ತಾವು ತೀರ್ಮಾನ ತೆಗೆದುಕೊಳ್ಳಬೇಕು. ಧನ್ಯವಾದಗಳು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲರೇನು ರೆಸ್ಟ್ ಮಾಡಿದ್ದಾರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ;

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ತಿಪ್ಪೇಸ್ವಾಮಿಯವರೇ, ನಿಲ್ಲಿಸಿ, ನಾವು ನೀವು ಒಂದೇ ಅಲ್ಲವೇ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ಒಂದೇ ನಿಮಿಷ, ಬೇರೇನೂ ಇಲ್ಲ. I don't take more than one minute. ಇವತ್ತಿನ ಜಾಗತೀಕರಣ ಯುಗದಲ್ಲಿ rapid urbanisation ಎಲ್ಲೆ ಮೀರಿದಂತಹ socialisation ನಲ್ಲಿ ಸಾಕಷ್ಟು ದೌರ್ಜನ್ಯ ಮಹಿಳೆಯರ ಮೇಲೆ ಅದರಲ್ಲೂ ಕೂಡ ವೃತ್ತಿಪರ ಮಹಿಳೆಯರ ಮೇಲೆ ಆಗುತ್ತಿದೆ. ತಮಗೆ ಗೊತ್ತಿರಬೇಕು. ಸಾಕಷ್ಟು missing girls ಇದ್ದಾರೆ, ಆಮೇಲೆ trafficking of women and children ಇದ್ದಾರೆ. ಇವುಗಳನ್ನು ಟ್ರೇಸ್ ಮಾಡಿ, ಗುರುತಿಸಿ ಅವರನ್ನು rehabilitation ಮಾಡುವುದರೊಳಗಾಗಿ, ಅವರಿಗೆ ಅರಿವು ಬರುವುದರೊಳಗೆ ಅವರ ಜೀವನವೇ ಪೂರ್ತಿ ಹಾಳಾಗಿರುತ್ತದೆ. ಇಂತಹ ವಿಷಯಗಳನ್ನು ಕೂಡ ನಾವು ಸಾಕಷ್ಟು ಮನಗಾಣಬೇಕು. ಈ ದಿಕ್ಕಿನಲ್ಲಿ ಸರ್ಕಾರ ಸಾಕಷ್ಟು ಕಾರ್ಯಾರಂಭ ಮಾಡಬೇಕಾಗಿದೆ. ಕೇವಲ ಅತ್ಯಾಚಾರದ ಬಗ್ಗೆ ಮಾತನಾಡಿಲ್ಲ, deterrent punishment ಆಗಬೇಕು. ಸಹೋದರಿ ಭಾರತಿ ಶೆಟ್ಟಿಯವರು ಏನು ಹೇಳಿದರು ಅದರಂತೆಯೇ ಆಗಲಿ, ಅದಕ್ಕೇನೂ ಅಡ್ಡಿಯಿಲ್ಲ. ಮಾನ್ಯ ಕಾನೂನು ಸಚಿವರು ಮಾತನಾಡಬೇಕಾದರೆ ಹೇಳಿದರು. ಪ್ರಾಸಿಕ್ಯೂಟರ್ ಆಗಬಹುದು, Special Prosecutor, Public Prosecutor ಆಗಬಹುದು, ಅವರ ನೇಮಕಾತಿಯಲ್ಲಿ ನಾನು ಮಹಿಳೆಯರಿಗೆ ಆದ್ಯತೆ ಕೊಡುತ್ತೇನೆ, ಜೊತೆಗೆ ನ್ಯಾಯಾಧೀಶರನ್ನು, ಮ್ಯಾಜಿಸ್ಟ್ರೇಟರನ್ನು ಕೂಡ ಎಲ್ಲಿ Magistrate's Court ಇದೆ, ಎಲ್ಲಿ ಮಹಿಳಾ ಜಡ್ಜ್ ಇದ್ದಾರೆ ಅಲ್ಲಿಗೆ ವರ್ಗಾವಣೆ ಮಾಡಿ trial ಮಾಡುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿರುವುದು ಒಳ್ಳೆಯ ವಿಷಯ. ನನ್ನ ಇನ್ನೊಂದು ಸಲಹೆಯೇನೆಂದರೆ, ಯಾರಿದ್ದಾರೆ, Assistant Public Prosecutor, Prosecutor ಇರಬಹುದು, ಸರ್ಕಾರದಿಂದ ನೇಮಕವಾದಂತಹವರು ಇರಬಹುದು ಅವರು Counsellor ಆಗಿದ್ದರೆ ಒಳ್ಳೆಯದು. ಏಕೆಂದರೆ, ಸಾಕಷ್ಟು ರೀತಿಯಲ್ಲಿ ಮಹಿಳೆಯರಿಂದ ಅಥವಾ ಮಗುವಿನಿಂದ ಯಾವ ರೀತಿಯಲ್ಲಿ ಏನು ನೋವಾಗಿದೆ, ಯಾವ ರೀತಿಯಲ್ಲಿ ಸಾಕ್ಷಿಗಳನ್ನು ಸಂಗ್ರಹ ಮಾಡಬೇಕು ಎಂಬುದರ ಅರಿವು ಅವರಿಗೆ ಇರಬೇಕಾಗುತ್ತದೆ. ಅವರೇ ಬಾಯಿ ಬಿಡಿಸಬೇಕಾಗುತ್ತದೆ, ಬೇರೆ ಯಾರೂ ಕೂಡ ಬಾಯಿ ಬಿಡಿಸುವುದಕ್ಕಾಗುವುದಿಲ್ಲ. ಆದ್ದರಿಂದ ಆ ರೀತಿಯಾಗಿ ಮಹಿಳಾ ಕುಟುಂಬ ನ್ಯಾಯಾಲಯಗಳು ನ್ಯಾಯ ದೇಗುಲ. ಸಾಕಷ್ಟು ರೀತಿಯಲ್ಲಿ ವೃತ್ತಿಪರರಾದ Counsellors ಇದ್ದಾರೆ ಅವರಿಂದ ಸಚಿವರು ಏನಾದರು ಮಾಡುತ್ತಾರೆಂದು ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಯದಾಗಿ ರಾಜ್ಯಸಭಾ ಸಮಿತಿ ಶ್ರೀ ಆನಂದಶರ್ಮಾರವರ ಅಧ್ಯಕ್ಷತೆಯಲ್ಲಿ ಅವರು ಸಾಕಷ್ಟು ಶಿಫಾರಸ್ಸುಗಳನ್ನು ಮಾಡಿದ್ದಾರೆ. ದಯಮಾಡಿ ರಾಜ್ಯ ಸರ್ಕಾರ ಆ ಮಹತ್ವದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂದು ಕೋರುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಎರಡು ಅಂಶಗಳಿಗೆ ನಾನು ಮೊದಲೇ ಉತ್ತರ ಹೇಳಿದ್ದೇನೆ. ಮೊದಲನೆಯದಾಗಿ ಕಂಪ್ಲೇಂಟ್ ಕೊಡುವ ಹೇಳಿಕೆಯಲ್ಲಿ ನಿಧಾನವಾಯಿತು, ಇನ್ನೊಂದು ಸ್ಟೇಷನ್‌ನಿಂದ ಬರುವುದು ಸ್ವಲ್ಪ ತಡವಾಯಿತು. But, under law, if it exceeds 24 hours, then only the police has to explain why there is a delay in filing the F.I.R., ಕಾನೂನಿನಲ್ಲಿ 24 ಗಂಟೆ ದಾಟಿದರೆ ನಾವು ಕೋರ್ಟ್‌ಗೆ ಎಫ್.ಐ.ಆರ್ ಅನ್ನು ಮೊದಲೇ ಏತಕ್ಕೆ ಹಾಕಲಿಲ್ಲವೆಂಬುದಕ್ಕೆ ವಿವರಣೆ ಕೊಡಬೇಕು. ಆದರೆ ನಾವು ಇಲ್ಲಿ ಬೇಕೆಂದು ಮಾಡಿಲ್ಲ ಎಂಬುದನ್ನು ಸ್ಪಷ್ಟ ಪಡಿಸಿದ್ದೇನೆ. I think, he is convinced. ಆದರೂ ವಿರೋಧ ಪಕ್ಷವಲ್ಲವೇ? ಅವರು ಹ್ದೂಂ ಎನ್ನುವುದಕ್ಕಾಗುವುದಿಲ್ಲ, ಅವರು ಮಾತನಾಡುವವರೇ. ಎರಡನೆಯದಾಗಿ, offences committed under Section 307, I.P.C., ಬಗ್ಗೆ ತಮಗೆ ಗೊತ್ತು. Assault ಆಗಬೇಕು, weapons ಬಳಸಬೇಕು, ಮಾರಕವಾಗಿ ಏನಾದರೂ there should be an ingredient to show that he had tried to kill them. ಇದು ಲೈಂಗಿಕ ಅತ್ಯಾಚಾರ. ಕೊಲ್ಲುವುದಕ್ಕೆ ಮಾಡಿದ ಪ್ರಯತ್ನವೋ ಮಾತನ್ನು ಬಳಸದೇ ಹೋದರೆ ಅವನು vital organs ಮೇಲೆ damage ಮಾಡಿದ್ದಾನೆ ಎಂದು ನಾವು ಸಾಬೀತು ಮಾಡದೇ ಹೋದರೆ ಅವನಿಗೆ; ಇವೆರಡನ್ನೂ ಒಟ್ಟಿಗೇ ಮಾಡಿಕೊಂಡು ಹೋಗಿದ್ದರೆ our case would have been very weak. Section 307, I.P.C., ಆಗಿದ್ದರೆ ಅವನು ಬೇಗ ಬಿಡುಗಡೆಯಾಗುತ್ತಿದ್ದ. ಇಲ್ಲಿ ಏನಾಗಿದೆ ಎಂದರೆ, this is more grievous offence than the offence under Section 307, I.P.C., If we had gone under Section 307, I.P.C., we would have lost the case. Case Section 307, I.P.C., ಸಾಬೀತು ಮಾಡುವುದಕ್ಕೆ ಆಗುತ್ತಿರಲಿಲ್ಲ. ನೀವೂ ಕೂಡ ವಕೀಲರು. We were not in a position to prove the motive at all. Section 302, I.P.C., Section 307, I.P.C., ರಡಿಯಲ್ಲಿ ಕೇಸನ್ನು ದಾಖಲಿಸುವಾಗ 'motive' ಅನ್ನು ತೋರಿಸಲೇಬೇಕು. ಏತಕ್ಕೆ ತನ್ನನ್ನು ಹೊಡೆಯುವುದಕ್ಕೆ, ಕೊಲ್ಲುವುದಕ್ಕೆ ಬಂದ, ಏತಕ್ಕೆ ತನ್ನ ಮೇಲೆ attempt ಮಾಡುವುದಕ್ಕೆ ಬಂದ ಎನ್ನುವಂತಹ motive establish ಮಾಡುವುದಕ್ಕೆ ಆಗುತ್ತಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 'motive' is essential. I do agree with the argument of Hon'ble Law

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Minister. ಆದರೆ, ಇಲ್ಲಿ ಅವನ motive ಏನಿದೆ ಎಂದರೆ he was in between that lady and the accused. ಅವರಿಗೆ ರಕ್ಷಣೆ ಕೊಡುತ್ತಾನೆ, ನಮಗೆ ಅಪರಾಧ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಜನರನ್ನು ಕೂಗಬಹುದು, ಇಲ್ಲದಿದ್ದರೆ ಆ ಮನುಷ್ಯ ಒಳ್ಳೆಯದು ಎನ್ನುವಂತಹ ಉದ್ದೇಶ ಇರುತ್ತದೆ. ನಾನು ingredients study ಮಾಡಿ ಹೇಳಿದ್ದೇನೆ. But, Hon'ble Law Minister can think over that matter.

**ಶ್ರೀ ಜೆ.ಸಿ . ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, as a Lawyer, I won't accept this argument. Section 307, I.P.C., ingredients ಬೇರೆ, issue ಬೇರೆ. Here, we have a strong case than a case under Section 307, I.P.C., Section 354, I.P.C., ರಲ್ಲಿ ಇದನ್ನೆಲ್ಲಾ ಹೇಳಿದ ಮೇಲೆ Section 376, I.P.C., ಗೆ ಚಾರ್ಜ್ ಮಾಡಿರುವುದರಿಂದ here the punishable offence is more. ಹಾಗಾಗಿ Section 307, I.P.C., ರಲ್ಲಿ ಆಗುವುದಿಲ್ಲ. Section 307, I.P.C., ಅಡಿಯಲ್ಲಿ ಅವನು ಕಂಪ್ಲೇಂಟ್ ಕೊಡಬೇಕಾಗಿತ್ತು. ನನಗೆ ಸಾಯಿಸುವ ಉದ್ದೇಶದಿಂದ ಮಾರಣಾಂತಿಕವಾಗಿ ಹಲ್ಲೆ ಮಾಡಿದರು ಎಂದು ಅವನು ಕಂಪ್ಲೇಂಟ್ ಕೊಡಬೇಕಾಗಿತ್ತು. ಅವನು ಕಂಪ್ಲೇಂಟ್ ಕೊಡದಿದ್ದರೆ we cannot take it as a case under Section 307, I.P.C., **'ಹೊಡೆದರು'** ಎಂದರೆ Section 324, I.P.C., ಪ್ರಕಾರ ಪ್ರಕರಣವೇ ಮುಕ್ತಾಯವಾಗಿ ಬಿಡುತ್ತದೆ.

(ಮುಂದು)

(1021) 24-09-2021/ 1-10/ ಕೆಹೆಚ್-ಜಿಆರ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಇದ್ದರೆ ಇವರ ಕಾರ್ಯ ಸಾಧನೆ ಆಗುವುದಿಲ್ಲ. It is a common thinking.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, that part is covered. ಮಾನ್ಯ ವಿರೋಧ ಪಕ್ಷದ ನಾಯಕರೇ, ನನಗೂ ಮಾತನಾಡುವುದಕ್ಕೆ ಬಿಡಿ. ಇದು ಅನುಚ್ಛೇದ 354 ರಲ್ಲಿ cover ಆಗುವುದರಿಂದ, ನಂತರ ಅನುಚ್ಛೇದ 376 ರಲ್ಲಿ ಚಾರ್ಜ್ ಮಾಡುವುದರಿಂದ ಇದು ಬೇಕಿಲ್ಲ ಎನ್ನುವುದು ನನ್ನ ಭಾವನೆ. ಎರಡನೆಯದಾಗಿ, ಈಗಾಗಲೇ national average

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿ ಒಂದು ಲಕ್ಷ ಜನಸಂಖ್ಯೆಗೆ police force is 198. ಕರ್ನಾಟಕ 182, ಮೈಸೂರು 317 ಎಂದು ನಾನು ಹೇಳುತ್ತಿದ್ದೆ. ಪೊಲೀಸ್‌ನವರದ್ದು ನಮಗೆ dearth ಇಲ್ಲ. ಗಸ್ತು ಕಾಯುವುದು ಎಲ್ಲಾ ಕಡೆ ನಿರೀಕ್ಷೆ ಮಾಡಿ ಕಾಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ. ಕಾಯಬಹುದು. Where will you patrol? ಇಲ್ಲಿ ಒಂದು ಘಟನೆಯಾಗಿದೆ ಎಂದು ಒಂದು ಇಷ್ಟು ದಿವಸ ಗಸ್ತು ಒಡೆಯುತ್ತೇವೆ. ಆ ರೀತಿಯಾಗಿರುವುದರಿಂದ, the police were right in taking the action. ಈಗ ಇವರು ಏನು ಹೇಳಿದ್ದಾರೆ. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ನಾನು ಕೂಡ ಆಗಲೇ ಹೇಳಿದ್ದೇನೆ. As far as possible, POCSO Act (Protection of Children from Sexual Offences Act) ದಲ್ಲಿ ಏನು ಮಾಡಿದ್ದೇವೆ. ಹಾಗೆಯೇ ಹೆಣ್ಣು ಮಕ್ಕಳು ಏನಾದರೂ victim ಆದವರನ್ನು lady Advocates ಕಡೆ, lady Magistrates ಏನಾದರೂ ಪ್ರಯತ್ನ ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ನೋಡುತ್ತೇವೆ. As a Government we will think over. Special Courts ಏನಾದರೂ ಇಂತಹ ಪ್ರಕರಣಗಳಿಗೆ ಮುಂದೆ ಏನು ಮಾಡಬೇಕೆನ್ನುವುದು ಕೂಡ ಯೋಚನೆ ಮಾಡುತ್ತದೆ ಎಂದು ಹೇಳಿದ್ದೇವೆ. With this I will close my statement.

**ಉಪ ಸಭಾಪತಿಯವರು:-** ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ಶಾಸನ ರಚನೆ

## ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ

## ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕ, 2021

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಗುಜರಾತ್ ರಾಜ್ಯದಲ್ಲಿ ಒಂದು unauthorised temple issue ನಲ್ಲಿ ಸುಪ್ರಿಂ ಕೋರ್ಟ್ ಮುಂದೆ ಖಟ್ಲೆ ಹೋದಾಗ ಸುಪ್ರಿಂ ಕೋರ್ಟ್ ಪ್ರಶ್ನೆ ಎತ್ತಿ ಬೇರೆ ರಾಜ್ಯಗಳಲ್ಲಿ ಪರಿಸ್ಥಿತಿಗಳು ಏನು ಎಂದು monitor ಮಾಡುವುದಕ್ಕೆ ಆರಂಭ ಮಾಡಿ, 2009 ರವರೆಗೆ ಏನು construct ಆದಂತಹ religious structures ಇದೆಯೋ, ಅದನ್ನು exempt ಮಾಡಿ, 2009ರ ನಂತರ ಆಗಿರುವಂತಹ unauthorised construction ಗೆ somebody has to monitor and take action ಒಂದು ನಿರ್ದೇಶನವಾಯಿತು. ಹೈಕೋರ್ಟ್‌ಗೆ ಇದನ್ನು ಕಟ್ಟುನಿಟ್ಟಾಗಿ ಫಾಲೋ ಮಾಡಬೇಕೆಂದು ಹೇಳಿರುವುದರಿಂದ, ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ನಿರ್ದೇಶನ ಕೊಡುವುದಕ್ಕೆ ಪ್ರಾರಂಭ ಮಾಡಿದರು. ನಮ್ಮ ಅಧಿಕಾರಿಗಳು ಏನು ಮಾಡಿದ್ದಾರೆಯೆಂದರೆ, under the apprehension ಇಂತಹ ಒಂದು decision ಇದ್ದರೂ ನಾವು ಏನು ತೆಗೆದುಕೊಳ್ಳಲಿಲ್ಲ ಅಂದುಕೊಂಡು public premises, public places ನಲ್ಲಿ religious structure ಅನ್ನು ಏಕಾಏಕಿ demolition ಮಾಡುವುದು. ಮತ್ತೊಂದು ಮಗದೊಂದು ಮಾಡಿದರು. ಕೆಲವು ಸಲ ಸರ್ಕಾರದ ವತಿಯಿಂದಲೂ ಮಾಡಿದ್ದೇವೆ. ಆದರೆ, ನಾವು ಅವರಿಗೆ alternate land ಕೊಟ್ಟು, convince ಮಾಡಿ, ಮಾಡಿದ್ದೇವೆ. ಕೆಲವು stray ಪ್ರಕರಣಗಳಲ್ಲಿ ಇದು ಏಕಾಏಕಿಯಾಗಿರುವುದರಿಂದ, ಸರ್ಕಾರ ಇದನ್ನು ಗಮನಿಸಿ, ಇದನ್ನು protect ಮಾಡಬೇಕು. ಮತ್ತೆ ಮುಂದೆ ಏನು ಮಾಡಬೇಕೆನ್ನುವ ಬಗ್ಗೆ ತೀರ್ಮಾನವಾಗುವವರೆಗೂ ಒಂದು protection ಇರಲಿ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇವೆ. We certainly know that a case is pending before the Supreme Court. ಸುಪ್ರಿಂ ಕೋರ್ಟ್ ಅಂತಿಮವಾಗಿ ಏನು ಹೇಳುತ್ತದೆ ಎಂದು ನಾವು ಕಾಯುತ್ತಿದ್ದೇವೆ. As far as this Act is concerned, we are not going to regularise anything. I am very specific. ನಾವು ಏನು regularise ಮಾಡುವುದು. ಮತ್ತೊಂದು ಮಗದೊಂದನ್ನು ನಾವು ಕಾನೂನಿನಲ್ಲಿ ತರುತ್ತಿಲ್ಲ. Protection for all religious structures ತಕ್ಷಣ ಕೊಡಬೇಕು for the time being. Otherwise, ಅಧಿಕಾರಿಗಳ ಮೇಲೆ ಕಂಟ್ರೋಲ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ನಾಳೆ ದಿವಸ ನ್ಯಾಯಾಲಯದ ಮುಂದೆ ನಿಂತುಕೊಂಡು defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆ ನೀವು demolish ಮಾಡಲಿಲ್ಲ. ಅದು ಮಾಡಲಿಲ್ಲ. ಇದು ಮಾಡಲಿಲ್ಲ ಎನ್ನುವ ಉದ್ದೇಶಕ್ಕೆ ಎಲ್ಲಾ religious structures, whichever are on public premises, ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ ಸ್ಥಳಗಳಲ್ಲಿ ಇರುವುದಕ್ಕೆ ಬರುತ್ತದೆ. ಅವರವರ ಸ್ವಂತ ಸ್ಥಳದಲ್ಲಿರುವ ಬಗ್ಗೆ ಪ್ರಶ್ನೆ ಬರುವುದಿಲ್ಲ. ಪಬ್ಲಿಕ್‌ನಲ್ಲಿ ಇರುವುದಕ್ಕೆ protection ಕೊಡಬೇಕು. ನಂತರ ನಾವು ಕುಳಿತುಕೊಂಡು case to case review ಮಾಡುವುದಕ್ಕೆ ಕಾನೂನಿನಲ್ಲಿ, ನಿಯಮದಲ್ಲಿ, ನ್ಯಾಯಾಲಯದ ತೀರ್ಮಾನವನ್ನು await ಮಾಡಿ, ತೀರ್ಮಾನ ತೆಗೆದುಕೊಳ್ಳೋಣ ಎಂದು ಈ ವಿಧೇಯಕವನ್ನು ತಂದಿದ್ದೇನೆ. This is very important. ಇಲ್ಲದಿದ್ದರೆ ಇದು ಅಲ್ಲೋಲ-ಕಲ್ಲೋಲ ಆಗಿ ಬಿಡುತ್ತದೆ. ಎಲ್ಲೋ ಹೋಗುವುದು, ಯಾವುದೋ ದೇವಸ್ಥಾನ ಒಡೆಯುವುದು, ಯಾವುದೋ ಮಸೀದಿ ಒಡೆಯುವುದು, ಯಾವುದೋ ಚರ್ಚ್ ಒಡೆಯುವುದು, ಏನಾದರೂ ದೇವಸ್ಥಾನ ಹೊಡೆಸಿದರೆ ಕಾಂಗ್ರೆಸ್‌ನವರು ಹೊಡೆಸಿದರು ಎಂದು ಹೇಳುವುದು. ಮಸೀದಿ ಹೊಡೆಸಿದರೆ ಬಿ.ಜೆ.ಪಿ., ಯವರು ಹೊಡೆಸಿದರು ಎಂದು ಹೇಳುವುದು. ಈಗ ಸದ್ಯಕ್ಕೆ ಈ ಹಗರಣ ಬೇಡ. ಈಗ ಇದು ಶಾಂತ ಸ್ಥಿತಿಯಲ್ಲಿ ಇರಲಿ ಎಂದು ಈ ಕಾಯ್ದೆಯನ್ನು ತಂದಿದ್ದೇವೆ. ಈ ವಿಧೇಯಕವನ್ನು ಒಳ್ಳೆಯ ಉದ್ದೇಶದಿಂದ ತಂದಿದ್ದೇವೆ. ದಯಮಾಡಿ ಎಲ್ಲರೂ ಸಹಕಾರ ಕೊಟ್ಟು ಇದನ್ನು ಪಾಸ್ ಮಾಡಿಕೊಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 1992ರಲ್ಲಿ ಸುಪ್ರಿಂ ಕೋರ್ಟ್‌ನಿಂದ protection of religious places ಎಂದು ಒಂದು ಜಡ್ಜ್‌ಮೆಂಟ್ ಬಂದಿತ್ತು. ಮಾನ್ಯ ಸಚಿವರು ಅದಕ್ಕೂ-ಇದಕ್ಕೂ ಏನು ವ್ಯತ್ಯಾಸ ಎಂದು ಹೇಳಿದರೆ ಬಹಳ ಉತ್ತಮ ಎಂದು ನನಗನಿಸುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ,1992 ಆದಮೇಲೆ 2009 ವರೆಗೆ ಇರುವುದಕ್ಕೆ ಮಾತ್ರ proetect ಮಾಡುತ್ತದೆ. 2009 ಆದಮೇಲೆ ಬಂದಿರುವುದನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

indiscriminately take action ಸುಪ್ರಿಂ ಕೋರ್ಟ್ ಹೇಳಿರುವುದರಿಂದ, 2009ರಲ್ಲಿ ಇನ್ನೊಂದು ತೀರ್ಮಾನ ಕೊಟ್ಟು, ಅಲ್ಲಿಯವರೆಗೆ ಏನು constructions ಆಗಿವೆಯೇ, ಅವುಗಳಿಗೆ protection ದೊರೆಯಿತು. ಆದಾದ ನಂತರ indiscriminately take action ಎಂದು ಹೇಳಿದರು. ಆದರೆ, ನಾವು ಎಲ್ಲೋ ಒಂದು ಕಡೆ ನಿದ್ದೆ ಮಾಡಿಬಿಟ್ಟೆವು. ಆಗ ನಾವ್ಯಾರು ಎಚ್ಚರ ಆಗಲಿಲ್ಲ. ಈಗ ಹೊಡೆಯುವುದು ಏನು ಶುರುವಾಗಿ ಬಿಟ್ಟಿದೆ. ಆದರೆ, ನಮಗೆ ಅನುಕೂಲವೇನೆಂದರೆ, case is still pending before the Supreme Court. ಅದು ಏನಾಗುತ್ತದೆ ಎನ್ನುವುದನ್ನು ನೋಡೋಣ ಎಂದು ಅಂದುಕೊಂಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, the irony of the law, ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರೇ, ಬಾಬ್ರಿ ಮಸೀದಿಯನ್ನು ಪಬ್ಲಿಕ್‌ನವರು ಕೆಡವಿದರು. ಆಗ ಸುಪ್ರಿಂ ಕೋರ್ಟ್ ಈ ಕಾನೂನನ್ನು ತಂದಿತು. ಇಲ್ಲಿ ಸರ್ಕಾರದ ಅಧಿಕಾರಿಗಳು ಕೆಡವಿದಾಗಲೂ ಕೂಡ ಇದಕ್ಕೆ stay ಬರುತ್ತಿದೆ ಎಂದರೆ, ಈ ಕಾನೂನು ಏನೆಂಬುದನ್ನು interpret ಮಾಡಿ ಹೇಳಬೇಕಾಗುತ್ತದೆ. ಏಕೆಂದರೆ, ಮಾನ್ಯ ಸಚಿವರು ಹೇಳಿದ ಹಾಗೆ 2008-09 ರಲ್ಲಿ High Courts had directed the Chief Secretaries to take action against the illegal structures. ಒಂದು ಕಡೆ ಪಬ್ಲಿಕ್‌ನವರು ಬೀಳಿಸಿದಾಗ it is legal, ಇನ್ನೊಂದು ಕಡೆ ಕಾನೂನುಬದ್ಧವಾಗಿ ಬೀಳಿಸಿದಾಗ ಅಕ್ರಮವೇ ಸಕ್ರಮ, ಸಕ್ರಮವೇ ಅಕ್ರಮ ಎನ್ನುವ ರೀತಿಯಲ್ಲಿ ನಡೆದಿರುವಂತಹದ್ದಾಗಿದೆ. ಮಾನ್ಯ ಸಚಿವರು ಅಹಮದ್‌ಬಾದ್‌ನಲ್ಲಿ ನಡೆದಿರುವಂತಹ ಘಟನೆಯನ್ನು ಉದಾಹರಣೆಯಾಗಿ ಹೇಳಿದ್ದಾರೆ. ಆಗ 80 ಪೂಜಾ ಮಂದಿರಗಳನ್ನು ಕೆಡವಿದರು. ಅಲ್ಲಿ ದೇವಸ್ಥಾನ, ಮಸೀದಿ ಎಲ್ಲಾ ಇದೆ. ಇದು It's a menace. ಪಬ್ಲಿಕ್ ಫುಟ್‌ಪಾತ್ ಮೇಲೆ ಎಲ್ಲಾ ಕಡೆ ಇರುತ್ತದೆ. ಅದನ್ನು regularise ಮಾಡುವುದಕ್ಕೆ ಹೋದರೆ there will be lot of haphazard development of the city ಎನ್ನುವುದು ನನ್ನ ಭಾವನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. We have not proposed which can enable them to regularise or ask for regularising. ತಕ್ಷಣಕ್ಕೆ protect ಮಾಡಬೇಕೆನ್ನುವುದು ಈ ವಿಧೇಯಕದ ಪೂರ್ಣ ಸಾರಾಂಶವಾಗಿದೆ. ಇದನ್ನು ಬೇರೆ ರೀತಿಯಲ್ಲಿ regularise ಮಾಡುತ್ತಾರೆಯೇ ಎಂದು ಈವರೆಗೆ ಚರ್ಚೆಯಾಯಿತು. ಖಂಡಿತ ಇಲ್ಲ. ನಾವು ಅದಕ್ಕೆ ಸರಿಯಾಗಿ 'protection' ಎಂಬ ಪದವನ್ನು ಬಳಸಿದ್ದೇವೆ. We are simply protecting the religious institutions till further action, further decision, ಅದು ಏನು ಎಂದು ಹೇಳುವುದಕ್ಕೆ ಆಗುವುದಿಲ್ಲ. It will be till the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

decisions are taken. ಹಾಗಾಗಿ ಸುಮ್ಮನೆ ಸಮಾಜದಲ್ಲಿ ಏನಾದರೂ ಏರು-ಪೇರು ಆಗುವ ಬದಲು ನಾವು ಎಲ್ಲೋ ಒಂದು ಕಡೆ we have protected ಎಂದು ಹೇಳಬೇಕಾಗಿದೆ. ಅಲ್ಲಿ ಅಧಿಕಾರಿಗಳಿಗೆ ಏನಾಗಿದೆ ಎಂದರೆ with good intention ಏಕೆ ಹೊಡೆದರು ಎಂದರೆ, ಕೋರ್ಟ್ ಆರ್ಡರ್ ಇದೆ ಅದಕ್ಕೆ ಹೊಡೆದರು ಎನ್ನುತಾರೆ. ಆಮೇಲೆ ಯಾರೋ ಬಂದು ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿತ್ತಾ ಎಂದು ಕೇಳುತ್ತಾರೆ. ಇದಕ್ಕೆ ಸ್ವಲ್ಪ ಕಷ್ಟವಾಗಿದೆ frankly speaking. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, with good intention under the Court's direction to the Chief Secretary ಎಂದಾಗ ನಾವು ಏನು ಮಾತನಾಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, whether they by emotions or by law?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, we will go by law. Till we enact law, till we ...

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, law and the Constitution are supreme in this country.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, yes. Certainly I appreciate. Till we come to that level, till we conclude, we are simply protecting. After that, we will take some other decision.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರುವುದಕ್ಕೆ ಬಹುತರವಾಗಿ ಈ ದೇಶದ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಪ್ರಕಾರ ಈ ರಾಜ್ಯದ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ. ಈ ಕಾಯ್ದೆ ಇರುವುದರಿಂದ, ಅವರಿಗೆ time being ಸ್ವಲ್ಪ protection ಆಗುತ್ತದೆ ಎನ್ನುವಂತಹ ಭಾವನೆ ಇದೆ. ಮಾನ್ಯ ಸಚಿವರು ಇದು time being ಎಂದು ಹೇಳಿದ್ದಾರೆ. It's a temporary phenomena. ನಂತರ ಅಧಿಕಾರಿಗಳಿಗೆ ಸುಪ್ರಿಂ ಕೋರ್ಟ್ ನಿರ್ಣಯ ಏಕೆ ಕಾರ್ಯಗತಗೊಳಿಸಿಲ್ಲ ಎಂದು ಕೇಳಿದಾಗ ಇಲ್ಲಿ ಒಂದು ಕಾಯ್ದೆ ಇದೆ, as a conflict ಎಂದು ಹೇಳಿ, ಅವರಿಗೆ ಸಹಾಯ ಆಗಲಿ ಎನ್ನುವುದು ಒಂದು ಉದ್ದೇಶ. ಎರಡನೆಯದಾಗಿ, ತಾವು ಟೀಕೆ-ಟಿಪ್ಪಣಿಗಳನ್ನು ನಂಜನಗೂಡಿನಲ್ಲಿ demolish ಆಗಿದೆಯಲ್ಲವೇ, ಅದು ಬಹುತರವಾಗಿ ಎಲ್ಲಾ ಹಿಂದೂ ಪರ ಸಂಘಟನೆಗಳು ತಮ್ಮ ಮೇಲೆ ಹಿಗ್ಗಾಮುಗ್ಗಾ ಏನು ಬೇಕು ಎಲ್ಲಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ರಾಜ್ಯದ ಉದ್ದಗಲ್ಲಕ್ಕೂ ಹೋರಾಟಗಳು ನಡೆದವು. ನಂತರ ಅದಕ್ಕೆ to save face ಮುಖ ಉಳಿಸಿಕೊಳ್ಳುವುದಕ್ಕೆ ಈ ಕಾನೂನನ್ನು ತಂದಿದ್ದಾರೆ ಎನ್ನುವುದು ನನ್ನ ಭಾವನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಮ್ಮ ಮುಖ ಚೆನ್ನಾಗಿ ಉಳಿದಿದೆ. ದೇವಸ್ಥಾನ ಮತ್ತು religious institutions structures ಉಳಿಸುವುದಕ್ಕೆ ಈ ವಿಧೇಯಕವನ್ನು ತಂದಿದ್ದೇವೆ. ನಾವು ನಮ್ಮ ಮುಖವನ್ನು ನೋಡಿಕೊಳ್ಳಬೇಕಾಗಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹಾಗೆಯೇ ಹೇಳಿದ್ದು. ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರ, ಬೌದ್ಧದ್ವಾರ, ಮಜರು ಇರಬಹುದು. ಈ ಎಲ್ಲಾ religious institutions ಬಗ್ಗೆ ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಆಗಲೂ ಏನಾದರೂ ಚಿಂತನೆ ಮಾಡಬಹುದಾಗಿತ್ತಲ್ಲವೇ? ಇವರೇ ಮಂದಿರವನ್ನು ಕೆಡವಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ನವರೇ, ನಿಮ್ಮಷ್ಟು ನೇರವಾಗಿ ಕೇಳುವವರು ಇಲ್ಲ. I appreciate. ನಾನು ಒಪ್ಪಿಕೊಂಡು ಬಿಟ್ಟಿದ್ದೇನೆ. ತಕ್ಷಣಕ್ಕೆ ಈ measure ಅನಿವಾರ್ಯವಾಗಿದೆ. ಅದಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದೇವೆ. Otherwise, nobody will be able to answer.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದೊಡ್ಡ ಪ್ರಮಾಣದಲ್ಲಿ ಟೀಕೆ ಟಿಪ್ಪಣಿಗಳು, ಸತ್ಯಾಗ್ರಹ, ಹೋರಾಟಗಳು ನಡೆದವು.

(ಮುಂದು)

**(1022) 1:20 ಎಸ್‌ಪಿಆರ್-ಎಂಡಿ 24/09/2021**

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸಹಜವಾಗಿಯೇ ದೊಡ್ಡ ಪ್ರಮಾಣದಲ್ಲಿ ಹೋರಾಟಗಳಾದವು. ಜನರ ಭಾವನೆಗಳಿಗೆ ಧಕ್ಕೆಯುಂಟಾದಾಗ ಈ ರೀತಿಯ ಹೋರಾಟಗಳಾಗುವುದು ಸಹಜ. ಸರ್ಕಾರವು ತನ್ನ ಮುಖವನ್ನೂ ಸಹ ಉಳಿಸಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಹೇಳುತ್ತೇನೆ. ಒಂದು ವೇಳೆ ನಾವು ನಮ್ಮ ಮುಖವನ್ನು ಉಳಿಸಿಕೊಳ್ಳಬೇಕಾದರೆ, ದೇವಸ್ಥಾನಗಳಿಗೆ ನೀಡುವ ದಾನ-ದೇಣಿಗೆಗಳನ್ನು ನಾವು ಸ್ಥಗಿತಗೊಳಿಸುತ್ತಿದ್ದೇವು. If at all if you speak like that, I speak like this. ನಾನು ಎಲ್ಲಾ ಧಾರ್ಮಿಕ ಕಟ್ಟಡಗಳ ಸಂರಕ್ಷಣೆ ಮಾಡುವ ಉದ್ದೇಶದಿಂದ ಪ್ರಸ್ತುತ ವಿಧೇಯಕವನ್ನು ಮಂಡಿಸಿದ್ದೇವೆ. ಶ್ರೀ ಎಸ್. ಆರ್.ಪಾಟೀಲ್‌ನವರೇ ನಮ್ಮೊಂದಿಗೆ ಸಹಕರಿಸಿ. ನಾನು ನಮ್ಮ ಮುಖವನ್ನೇ ಉಳಿಸಿಕೊಳ್ಳಬೇಕೆಂದರೆ, ನಾವು ಮಂಡಿಸಿರುವ . . .

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಚಿವರು ಎಲ್ಲವನ್ನೂ ಪರ ವಹಿಸಿಕೊಳ್ಳಲು ಹೋಗಬಾರದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನೂರಾರು ವರ್ಷಗಳಿಂದ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ನಮ್ಮ ಆತ್ಮಕ್ಕೆ ಉತ್ತರವನ್ನು ಹೇಳಬೇಕು. ನಾನು ಸದನದಲ್ಲಿ ಮಾತನಾಡಿ ಹೋದ ನಂತರ, ಆ ರಾತ್ರಿಯಲ್ಲಿ 'ನಾನು ಮಾತನಾಡಿರುವುದು ಸರಿಯೋ ಅಥವಾ ತಪ್ಪೋ' ಎನ್ನುವ ಬಗ್ಗೆ ನಾನು ವಿಚಾರ ಮಾಡುತ್ತೇನೆ. You have to defend the Government. But don't defend the Government against your conscious.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ, ನೀವು ಕುಳಿತುಕೊಳ್ಳಿ. ನೂರಾರು ವರ್ಷಗಳಿಂದ ಅಲ್ಲೊಂದು ದೇವಸ್ಥಾನವಿದ್ದು, ಅದನ್ನು ಪೂಜೆ ಮಾಡಿಕೊಂಡು ಬಂದಿರುತ್ತಾರೆ. ತಿಳಿದೋ ಅಥವಾ ತಿಳಿಯದೋ ದೇವಸ್ಥಾನದ ನಿರ್ಮಾಣವಾಗಿರುತ್ತದೆ. ನಂತರದಲ್ಲಿ ರಸ್ತೆ ಅಗಲೀಕರಣವಾಗಿರುತ್ತದೆ. ODP (Outline Development Plan) and CDP (Comprehensive Development Plan) ಗಳನ್ನು ಮಾಡಲಾಗಿರುತ್ತದೆ. Many of them may come in the public premises now. ನಮಗೆ *Karnataka Public Premises* (*Eviction of Unauthorised Occupants*) *Act* ಇದೆ. ಈ ವಿಚಾರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವೂ ಸಹ ಸರ್ಕಾರಕ್ಕೆ ಮಾರ್ಗಸೂಚಿಗಳನ್ನು ನೀಡಿದೆ. ಇವುಗಳೆಲ್ಲರ ಮಧ್ಯೆ ರಾಜ್ಯದಲ್ಲಿ ವ್ಯಾಪಕವಾಗಿ ಅಶಾಂತಿ ಸೃಷ್ಟಿಯಾಗಬಾರದು ಎಂಬ ಕಾರಣಕ್ಕಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ. ನಂತರದಲ್ಲಿ ಕುಳಿತುಕೊಂಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿ ಪ್ರಕರಣವಾರು ಚರ್ಚೆ ಮಾಡಿ, ಅವುಗಳಲ್ಲಿ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ ಎನ್ನುವ ಬಗ್ಗೆ ವಿಚಾರ ಮಾಡೋಣ. ಈ ಮಧ್ಯೆ ಸ್ವಲ್ಪ ಉಸಿರಾಟದ ಸಮಯ ಸಿಗುತ್ತದೆನ್ನುವ ಕಾರಣದಿಂದ ಸರ್ಕಾರವು ಯೋಚಿಸಿ, ಈ ವಿಧೇಯಕವನ್ನು ಮಂಡಿಸಿದೆ. ಅದನ್ನು ಬಿಟ್ಟರೆ, ಯಾರದೋ ಒತ್ತಡಕ್ಕೆ ಮಣಿದು, ಯಾರಿಗೋ ಹೆದರಿಕೊಂಡು ಅಥವಾ ಮುಖವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಖಂಡಿತವಾಗಿಯೂ ಸಹ ನಮಗೆ ಆ ಸ್ಥಿತಿ ಬಂದಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ವಿರೋಧ ಪಕ್ಷದ ನಾಯಕರು ನಿಸ್ಸಂಕೋಚವಾಗಿ ಮಾತನಾಡುತ್ತಿರುವುದು... ಎಲ್ಲಾ ಧಾರ್ಮಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕಾದರೆ, ಈಗ ಅಶಾಂತಿಯುಂಟಾಗಬಾರದು ಎನ್ನುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಇದರಲ್ಲಿ ಯಾವುದೇ ರೀತಿಯಾದ ಎರಡು ಮಾತುಗಳಿಲ್ಲ. Let us not go for that now. ನಂತರದಲ್ಲಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಚಾರದಲ್ಲಿ ಏನೇನು ಮಾಡಬಹುದು, ಯಾವುದನ್ನು ಒಡೆಯಬಹುದು ಅಥವಾ ಬಿಡಬಹುದು, ಹೆದ್ದಾರಿ, ಉದ್ಯಾನವನ ಅಥವಾ ಕಾಡಿನಲ್ಲಿರುವ ದೇವಸ್ಥಾನಗಳನ್ನು ಉಳಿಸಬಹುದೆ ಅಥವಾ ಬಿಡಬಹುದೇ ಎನ್ನುವುದರ ಬಗ್ಗೆ ಚರ್ಚೆಗಳನ್ನು ಮಾಡೋಣ. ಈ ವಿಧೇಯಕದ ಜಾರಿಯಿಂದಾಗಿ ಎಲ್ಲಾ ಧಾರ್ಮಿಕ ಕಟ್ಟಡಗಳನ್ನು ಉಳಿಸಬಹುದು ಎಂದು ಹೇಳುವುದಕ್ಕಾಗುವುದಿಲ್ಲ. ಸದ್ಯದ ಮಟ್ಟಿಗೆ ಅವುಗಳನ್ನು ಸಂರಕ್ಷಿಸಬಹುದು. ನಂತರದಲ್ಲಿ ಪ್ರಕರಣವಾರು ತೀರ್ಮಾನಗಳನ್ನು ತೆಗೆದುಕೊಳ್ಳಬಹುದು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಮುಚ್ಚುಮರೆ ಮಾಡುವ ಅವಶ್ಯಕತೆ ಇಲ್ಲ. ಎಲ್ಲರಿಗೂ ಒಳ್ಳೆಯದಾಗಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ. ದೇವಸ್ಥಾನಗಳ ಕೆಡುವಿಕೆಯನ್ನು ವಿರೋಧ ಪಕ್ಷದವರು ಒಪ್ಪಿಕೊಳ್ಳುತ್ತಾರೆಯೇ? ಈ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದಕ್ಕಾಗುತ್ತದೆಯೇ? ಯಾವ ಪಕ್ಷದವರಿಗೂ ಸಹ ಈ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. It's not fair. ದೇವಸ್ಥಾನಗಳಲ್ಲಿ ಪೂಜೆ, ಪುನಸ್ಕಾರ ಮಾಡಿಕೊಂಡು ಹೋಗುವ ಸಂಪ್ರದಾಯವು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ತಿಳಿಯದೇ ಸಾರ್ವಜನಿಕ ಸ್ಥಳಗಳಲ್ಲಿ ದೇವಸ್ಥಾನಗಳನ್ನು ನಿರ್ಮಿಸಿದ್ದಾರೆ. ಗ್ರಾಮೀಣ ಭಾಗಗಳಲ್ಲಿ 40 meter is notified from the National Highway Centre. ಇಂತಹ ಪ್ರದೇಶಗಳಲ್ಲಿ ಒಂದು ದೇವಸ್ಥಾನವನ್ನು ಒಡೆದರೆ, ಮುಂದಿನ ದಿನಗಳಲ್ಲಿ ಇಂತಹ ಹಲವಾರು ದೇವಸ್ಥಾನಗಳನ್ನು ಒಡೆಯಬೇಕಾಗುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಂದ ಮುಕ್ಕಾಲು ಮನೆಗಳನ್ನು ಒಡೆಯಬೇಕಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸುಮಾರು 1980 ಮತ್ತು 1990 ನೇ ಇಸವಿಗಳಲ್ಲಿ ಅಧಿಸೂಚನೆಗಳನ್ನು ಹೊರಡಿಸಿ, 26 ಮೀಟರ್‌ಗಳಷ್ಟು ಇದ್ದದ್ದನ್ನು 36-40 ಮೀಟರ್‌ಗಳಿಗೆ ಹೆಚ್ಚಿಸಲಾಯಿತು ಎಂದು ನಾವುಗಳು ಸದನದಲ್ಲಿ ಕುಳಿತುಕೊಂಡು ಮಾತನಾಡುತ್ತೇವೆ. ಅಲ್ಲಿ ದೇವಸ್ಥಾನ ನಿರ್ಮಿಸಿದವರಿಗೆ ತಮ್ಮ ದೇವಸ್ಥಾನವು ಅಧಿಸೂಚಿತ ಪ್ರದೇಶದೊಳಗೆ ಬರುತ್ತದೆನ್ನುವ ಬಗ್ಗೆ ಏನಾದರೂ ತಿಳಿದಿದೆಯೇ? ಇಂತಹ ಹಲವಾರು ಪ್ರಕರಣಗಳಾಗಿವೆ. ದಯಮಾಡಿ ಇವತ್ತಿನ ದಿವಸ ವಿರೋಧ ಪಕ್ಷದವರು ಸ್ವಲ್ಪಮಟ್ಟಿಗೆ ಉದಾರವಾಗಿದ್ದು, ಈ ವಿಧೇಯಕವನ್ನು ಅನುಮೋದಿಸಲಿ. ಇವತ್ತಿನ ದಿವಸ ಲೋಕಸಭೆಯ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರು ವಿಧಾನಸೌಧಕ್ಕೆ ಬರುತ್ತಿದ್ದು, ದಯಮಾಡಿ ಎಲ್ಲಾ ಸದಸ್ಯರುಗಳು ಜಂಟಿ ಅಧಿವೇಶನದಲ್ಲಿ ಪಾಲ್ಗೊಳ್ಳುವಂತೆ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಮಂಡಿಸಿರುವ ವಿಧೇಯಕದ ಬಗ್ಗೆ ಸರ್ಕಾರವು ಸ್ಪಷ್ಟವಾದ ವಿಶ್ಲೇಷಣೆಯನ್ನು ನೀಡಿದೆ, very good. Land use means foot path, ಉದ್ಯಾನವನ ಇತ್ಯಾದಿಗಳ ಕಡೆ ಇರುವ ಭೂಮಿಯನ್ನು ಬಳಕೆ ಮಾಡಿದ್ದರೆ ಅದು ಕೇವಲ ತಾತ್ಕಾಲಿಕವಾಗಿರುತ್ತದೆ. ವಿಧೇಯಕ ಕಲಂ (3) ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ. *"Provided that no protection shall be done, if any case related to their removal is pending in any court of law and in such other circumstances as may be prescribed."* ಯಾವುದೇ ನ್ಯಾಯಾಲಯವು ಆದೇಶವನ್ನು ನೀಡಿದರೆ, ದೇವಸ್ಥಾನಗಳನ್ನು ಕೆಡುವುಲಾಗುತ್ತದೆಯೇ? ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳಿಗೆ ಹಾಗೂ ಇದಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಪ್ರಸ್ತುತ ವಿಧೇಯಕವನ್ನು ಜಾರಿಗೆ ತರಲು ಪೂರಕವಾಗುವಂತೆ ಹಾಲಿ ಇರುವ ಧಾರ್ಮಿಕ ಕಟ್ಟಡಗಳಿಗೆ ಜಿ.ಐ.ಎಸ್. ಮತ್ತು ಜಿ.ಪಿ.ಎಸ್. ವ್ಯವಸ್ಥೆಯನ್ನು ಅಳವಡಿಸಿ. ಈ ವಿಧೇಯಕವನ್ನು ಜಾರಿಗೊಳಿಸಿದಾಗ, ಇದ್ದಕ್ಕಿದ್ದ ಹಾಗೆ ನಾಳೆಯು ದಿನ ವಿಪರೀತ ಸಂಖ್ಯೆಯಲ್ಲಿ ದೇವಸ್ಥಾನಗಳು ಹುಟ್ಟುಕೊಳ್ಳುತ್ತವೆ. ಈ ವಿಧೇಯಕವನ್ನು retrospective ಜಾರಿಗೊಳಿಸಿದಾಗ, ಯಾವುದೋ ಒಂದು ಕಟ್ಟಡವನ್ನು ಉಳಿಸಿಕೊಳ್ಳುವುದಕ್ಕೆ ಅಥವಾ ಇನ್ಯಾವುದೇ ಜಾಗವನ್ನು ಕಬಳಿಸಿಕೊಳ್ಳಲು this law will come to their rescue. ದಯಮಾಡಿ ಸರ್ಕಾರವು ಈ ವಿಚಾರದಲ್ಲಿ ಒಂದು ನಿರ್ದಿಷ್ಟ ದಿನಾಂಕವನ್ನು ಅಂತಿಮ ದಿನಾಂಕವನ್ನಾಗಿ ನಿಗದಿಪಡಿಸಬೇಕು. ಇದರ ಜೊತೆಗೆ ಬೌದ್ಧಿಕ ಸ್ವಾಧೀನವನ್ನು ಜಿ.ಐ.ಎಸ್. ಮತ್ತು ಜಿ.ಪಿ.ಎಸ್. ತಂತ್ರಾಂಶಗಳ ಮುಖೇನ ಗುರ್ತಿಸಬೇಕು. ಅಲ್ಲಿರುವ ಭೂಮಿಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸರ್ಕಾರವು ಕ್ರಮಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬೇಕು. ಗುಜರಾತ್ ರಾಜ್ಯದಲ್ಲಾದ ಪ್ರಕರಣದಿಂದಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬಂದಿದ್ದು, ಅಲ್ಲಿಂದ ದೇಶದಲ್ಲೆಲ್ಲಾ ವ್ಯಾಪಿಸಿರುತ್ತದೆ. ಪ್ರಸ್ತುತ ಪ್ರಕರಣವು ವಿಚಾರಣೆಯಲ್ಲಿರುತ್ತದೆ. ಸರ್ಕಾರವು ಈಗ ಯಾವುದೇ ಕ್ರಮಗಳನ್ನು ತೆಗೆದುಕೊಂಡರೆ, ಅದು, it is subject to outcome of that case. ಪ್ರಸ್ತುತ ವಿಧೇಯಕವನ್ನು ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಮಂಡಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಲಿ ಇರುವ ದೇವಸ್ಥಾನಗಳ ಸಂಖ್ಯೆ ಜಾಸ್ತಿಯಾಗುವ ಸಾಧ್ಯತೆಗಳಿರುತ್ತವೆ. ಇದನ್ನು ನಿಯಂತ್ರಿಸಲು ಸರ್ಕಾರವು ದಯಮಾಡಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿವೇಶನ ಸಮಾಪನಗೊಳ್ಳುವ ಸಂದರ್ಭದಲ್ಲಿ ಬಹಳ ಮಹತ್ವವಾದ ಪ್ರಸ್ತುತ ವಿಧೇಯಕವನ್ನು ಸರ್ಕಾರವು ಮಂಡಿಸಿದೆ. ಇದು ಬಹಳ ಪವಿತ್ರ ಹಾಗೂ ಚರ್ಚಾರ್ಹದವಾದ ವಿಷಯವಾಗಿದೆ. *'ಸಾರ್ವಜನಿಕ ಸ್ಥಳಗಳಲ್ಲಿ ಕಾನೂನುಬಾಹಿರವಾಗಿ ನಿರ್ಮಿಸಲಾದ ಧಾರ್ಮಿಕ ಕಟ್ಟಡಗಳನ್ನು ಸಂರಕ್ಷಿಸುವುದಕ್ಕಾಗಿ'* ಎಂದು ಈ ವಿಧೇಯಕದಲ್ಲಿ ಸರ್ಕಾರವು ತಿಳಿಸಿದೆ. ಯಾವುದೇ ಒಂದು ನಾಗರೀಕ ಸರ್ಕಾರ ಕಾನೂನುಬಾಹಿರವಾಗಿ ನಿರ್ಮಿಸಿರುವ ಕಟ್ಟಡಗಳ ಸಂರಕ್ಷಣೆಗಾಗಿ ವಿಧೇಯಕವನ್ನು ಮಂಡಿಸಿದೆ ಎಂದರೆ ಏನರ್ಥ. ಎಲ್ಲಾ ಜನಪ್ರತಿನಿಧಿಗಳನ್ನು ಒಳಗೊಂಡ ಸರ್ಕಾರವು ಕಾನೂನುಬಾಹಿರವಾಗಿರುವ ಕಟ್ಟಡಗಳನ್ನು ಅದು ಧಾರ್ಮಿಕ ಅಥವಾ ಇನ್ಯಾವುದೇ ವಿಚಾರಕ್ಕೆ ಸಂಬಂಧಪಟ್ಟಿದ್ದಾಗಿರಬಹುದು, ಅದನ್ನು ಸಂರಕ್ಷಿಸಲು ವಿಧೇಯಕವನ್ನು ಮಂಡಿಸುತ್ತದೆ ಎಂದರೆ, ನಾವುಗಳೆಲ್ಲರೂ ತಲೆತಗ್ಗಿಸಬೇಕು. ಯಾವುದೇ ನ್ಯಾಯಾಲಯದ ಆದೇಶದನ್ವಯ ಯಾವುದಾದರೂ ದೇವಸ್ಥಾನವನ್ನು ಒಡೆಯಬೇಕಾದರೆ, ಅವುಗಳಿಗೆ ಪ್ರಸ್ತುತ ವಿಧೇಯಕವು ಅನ್ವಯಿಸುವುದಿಲ್ಲವೆಂದು ಶ್ರೀ ಪಿ.ಆರ್.ರಮೇಶ್‌ರವರು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದರು. ಆದರೆ ನ್ಯಾಯಾಲಯದ ಆದೇಶದಂತೆ ಒಡೆಯಲೇ ಬೇಕಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ಹಾಲಿ ಆದೇಶದನ್ವಯ ಇಡೀ ರಾಜ್ಯದಲ್ಲಿ ನೂರಾರು ದೇವಸ್ಥಾನಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್‌ರವರುಗಳು ಒಡೆಸಿ ಹಾಕಿದರು. ಅಂದಿನ ದಿನ ಅಧಿಕಾರದಲ್ಲಿದ್ದ ಯಾವುದೇ ಸರ್ಕಾರವು ಈ ಬಗ್ಗೆ ಕಾಳಜಿಯನ್ನು ವಹಿಸಲಿಲ್ಲ. ಆದರೆ, ಇವತ್ತಿನ ದಿವಸ ಸದರಿ ಸರ್ವೋಚ್ಚ ನ್ಯಾಯಾಲಯದ ಆದೇಶಗಳು ಅನ್ವಯಿಸುವುದಿಲ್ಲವೇ? ಹಾಗಾದರೆ ಆ ಅಧಿಕಾರಿಗಳು ಏಕೆ ದೇವಸ್ಥಾನಗಳನ್ನು ಒಡೆಸಿದರು? ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರದೇ, ನೇರವಾಗಿ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ, ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇವಸ್ಥಾನಗಳನ್ನು ಕೆಡವಿ ಹಾಕಿದರೇ? ಸರ್ಕಾರ, ಸ್ಥಳೀಯ ಪ್ರಾಧಿಕಾರಿ ಅಥವಾ ನಿಗಮಗಳ ಸ್ವಾಧೀನದಲ್ಲಿರುವ ಯಾವುದೇ ಜಾಗ ಅಂದರೆ, ರಸ್ತೆ, ಸ್ಥಳ, ಉದ್ಯಾನವನ, ಸಿ.ಎ.ನಿವೇಶನ ಅಥವಾ ಇನ್ನ್ಯಾವುದೇ ಸ್ವತ್ತಿನಲ್ಲಿ ದೇವಸ್ಥಾನಗಳನ್ನು ನಿರ್ಮಿಸಿದ್ದರೆ, ಅವುಗಳನ್ನು ತೆರವುಗೊಳಿಸಬಾರದು. ಉದ್ಯಾನವನವಿರುವ ಸ್ಥಳಗಳಲ್ಲಿ ದೇವಸ್ಥಾನಗಳ ನಿರ್ಮಾಣ ಮಾಡಬಾರದು; ಉದ್ಯಾನವನಗಳ ಬದಲಾವಣೆ ಮಾಡಬಾರದು ಎಂಬ ನಿಯಮಗಳನ್ನು ನಾವೇ ಜಾರಿಗೊಳಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ಸಾಕಷ್ಟು ತೀರ್ಪುಗಳಿವೆ. ಅದರಂತೆ ಸಿ.ಎ. ನಿವೇಶನಗಳಲ್ಲಿ ದೇವಸ್ಥಾನ, ಮಸೀದಿ, ಚರ್ಚ್ ಇತ್ಯಾದಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಬಾರದು. ಈಗಷ್ಟೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುವ ಸಂದರ್ಭದಲ್ಲಿ 'ಹಾಲಿ ಇರುವ ಧಾರ್ಮಿಕ ಕಟ್ಟಡಗಳ ಸಂರಕ್ಷಣೆಗಾಗಿ ಪ್ರಸ್ತುತ ವಿಧೇಯಕವನ್ನು ಮಂಡಿಸಲಾಗಿದೆ' ಎಂಬ ಮಾತನ್ನು ಹೇಳಿದರು. ಇವತ್ತಿನ ದಿವಸ ನಮ್ಮ ದೇವಸ್ಥಾನಗಳು ರಾಜ್ಯದಲ್ಲಿ ಮಾತ್ರವಲ್ಲದೇ ಇಡೀ ಭಾರತ ದೇಶದಲ್ಲಿ ಮೌಢ್ಯವನ್ನು ಬಿಂಬಿಸುವ ಕೇಂದ್ರಗಳಾಗಿವೆ. ಈ ದೇವಸ್ಥಾನಗಳೆಲ್ಲವೂ ಮಾನವ ನಿರ್ಮಿತ ಕಟ್ಟಡಗಳು. ಅದೇ ರೀತಿಯಾಗಿ ಜಾತಿ, ಧರ್ಮ ಇವುಗಳೂ ಸಹ ಮಾನವ ನಿರ್ಮಿತ. ಇವತ್ತಿನ ದಿವಸ ಇಂತಹ ಧಾರ್ಮಿಕ ಕೇಂದ್ರಗಳಿಂದಾಗಿ ನಾವುಗಳೆಲ್ಲರೂ ಪ್ರತ್ಯೇಕವಾಗಿ ಬೇರ್ಪಟ್ಟಿದ್ದೇವೆ; ಒಟ್ಟುಗೂಡಲಿಕ್ಕಾಗುತ್ತಿಲ್ಲ. ಭಾರತೀಯರು ಎಂಬ ಭಾವನೆಯಿಂದ ನಾವುಗಳೆಲ್ಲರೂ ಒಟ್ಟುಗೂಡಲಿಕ್ಕಾಗುತ್ತಿಲ್ಲ. ಇಂತಹ ಧಾರ್ಮಿಕ ಕೇಂದ್ರ ಹಾಗೂ ಎಲ್ಲಾ ಧಾರ್ಮಿಕ ವಿಚಾರಗಳಿಂದ ಯಾವತ್ತಿಗೂ ಸಹ ಸಮಾಜದ ಸ್ವಾಸ್ತ್ಯದ ಅಧಃಪತನವಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸರ್ಕಾರವು ಗೌರವಿಸಬೇಕೆಂದು ನಾನು ವಿನಂತಿಸುತ್ತೇನೆ. ಎಲ್ಲೆಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸರ್ಕಾರಿ ಆಸ್ತಿಗಳಲ್ಲಿ ಕಾನೂನುಬಾಹಿರವಾಗಿ ನಿರ್ಮಿಸಿರುವ ಯಾವುದೇ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಬೇಕೇನ್ನುವುದು ನನ್ನ ಅಭಿಪ್ರಾಯವಾಗಿದೆ. ಒಂದು ವೇಳೆ ಈ ರೀತಿಯ ಕ್ರಮಗಳನ್ನು ತೆಗೆದುಕೊಂಡಿಲ್ಲವೆಂದಾದರೆ ಮುಂದೆ ಯಾವುದೇ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರ ಯೋಜನೆ ಹಾಕಿಕೊಂಡಾಗ, ಮುಂಬರುವ ದಿನದಲ್ಲಿ ಆ ಸ್ಥಳದಲ್ಲಿ ರಸ್ತೆ ನಿರ್ಮಾಣವಾಗುತ್ತದೆ ಎಂದು ಸಾರ್ವಜನಿಕರಿಗೆ ತಿಳಿದಾಗ, ಅಲ್ಲಿ ಯಾವುದೋ ದೇವರ ಉದ್ಭವಮೂರ್ತಿ ಇದ್ದಕ್ಕಿದ್ದ ಹಾಗೆ ಎದ್ದೇಳುತ್ತದೆ. ಅಲ್ಲಿ ಮೆಣಸಿನ ಕಾಯಿ, ಊದುಬತ್ತಿಗಳನ್ನು ಹಚ್ಚಿ ಪೂಜೆಗಳನ್ನು ಮಾಡುತ್ತಾರೆ. ಹೀಗೆ ರಾತ್ರೋರಾತ್ರಿ ಉದ್ಭವಗೊಂಡ ದೇವರುಗಳನ್ನು ಉದ್ಭವೇಶ್ವರ, ಭುವನೇಶ್ವರಿ ಎಂದು ಕರೆಯುತ್ತಾರೆ ಹಾಗೂ ಅಲ್ಲಿ ದೇವಸ್ಥಾನಗಳನ್ನು ನಿರ್ಮಿಸುತ್ತಾರೆ. ಅಂತಹ ಸ್ಥಳಗಳಲ್ಲಿ ಸರ್ಕಾರ ರಸ್ತೆಗಳನ್ನು ನಿರ್ಮಿಸಲು ಆಗುವುದಿಲ್ಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಅಲ್ಲಿಗೆ ಯಾರೂ ಸಹ ಹೋಗುವುದಿಲ್ಲ. ಒಂದು ವೇಳೆ ಅಲ್ಲಿಗೆ ಯಾರಾದರೂ ಹೋದರೆ, ಅಲ್ಲಿ ನಾಲ್ಕು ಜನಗಳು ನಿಂತುಕೊಂಡು, ಅದು ತಮ್ಮ ಮನೆದೇವರು ಎಂದು ಹೇಳುತ್ತಾರೆ.

(ಮುಂದು)

**(1023) 1.30 24-09-2021 ಸಿಎಸ್/ ಎಂಡಿ**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ದಯಮಾಡಿ, ಇದಕ್ಕೆಲ್ಲ ಅವಕಾಶ ಮಾಡಿಕೊಡಬೇಡಿ. ಏಕೆಂದರೆ ಇದೆಲ್ಲ ಮುಂದುವರೆದರೆ ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು ನಾಯಿಕೊಡೆಗಳ ಹಾಗೆ ಉದ್ಭವವಾಗುತ್ತವೆ. ಮಾನ್ಯ ಕಾನೂನು ಸಚಿವರಿಗೆ ತಿಳಿದಿರುವ ಹಾಗೆ ಭಾರತ ದೇಶದಲ್ಲಿ ಇನ್ನೂ ಕೂಡ ಕೆಲವು ದೇವಸ್ಥಾನಗಳಿಗೆ ಕೆಲವರಿಗೆ ಪ್ರವೇಶ ಮಾಡುವುದನ್ನೇ ನಿರ್ಬಂಧಿಸಲಾಗಿದೆ. ಈ ದೇಶದಲ್ಲಿ ಸಮಾನತೆ ಎನ್ನುವುದು ಇಲ್ಲ. ಯಾವುದೇ ದೇವಾಲಯ ಆಗಲೀ ಕೆಲವೇ ವರ್ಗಕ್ಕೆ, ಕೆಲವೇ ಜನರಿಗೆ ಸೀಮಿತ ಆಗಿವೆ. ಬಹಳ ನಿರ್ಬಂಧ ಇದ್ದು ಆ ವರ್ಗಗಳಿಗೆ ದೇವಾಲಯವೇ ಇಲ್ಲ, ಆದರೂ ಸಹ ಅವರು ಇವತ್ತು ಬದುಕುತ್ತಿಲ್ಲವೇ? ನಮ್ಮ ರಾಜ್ಯದಲ್ಲಿಯೇ ಸಹ ಪಂಕ್ತಿ ಭೋಜನ ನಡೆಯುತ್ತದೆ. ಅದನ್ನು ದೊಡ್ಡ ಸ್ವಾಮೀಜಿಗಳು ನಡೆಸುತ್ತಾರೆ. ಆ ಸಹಪಂಕ್ತಿ ಭೋಜನದಲ್ಲಿ ಪ್ರಧಾನ ಮಂತ್ರಿಗಳಾಗಲೀ, ಮುಖ್ಯ ಮಂತ್ರಿಯೇ ಆಗಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಧಾರ್ಮಿಕ ವಿಚಾರದಲ್ಲಿ ಮಡೆಸ್ನಾನ ಎಡೆಸ್ನಾನ ಇಂತಹದಕ್ಕೆಲ್ಲ ಸಾಕಷ್ಟು ನಿರ್ಬಂಧಗಳಿವೆ. ಇದನ್ನೆಲ್ಲ ತಪ್ಪಿಸುವುದಕ್ಕೆ ಕಾನೂನನ್ನು ಜಾರಿಗೆ ತನ್ನಿ. ದೇವಸ್ಥಾನ, ಚರ್ಚ್, ಮಸೀದಿ ಎಲ್ಲಾ ಕಡೆಗಳಲ್ಲಿ ಎಲ್ಲರಿಗೂ ಸಮಾನ ಅವಕಾಶ ಕೊಡಿ, ಎಲ್ಲಾ ಕಡೆಗಳಿಗೆ ಎಲ್ಲರೂ ಹೋಗಬಹುದು, ಎಲ್ಲರೂ ಭಾಗವಹಿಸಬಹುದು ಎನ್ನುವ ಕಾನೂನನ್ನು ಜಾರಿಗೆ ತನ್ನಿ. ನಾನೇನು ಈ ವಿಧೇಯಕವನ್ನು ವಿರೋಧ ಮಾಡುವುದಿಲ್ಲ. ಆದರೆ ಎಲ್ಲಾ ಧರ್ಮಗಳಿಗೂ ಸಹ ಶಹಬ್ಬಾಸ್‌ಗಿರಿಯನ್ನು ಕೊಡುವ ಹಾಗೆ ನಾವೆಲ್ಲ ರಾಜಕಾರಣಿಗಳು ಕೆಲಸ ಮಾಡುತ್ತಿದ್ದೇವೆ. ಇದರಿಂದ ನಮ್ಮ ಭವಿಷ್ಯತ್‌ನಲ್ಲಿ ಯಾವ ಸಮಾಜಕ್ಕೂ ಸಹ ಒಳ್ಳೆಯದಾಗುವುದಿಲ್ಲ. ನಮ್ಮ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಬಹಳ ವಿಸ್ತೃತವಾದ ಚರ್ಚೆ ಈ ಸದನದಲ್ಲಿ ನಡೆಯಬೇಕು. ದಯಮಾಡಿ ಕಾನೂನು ಬಾಹಿರವಾಗಿರುವ ದೇವಾಲಯಗಳು, ಚರ್ಚ್‌ಗಳು, ಮಸೀದಿಗಳ ರಕ್ಷಣೆಗೆ ಸರ್ಕಾರ ಮುಂದಾಗಬಾರದು. ಇದರಿಂದ ಮುಂದೆ ಆಗತಕ್ಕ ಅನಾಹುತಗಳನ್ನು ತಪ್ಪಿಸಬೇಕೆನ್ನುವ ಮಾತನ್ನು ಹೇಳುತ್ತೇನೆ. ಇಂದು ಜಾರಿಗೆ ತರುತ್ತಿರುವ ಈ ವಿಧೇಯಕದ ಮೇಲೆ ಯಾರಾದರೂ ಕೋರ್ಟಿಗೆ ಹೋದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ನಿಲ್ಲುತ್ತದೆಯೋ ಇಲ್ಲವೋ ಎನ್ನುವುದು ಬಹಳ ಪ್ರಶ್ನಾತೀತವಾದುದು. ಇದು ನಮ್ಮ ಸಂವಿಧಾನಕ್ಕೆ ವಿರೋಧವಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಕಾನೂನು ಬಾಹಿರವಾಗಿರುವುದನ್ನು ನಾವು ರಕ್ಷಣೆ ಮಾಡುವುದಾದರೆ ಅದು ಸಂವಿಧಾನಕ್ಕೆ ವಿರೋಧ ಆಗಿದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ದಯಮಾಡಿ ಇಂತಹ ವಿಧೇಯಕಗಳನ್ನು ಜಾರಿಗೆ ತರುವುದಕ್ಕೆ ಮೊದಲು ಸಾಕಷ್ಟು ಆಲೋಚನೆಯನ್ನು ಮಾಡಬೇಕು. ಇಂತಹ ಧಾರ್ಮಿಕ ವಿಚಾರಗಳಲ್ಲಿ ಬದಲಾವಣೆಗಳು ನಮ್ಮ ರಾಜ್ಯದಿಂದಲೇ ಮೊದಲಿಗೆ ಪ್ರಾರಂಭ ಆಗಲಿ. ನಮ್ಮ ರಾಜ್ಯದಲ್ಲಿ ಸಮಾನತೆಯನ್ನು ಕಾಯ್ದುಕೊಂಡು ದೇವಾಲಯ, ಚರ್ಚ್, ಮಸೀದಿ ಯಾವುದಕ್ಕೆ ಆಗಲೀ ಮುಕ್ತ ಪ್ರವೇಶವನ್ನು ಎಲ್ಲರಿಗೂ ಸಿಗುವ ಹಾಗೆ ಮಾಡಬೇಕು. ಇವತ್ತು ಅಧಿಕಾರಿಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳದ ಹಾಗೆ ದೇವಸ್ಥಾನಗಳು ಉದ್ಭವವಾಗುತ್ತಿವೆ. ಹಳ್ಳಿಯಲ್ಲಿ ಒಂದು ರಸ್ತೆಯನ್ನು ಮಾಡುವುದಕ್ಕೆ ಹೋದರೆ ಅಣ್ಣ ಇಲ್ಲಿ ಮಾರಮ್ಮನ ಗುಡಿ ಇದೆ, ಇಲ್ಲಿ ರಸ್ತೆ ಮಾಡುವುದಕ್ಕೆ ಬರಬೇಡಿ ಎಂದು ಹೇಳುತ್ತಾರೆ. ನಾವು ಸಹಮತಗಳ ಆಸೆಗಾಗಿ ಹೋಗಲಿ ಬಿಡಿ ಎಂದು ಸುಮ್ಮನಾಗಿ ಬಿಡುತ್ತೇವೆ. ಆಗ ನಾಳೆ ಚಂದ್ರಮ್ಮನ ಗುಡಿ ಸಹ ಬರುತ್ತದೆ. ಶಿವನ ಗುಡಿ, ಹೀಗೆ ಒಂದೊಂದು ಹಳ್ಳಿಯಲ್ಲಿ ಹತ್ತತ್ತು ದೇವಾಲಯಗಳಿರುತ್ತವೆ. ಒಂದೇ ಊರಿನಲ್ಲಿ ಹತ್ತತ್ತು ಚರ್ಚ್‌ಗಳು, ಮಸೀದಿಗಳು ಇರುತ್ತವೆ. ಏನಿದು?ಧಾರ್ಮಿಕ ವಿಚಾರ ಎಂದರೆ ನಮಗೂ ಸಹ ನಂಬಿಕೆ ಇದೆ. ಭಾವನಾತ್ಮಕತೆ ಇರುತ್ತದೆ, ನನಗೂ ಸಹ ಇದೆ. ಆದರೆ ಕೆಲವು ಮಾನವ ನಿರ್ಮಿತ ಮಾಡಿಕೊಂಡಿರುವ ಕಾನೂನುಗಳು ನಮ್ಮನ್ನು ಸಂಪೂರ್ಣವಾಗಿ ಸರ್ವನಾಶ ಮಾಡುತ್ತಿವೆ. ಅದರ ಬಗ್ಗೆ ನಾವು ಚಿಂತನೆಯನ್ನು ಮಾಡದೇ ಮೌಢ್ಯತೆಯನ್ನು ತುಂಬುತ್ತಿದ್ದೇವೆ. ಸರ್ಕಾರಗಳು ಜನಸಾಮಾನ್ಯರನ್ನು ಮೌಢ್ಯತೆಯ ಕಡೆಗೆ ತಳ್ಳುತ್ತಿವೆ. ಜನಸಾಮಾನ್ಯರನ್ನು ಜಾಗೃತ ಮಾಡುತ್ತಾ ಇಲ್ಲ. ನಿಮ್ಮಲ್ಲಿರುವ ಶಕ್ತಿಯನ್ನು ಪ್ರಯೋಗಿಸಿ, ಸ್ವಂತಿಕೆಯಿಂದ ಬದುಕನ್ನು ನಡೆಸತಕ್ಕ ಜಾಗೃತಿಯನ್ನು ಜನರಲ್ಲಿ ಮೂಡಿಸತಕ್ಕ ವಿಚಾರಗಳು ಸರ್ಕಾರದಲ್ಲಿಲ್ಲ. ಸಚಿವರು ಬೇಸರ ಮಾಡಿಕೊಳ್ಳಬಾರದು, ನಾನು ಈ ವಿಧೇಯಕಕ್ಕೆ ನನ್ನ ಒಪ್ಪಿಗೆಯನ್ನು ಕೊಡುತ್ತೇನೆ. ಆದರೆ ಮುಂದೆ ಒಂದು ದಿವಸ ತಮ್ಮ ಸರ್ಕಾರದಲ್ಲಿಯೇ ಈ ವಿಚಾರದ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕೆಂದು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಗಳೇ, ನನಗೆ ಶ್ರೀ ಮರಿತಿಬ್ಬೇಗೌಡರ ಹಾಗೆ ಮಾತನಾಡುವ ಶಕ್ತಿ ಇಲ್ಲ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ನಮಗೆ ಶಾಂತಿ ಕದಡುವ ಸ್ಥಿತಿ ನಿರ್ಮಾಣ ಆಗಬಾರದು ಎನ್ನುವುದು ನಮ್ಮ ಮೂಲ ಉದ್ದೇಶ. ಈ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೂ Supreme Court decision ಆಗಿಲ್ಲ. Supreme Court decision final ಆಗಿದ್ದರೆ ಇದನ್ನು ಮಾಡಲು ನಮಗೆ ಸಾಧ್ಯ ಆಗುತ್ತಿರಲಿಲ್ಲ. It is still pending. ಆ ಕೇಸಿನಿಂದ ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿ, what is the position in other states? Take action ಎಂದು ಹೈಕೋರ್ಟ್‌ಗಳಿಗೆ ಸೂಚನೆಯನ್ನು ನೀಡಲಾಗಿದೆ. ಹೈಕೋರ್ಟ್ ನಮ್ಮ Chief Executive of the State ಗೆ ಸೂಚನೆ ನೀಡಲಾಗಿದೆ. ಇದು ಸಚಿವರ ಗಮನಕ್ಕೆ ಬಾರದ ಹಾಗೆ ಆಗಿದೆಯೇ ಎನ್ನುವ ವಿಚಾರಗಳು ಬಂದವು. ಸರ್ಕಾರಕ್ಕೆ ಗೊತ್ತಿಲ್ಲದ ಹಾಗೆ ಜಿಲ್ಲಾಧಿಕಾರಿಗಳು ತಹಶೀಲ್ದಾರ್‌ರವರು ಮಾಡಲು ಸಾಧ್ಯವೇ ಎನ್ನುವ ವಿಚಾರ ಬಂದು, ಅವರನ್ನು ಕೇಳಿದಾಗ ಅವರು ಕೋರ್ಟಿನ ಆದೇಶದ ಪ್ರಕಾರ ಮಾಡಿದ್ದೇವೆ ಎನ್ನುವ ಉತ್ತರ ಅವರಿಂದ ಬಂತು. Case to case ತೀರ್ಮಾನ ಆಗುವ ತನಕ protect ಮಾಡಿ ಎನ್ನುವುದನ್ನು ನಾವು bill ನಲ್ಲಿ correct ಆಗಿ ಹೇಳಿದ್ದೇವೆ. We are not here to regularize or take once decision, ಅವರು ಮಾಡಿರುವುದು ಸರಿ ಎಂದು ನಾವು ಎಲ್ಲಿಯೂ ಹೇಳಿಲ್ಲ. ಸದ್ಯಕ್ಕೆ ರಕ್ಷಣೆ ಇರಲಿ, ಆಮೇಲೆ case to case ಕುರಿತು ಚರ್ಚೆ ಮಾಡಬಹುದು. ನಿಯಮಗಳ ಪ್ರಕಾರ ಮಾಡುವುದೇ. ಬೇರೆ ಕಾಯಿದೆ ತರಬೇಕಾ? ಅಥವಾ ಸುಪ್ರೀಮ್ ಕೋರ್ಟಿನ ಆದೇಶ ಬಂದಲ್ಲಿ ಅದನ್ನು ಪಾಲನೆ ಮಾಡಬೇಕಾ ಎನ್ನುವುದನ್ನು ತೀರ್ಮಾನ ಮಾಡುವ ತನಕ ಅವರಿಗೆ ರಕ್ಷಣೆ ನೀಡುವುದು ಸೂಕ್ತ ಎನ್ನುವ ಉದ್ದೇಶದಿಂದ ಈ ಬಿಲ್ ತರಲಾಗಿದೆ. This is a temporary measure to protect temples. Highway ಗಳಲ್ಲಿ ದೇವಸ್ಥಾನ ಬಂದಲ್ಲಿ ಅದನ್ನೆಲ್ಲ ಸಹಿಸಿಕೊಳ್ಳುತ್ತೇವೆ ಎಂದು ನಾವೆಲ್ಲಿಯೂ ಹೇಳಿಲ್ಲ. ನಮಗೆ Highway ಬರುತ್ತೆ ಅಂತ ಗೊತ್ತಿರಲಿಲ್ಲ, ಕಟ್ಟಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಚಿವರೆ, ಎಲ್ಲವೂ ತಿಳಿದಿರುತ್ತದೆ. ಮದ್ದೂರಿನಲ್ಲಿ ಒಂದು ದೇವಸ್ಥಾನವಿದೆ. ಅಲ್ಲಿ ಒಬ್ಬ ಪೂಜಾರಿ ಇದ್ದ, ಆತನಿಗೆ ನೀನು ಈ ದೇವಸ್ಥಾನದಲ್ಲಿ ಪೂಜೆ ಮಾಡುವುದು ಸರಿ, ಶನೇಶ್ವರ ದೇವಸ್ಥಾನವನ್ನು ಇದರ ಜೊತೆಗೆ ಮಾಡು ಎಂದು ಯಾರೋ ಹೇಳಿದರು. ಆಗ ಅವನು 3 ಶನೇಶ್ವರ ದೇವಸ್ಥಾನಗಳನ್ನು ಸಹ ಮಾಡಿದ್ದಾನೆ. ಅಲ್ಲಿ ಹೆಣ್ಣುಮಕ್ಕಳು ಹೋಗಿ ಪೂಜೆ ಮಾಡುತ್ತಲೇ ಇರುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:_** ಆಗ ನೀವು ಆ ಹೆಣ್ಣುಮಕ್ಕಳಿಗೆ ಒಂದು ಪ್ರವಚನ ನೀಡಿ, ಏಕೆ ಈ ರೀತಿ ಮೌಢ್ಯದ ಪಾಲನೆ ಮಾಡುತ್ತೀರಾ ಎಂದು ಕೇಳಬಹುದಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ. ಆ ಮನುಷ್ಯ ನಾಲ್ಕು ದೇವಾಲಯಗಳನ್ನು ಕಟ್ಟಿ, ಅದೇ ಆತನಿಗೆ ಲಾಭದಾಯಕ ಉದ್ಯಮ ಆಗಿದೆ. ದೇಶದಲ್ಲಿಯೇ ಹಣ ಗಳಿಸುವುದಕ್ಕೆ ಇದು ಸುಲಭವಾದ ವಿಧಾನವಾಗಿದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರೆ, ನನ್ನ base ನಿಮಗೆ ಗೊತ್ತಿದ್ದೂ ನೀವು ಹೀಗೆ ಮಾತನಾಡಬಾರದು. ಮಾನ್ಯ ರಮೇಶ್‌ರವರ ಮಾತನ್ನು ಪರಿಗಣಿಸುತ್ತೇವೆ. ಆ ದಿನಾಂಕದಿಂದ ಮುಂದಕ್ಕೆ ಆಗುವುದಕ್ಕೆ ರಕ್ಷಣೆ ಸಿಗುವುದಿಲ್ಲ.

(ಗೊಂದಲ)

**ಶ್ರೀ ಪಿ.ಆರ್.ರಮೇಶ್** : ದಿನಾಂಕ: 2-07-2021ರಂದು ಹೈಕೋರ್ಟ್ ಒಂದು ಡೈರೆಕ್ಷನ್ ನೀಡಿದೆ. ಇದಕ್ಕೆ stay ಕೊಟ್ಟಿದ್ದಾರೆ.

**Sri J.C.MADHUSWAMY:-** We are prepared to face all the directions. ಬಿಡಿ ಈ ಬಗ್ಗೆ ಚರ್ಚೆ ಬೇಡ.

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೆ, ಕುಳಿತುಕೊಳ್ಳಿ. ನೀವು ಮಾತನಾಡಿದವರೇ ಮಾತನಾಡುತ್ತಿದ್ದರೆ ಬೇರೆಯವರು ಮಾತನಾಡುವುದು ಬೇಡವೇ?

**ಶ್ರೀ ಪಿ.ಆರ್.ರಮೇಶ್ :-** ಇದಕ್ಕೆ stay ಕೊಟ್ಟಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಇದಕ್ಕೆ stay ಕೊಟ್ಟಿದ್ದಾರೆ ಎಂದು ನಾವು ಸರ್ಕಾರದವರು ಕೈ ಕಟ್ಟಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಇದೆಲ್ಲ ಉದ್ಭವವಾಗಿದ್ದು, ಗುಜರಾತಿನಿಂದ, ಅಲ್ಲಿಂದ ಕರ್ನಾಟಕದ ವರೆಗೂ ಬೆಳೆದುಕೊಂಡು ಬಂದಿದೆ. ಇದರಿಂದ ಈಗ ನಮ್ಮಲ್ಲಿ ಶಾಂತಿಗೆ ಭಂಗ ತರುವ ಪರಿಸ್ಥಿತಿ ಉಂಟಾಗಿದೆ. ಅದಕ್ಕೆ ಒಂದು ತಾತ್ಕಾಲಿಕ ಪರಿಹಾರ ತರಲಾಗುತ್ತಿದೆ ಎಂದು ಸಚಿವರು ಹೇಳುತ್ತಿದ್ದಾರೆ. ನಾನು ನಿಜವಾಗಿಯೂ ಸಹ ಅಂದು ಗುಜರಾತಿನಲ್ಲಿ ಮುಖ್ಯಮಂತ್ರಿಯಾಗಿದ್ದವರನ್ನು ನಾನು appreciate ಮಾಡುತ್ತೇನೆ. ಏಕೆಂದರೆ ಅವರು, ತಾವು ವಿದೇಶದಲ್ಲಿದ್ದರೂ ಸಹ ಅವರ ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಆದೇಶ ನೀಡಿ, ಸಾರ್ವಜನಿಕ ಸೇವೆಗಳಿಗೆ, ರಸ್ತೆ ಸಂಪರ್ಕಗಳಿಗೆ ಅಡ್ಡಿಯಾಗುತ್ತಿರುವ ಕಾರಣ ಕಾನೂನು ಬದ್ಧವಾಗಿಲ್ಲದ ದೇವಾಲಯಗಳನ್ನೆಲ್ಲ ಒಡೆದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿ, ಅದನ್ನೆಲ್ಲ ತೆರವುಗೊಳಿಸಲು ಸೂಚನೆ ನೀಡಿದ್ದರು. ತುಂಬಾ ಶನಿದೇವರ ದೇವಾಲಯಗಳಿರುವುದು ನಮ್ಮ ಜಿಲ್ಲೆಯಲ್ಲಿಯೇ, ಒಂದು ಅರಳಿ ಮರ ಇದ್ದರೆ ಅಲ್ಲೊಂದು ದೇವಸ್ಥಾನ ಬರುತ್ತದೆ. ಇದೆಲ್ಲ ಬೇಡ .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಭಗವಂತ ನಿಮಗೆ ಯಾವಾಗಲಾದರೂ ಅವಕಾಶ ಕೊಟ್ಟರೆ ಮಾಡಿ, ನಾವು ತೀರಾ ಸಣ್ಣವರು, ನಮಗೆ ಈಗ ಅಷ್ಟು ಶಕ್ತಿ ಇಲ್ಲ. ಅವರು ದೊಡ್ಡವರು ಮಾಡಿದ್ದಾರೆ. ನಮಗೆ ಸಾಧ್ಯವಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಅಂತಹದ್ದೇ ಒಂದು ಬದ್ಧತೆಯನ್ನು ಈ ಸರ್ಕಾರ ಪ್ರದರ್ಶನ ಮಾಡಬೇಕಾಗಿದೆ. ಏಕೆಂದರೆ ಇಂದಿನ ಮಾನ್ಯ ಪ್ರಧಾನಮಂತ್ರಿಗಳೇ ಅಂದು ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಅವರ ಹಿಂಬಾಲಕರಾಗಿರುವ ನಿಮಗೆ ಆ ಬದ್ಧತೆ ಏಕಿಲ್ಲ, ಅದನ್ನೆಲ್ಲ ನೀವು ಮಾಡಿ. ಸಾರ್ವಜನಿಕ ಹಿತಾಸಕ್ತಿಯಿಂದ ಅಕ್ರಮವನ್ನು ಸಕ್ರಮ ಮಾಡುವುದು ಬೇಡ. ಇದನ್ನೆಲ್ಲ ಸಕ್ರಮಗೊಳಿಸಲು ಕಾಯಿದೆಯನ್ನೇ ತಂದುಬಿಟ್ಟರೆ ರಸ್ತೆಗೊಂದು ದೇವಸ್ಥಾನಗಳು ಹುಟ್ಟಿಕೊಂಡು ಬಿಡುತ್ತವೆ. ಇರುವ ದೇವಸ್ಥಾನಗಳಿಗೆ ಕೈ ಮುಗಿಯುವ. ಇಲ್ಲದಿದ್ದರೆ ಜಾತಿಗೊಂದು, ವಠಾರಕ್ಕೊಂದು, ಪಂಕ್ತಿಗೊಂದು, ಮನೆಗೊಂದು ದೇವಾಲಯಗಳು ಆಗಿಬಿಡುತ್ತವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, 2009ರಿಂದ 2021ರವರೆಗೆ ಈ ಕೆಲಸವನ್ನು ಅಂದಿನ ಸರ್ಕಾರ ಮಾಡಬಹುದಿತ್ತಲ್ಲವೇ? ಆಗ ನಮಗೆ ಈ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಮಾನ್ಯ ರವಿಯವರು ಗುಜರಾತಿನ ಮುಖ್ಯಮಂತ್ರಿ ಬಗ್ಗೆ, ಮತ್ತು ಸುಪ್ರೀಮ್ ಕೋರ್ಟಿನ ಆದೇಶದ ಬಗ್ಗೆ ಹೇಳಿದರು, ಅದೆಲ್ಲ ನಡೆದಿರುವುದು 2009ರಲ್ಲಿಯೇ, ಅಂದಿನ ಸರ್ಕಾರವೇ ಇದನ್ನೆಲ್ಲ ಮಾಡಬಹುದಿತ್ತು.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೆ, ಕಾನೂನು ಸಚಿವರಾಗಿರುವ ಗಟ್ಟಿಗರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರ ಕೈಯಲ್ಲಿಯೇ ಇದನ್ನು ಮಾಡಲಿಕ್ಕೆ ಆಗುವುದಿಲ್ಲ ಎಂದರೆ ಹೇಗೆ? ಈಗ ಕಾನೂನು ಸಚಿವರ ಕ್ಷೇತ್ರದಲ್ಲಿಯೇ ಜನ ಸಾಮಾನ್ಯರು ಬಂದು ನಮ್ಮ ಊರಿನಲ್ಲಿ ಶಾಲೆಯಿಲ್ಲ ಒಂದು ಶಾಲೆ ಕಟ್ಟಿಸಿಕೊಡಿ ಎಂದು 1% ಜನರು ಬರುತ್ತಾರೆ, ಉಳಿದ 99 % ಜನರು ದೇವಾಲಯಗಳನ್ನು ಕಟ್ಟಿಕೊಡಿ ಎಂದು ಬರುತ್ತಾರೆ.

**ಡಾ|| ತೇಜಸ್ವಿನಿ ಗೌಡ**:- ಮಾನ್ಯ ಸಭಾಪತಿಗಳೇ, ಇಲ್ಲಿ ವಿಷಯಾಂತರ ಆಗುತ್ತಿದೆ. ದಯಮಾಡಿ ಬಿಲ್ ಬಗ್ಗೆ ಚರ್ಚೆ ಮಾಡಲಿ. ನಮಗೂ ಮಾತನಾಡಲಿಕ್ಕಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1024) 24-09-2021/ 1-40/ ಎಲ್ಎಂ(ಕೆಹೆಚ್)-ಎಕೆ

**(ಉಪ ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಆಚೆ ಹೋಗುತ್ತೇನೆ. ತಾವು ಮಾತನಾಡಿಕೊಳ್ಳಿ.

**ಶ್ರೀ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅದೇನೂ ಮಹಿಳೆಯರೋ, ಓ ಎನ್ನುವ ಪದವನ್ನು ಕಡತದಿಂದ ತೆಗೆಸಬೇಕು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಭಾರತಿ ಶೆಟ್ಟಿಯವರು ನಮ್ಮ ಕಡೆ ಬಂದು ನೋಡಲಿ, ನಮ್ಮ ಕಡೆ ಆ ರೀತಿಯೇ ಹೇಳುವುದು. ಇದು ಅಪಹಾಸ್ಯ ಅಲ್ಲ.

**ಉಪ ಸಭಾಪತಿಯವರು:-** ಸಾಮಾನ್ಯವಾಗಿ ನಾವು ಯಾರನ್ನೂ ಅಪಹಾಸ್ಯ ಮಾಡಬಾರದು. ಈಗ ಆಯಿತು ಬಿಡಿ. ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಯಾವ ವಿಚಾರಗಳು ವ್ಯಂಗ್ಯವಾಗಬಾರದು.

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಮತ್ತೆ ಹೇಳುತ್ತಿದ್ದೇನೆ. ಮಾನ್ಯ ಮರಿತಿಬ್ಬೇಗೌಡರವರೇ, ನಾವು ಯಾರದನ್ನೂ regularize ಮಾಡುವುದಕ್ಕೆ ವಿಧೇಯಕವನ್ನು ತಂದಿಲ್ಲ ಎನ್ನುವುದು ಮೊದಲನೆಯ ಅಂಶ. ಎರಡನೆಯ ಅಂಶವೆಂದರೆ, "we will consider in future, case by case" ಎಂದು ನಾವು ಹೇಳಿದ್ದೇವೆ. ಮೂರನೆಯ ಅಂಶವೆಂದರೆ, ಹೌದು, ಕೋರ್ಟ್‌ನಿಂದ ಫೈನಲ್ ಆರ್ಡರ್‌ಗಳು ಏನಾಗುತ್ತದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಯವರೆಗೂ ಒಂದು absolute law ಮಾಡುವುದು ಕಷ್ಟ ಎಂದು ಹೇಳಿದ್ದೇವೆ. ಇಲ್ಲಿಂದ ಮುಂದಕ್ಕೆ ಹೊಸ construction ಅನ್ನು allow ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಯಾವುದೋ ಕಾಲದಲ್ಲಿ ಆಗಿರುವುದರ ಬಗ್ಗೆ ಶಾಂತಿ ಕದಡುವುದು ಬೇಡ ಎಂದು government ಒಂದು measure ತೆಗೆದುಕೊಂಡಿರುವುದನ್ನು ಇವರು appreciate ಮಾಡುತ್ತಾರೆ ಎಂದು ತಿಳಿದುಕೊಂಡು ನಾವು ಈ ವಿಧೇಯಕವನ್ನು ತಂದಿದ್ದೇವೆ. ಆದರೆ, ಈ ರೀತಿ ಚರ್ಚೆಯಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ದಯಮಾಡಿ, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೋರುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021 ನೇ ಸಾಲಿನ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**ಖಂಡ 2 ರಿಂದ 8 ರವರೆಗೆ**

**ಉಪ ಸಭಾಪತಿಯವರು:-** "ಖಂಡ 2 ರಿಂದ 8 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2 ರಿಂದ 8 ರವರೆಗೆ ಈ ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಒಂದು ಮನವಿಯನ್ನು ಎಲ್ಲಾ ಮಾನ್ಯ ಶಾಸಕರಿಗೂ ತಿಳಿಸುತ್ತೇನೆ. ಲೋಕಸಭೆ ಸ್ಪೀಕರ್ ಆದ ಓಂ ಬಿರ್ಲಾರವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಧ್ಯಾಹ್ನ 2-30 ಗಂಟೆಗೆ ನಮ್ಮ ವಿಧಾನ ಸಭೆಯ ಸದನದಲ್ಲಿ ಮಾತನಾಡುವವರಿದ್ದಾರೆ. ದಯಮಾಡಿ ಎಲ್ಲರೂ ಅಲ್ಲಿಗೆ ಬಂದು ಪಾಲ್ಗೊಳ್ಳಬೇಕು. ತಮ್ಮ ಸಹಾಯ ಮತ್ತು ಸಹಕಾರ ಕೊಡಬೇಕು. ಹಾಗೆಯೇ Banquet Hall

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ಭೋಜನ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಅಲ್ಲಿಗೂ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲದ precedent ಎಲ್ಲಾ ತೆಗೆದುಕೊಂಡು ಬಂದು, Banquet Hall ಗೆ ಬನ್ನಿ ಎಂದರೆ, ಯಾರು ಬರುತ್ತಾರೆ. ರಾಷ್ಟ್ರಪತಿ, ಪ್ರಧಾನ ಮಂತ್ರಿ, Governor ನವರು ಬಂದರೆ ಸರಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ತಡೆಹಿಡಿಯಲಾದ ಪ್ರಶ್ನೆಗೆ ಉತ್ತರವನ್ನು ಕೊಡಿಸಬೇಕಾಗಿ ವಿನಂತಿ ಪತ್ರವನ್ನು ಕೊಟ್ಟಿದ್ದಾರೆ. ಈಗಲ್ಲದಿದ್ದರೂ ಮುಂದೆ ಉತ್ತರವನ್ನು ಕಳುಹಿಸುವಂತಹ ವ್ಯವಸ್ಥೆಯಾಗಬೇಕು.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಎರಡು ಬಾರಿ ಮುಂದಕ್ಕೆ ಹೋಗಿದೆ. ನಾನು ಸ್ವಲ್ಪ ಹೊರಗಡೆ ಹೋದಾಗ ಈ ಪ್ರಶ್ನೆ ಬಂದಿತ್ತು. ನನಗೆ ಉತ್ತರವನ್ನು ಕೊಡಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಏಕೆಂದರೆ . . .

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನದೊಂದು Private Members' Bill ಇದೆ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರು ಎಲ್ಲರ ಪ್ರಶ್ನೆಗಳಿಗೂ ಉತ್ತರವನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯಾಗಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ ಮತ್ತು ಮಾನ್ಯ ಯು.ಬಿ.ವೆಂಕಟೇಶ್‌ರವರೇ ಉತ್ತರವನ್ನು ಕಳುಹಿಸಿಕೊಡುತ್ತಾರೆ ಎಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ. ಈಗ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**8. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಕ್ಕೆ</u> ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಊ) ವಿಷಯ: ಕಳೆದ 2-3 ದಿವಸಗಳ ಹಿಂದೆ ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ವೈರಲ್ ಆಗಿರುವ ಬಗ್ಗೆ.**

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿರವರು ದಿನಾಂಕ:15-09-2021ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಋ) ವಿಷಯ: ಜಾನುವಾರುಗಳ ಆರೋಗ್ಯಕ್ಕೆ ಲಸಿಕೆಗಳ ಪೂರೈಕೆಯನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿರುವ ಬಗ್ಗೆ

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ದಿನಾಂಕ:23-09-2021ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಪಶು ಸಂಗೋಪನೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) ವಿಷಯ: ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ್ ಎಲ್. ಘೋಟ್ನೇಕರ್‌ರವರು ದಿನಾಂಕ:23-09-2021ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 9. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 144ನೇ ಅಧಿವೇಶನಕ್ಕೆ ಸಂಬಂಧಿಸಿದಂತೆ, ದಿನಾಂಕ: 13-09-2021 ರಿಂದ ದಿನಾಂಕ: 24-09-2021 ರವರೆಗೆ ಪ್ರಶ್ನೋತ್ತರ ಅವಧಿಯ ನಂತರ ವಿವಿಧ ಇಲಾಖೆಗಳಿಂದ ಸ್ವೀಕರಿಸಲಾದ ಒಟ್ಟು 472 ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ನಿಯಮ 72 ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು, ನಿಯಮ 330ರ ಸೂಚನೆಗಳಿಗೆ ಮತ್ತು ನಿಯಮ 58ರ ಅಡಿಯಲ್ಲಿ ಸಲ್ಲಿಕೆಯಾದ ಅರ್ಧ ಗಂಟೆ ಕಾಲಾವಧಿ ಸೂಚನೆಗಳಿಗೆ ಸರ್ಕಾರದಿಂದ ನೀಡಲಾದ ಉತ್ತರಗಳ ಮಂಡನೆ**

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 144ನೇ ಅಧಿವೇಶನಕ್ಕೆ ಸಂಬಂಧಿಸಿದಂತೆ, ದಿನಾಂಕ: 13-09-2021 ರಿಂದ ದಿನಾಂಕ: 24-09-2021 ರವರೆಗೆ ವಿವಿಧ ಇಲಾಖೆಗಳಿಂದ ಸ್ವೀಕರಿಸಲಾದ ನಿಯಮ-72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳಿಗೆ ಮತ್ತು ನಿಯಮ 330ರ ಅಡಿಯಲ್ಲಿ ನೀಡಲಾಗಿರುವ ಸೂಚನೆಗಳಿಗೆ ಹಾಗೂ ನಿಯಮ 58ರ ಅಡಿಯಲ್ಲಿ ನೀಡಲಾಗಿರುವ ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅ) ನಿಯಮ 72 ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

1. ವಿಷಯ: ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯಲ್ಲಿನ ಶಿಫಾರಸ್ಸನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡು ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವಂತೆ ಶೇಕಡಾ 100 ರಷ್ಟು ವೇತನಾನುದಾನ, ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು (ಅನುದಾನ ಸಂಹಿತೆ) ನೀಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಸೂಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡಿದ್ದು, ಸದರಿ ಬಡಾವಣೆಗಳನ್ನು ಪಂಚಾಯಿತಿ ಕಂದಾಯ ವ್ಯಾಪ್ತಿಗೆ ಸೇರಿಸಿ ಕಂದಾಯ ಬಡಾವಣೆಗಳಿಂದ ಅಭಿವೃದ್ಧಿ ಶುಲ್ಕ ಹಾಗೂ ಕಂದಾಯವನ್ನು ಕಟ್ಟಿಸಿಕೊಳ್ಳುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ವಿಷಯ: ಬೆಂಗಳೂರು ನಗರ ಶಿವಾಜಿನಗರ ನ್ಯೂ ಬಂಬೂ ಬಜಾರ್‌ನ ಐನ್ಸ್ ರಸ್ತೆಯಲ್ಲಿ ಕಿವುಡ ಮತ್ತು ಮೂಗರ ತರಬೇತಿ ಕೇಂದ್ರವು 1986 ರಲ್ಲಿ ಪ್ರಾರಂಭವಾಗಿ ಸತತವಾಗಿ ನಡೆದುಕೊಂಡು ಬರುತ್ತಿದ್ದು, ಈ ಸಂಸ್ಥೆಯ ನೌಕರರಿಗೆ ಯಾವುದೇ ಬದಲಿ ವ್ಯವಸ್ಥೆ ಮಾಡದೆ 2018 ಆಗಸ್ಟ್ ತಿಂಗಳಿನಿಂದ ವೇತನವನ್ನು ನೀಡದೆ ಇರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

4. ವಿಷಯ: ಕರ್ನಾಟಕ ರಾಜ್ಯದಲ್ಲಿ 90 ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರು ಪಂಚಾಯಿತಿ ಪ್ರತಿನಿಧಿ ವ್ಯವಸ್ಥೆಯಡಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಪಂಚಾಯತಿ ಸದಸ್ಯರ ಗೌರವಧನವನ್ನು ಹೆಚ್ಚಿಸುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

5. ವಿಷಯ: ಕೊಡಗು ಜಿಲ್ಲೆ, ಮಡಿಕೇರಿಯ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಯು ನೆನಗುದಿಗೆ ಬಿದ್ದಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6. ವಿಷಯ: ಕೋವಿಡ್-19 ಸೋಂಕಿನಿಂದ ರಾಜ್ಯದ ಜನರು ಬಾಧಿತರಾದ ಸಂದರ್ಭದಲ್ಲಿ ವೃತ್ತಿ ಛಾಯಾಗ್ರಾಹಕರು (ಫೋಟೋಗ್ರಾಫರ್ಸ್)ಗಳನ್ನು ಸಹ ಈ ಯೋಜನೆಗೆ ಸೇರಿಸಿಕೊಂಡು ಇವರಿಗೂ ಸಹ ಉಳಿದ ಅಸಂಘಟಿತ ವಲಯದ ಜನರಿಗೆ ನೀಡಿದಂತೆ ಧನ ಸಹಾಯ ನೀಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳು, ಡಿಪಿಎಆರ್, ಹಣಕಾಸು, ಗೃಹ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಗುಪ್ತಚರ (ಗೃಹ ಖಾತೆಯಿಂದ) ಸಂಪುಟ ವ್ಯವಹಾರ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

7. ವಿಷಯ: 2011 ರಲ್ಲಿ ಸರ್ಕಾರವು ಪದವಿ ಪೂರ್ವ ವೃತ್ತಿ ಶಿಕ್ಷಣ ಇಲಾಖೆ ಜೆ.ಓ.ಸಿ.ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರಲ್ಲಿ ಕೇವಲ 3746 ಸಿಬ್ಬಂದಿಗಳನ್ನು ಅವರ ವಿದ್ಯಾರ್ಹತೆ ಅನುಗುಣವಾಗಿ ಸರ್ಕಾರದ ವಿವಿಧ ಇಲಾಖೆಗಳಿಗೆ ಖಾಲಿಯಿರುವ ಹುದ್ದೆಗಳಿಗೆ ವಿಲೀನಗೊಳಿಸಿದ್ದು, ಆದರೆ, ಅದೇ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಉಳಿದ 530 ಜೆ.ಓ.ಸಿ. ಸಿಬ್ಬಂದಿಗಳನ್ನು ವಿಲೀನಗೊಳಿಸುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ. ಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8. ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ವ್ಯಾಪ್ತಿಯ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಕಳೆದ ವರ್ಷದಲ್ಲಿ ಎನ್.ಆರ್.ಇ.ಜಿ.ಎ. ಯೋಜನೆಯಡಿ 8 ರಿಂದ 9 ಕಡೆ ಎಸ್.ಎಂ.ಸಿ. ಕಾಮಗಾರಿಗಳಿಗೆ ಹಣ ಬಿಡುಗಡೆಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕಾಂತರಾಜ್ (ಬಿಎಂಎಲ್) ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

9. ವಿಷಯ: ಪ್ರಾಥಮಿಕ ಶಾಲೆಯಿಂದ ಪೌಢಶಾಲೆಗೆ, ಪೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಬಡ್ತಿ ಪಡೆದು ಶಿಕ್ಷಕರು ಹಾಗೂ ಉಪನ್ಯಾಸಕರಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಬಡ್ತಿ ಪಡೆಯದೆ ಇರುವ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಕಡಿಮೆ ಇಲ್ಲದಂತೆ ವೇತನ ನಿಗದಿಗೊಳಿಸುವಂತೆ ವರದಿ ಮಾಡಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. ವಿಷಯ: ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆ.ಐ.ಎ.ಡಿ.ಬಿ.ಗೆ ಸರ್ಕಾರಿ ವಕೀಲರನ್ನು ನೇಮಿಸುವಾಗ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದೆ ಯಾವುದೇ ಮಾನದಂಡಗಳನ್ನು ರೂಪಿಸದೇ ಹಾಗೂ ಅನುಸರಿಸದೇ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮೇಲ್ಕಂಡ ಸಂಸ್ಥೆಗಳಿಗೆ ನ್ಯಾಯಾಲಯದಲ್ಲಿ ಬಹಳ ಹಿನ್ನಡೆಯಾಗುತ್ತಿರುವ ವಿಚಾರದ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ|| ವೈ.ಎ. ನಾರಾಯಣಸ್ವಾಮಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

11. ವಿಷಯ: ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಕೋವಿಡ್-19 ಕಾರಣದಿಂದ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ, ಬೋಧಕೇತರರು, ವಾಹನ ಚಾಲಕರು ಹಾಗೂ ಇತರೆ ಸಿಬ್ಬಂದಿ ವರ್ಗದವರನ್ನು ಅಸಂಘಟಿತ ವಲಯದ ಕಾರ್ಮಿಕರು ಎಂದು ಘೋಷಣೆ ಮಾಡಿ ಇವರಿಗೆ ಕಾರ್ಮಿಕ ಇಲಾಖೆಯಿಂದ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂಬ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

12. ವಿಷಯ: ರಾಜ್ಯದಲ್ಲಿ ನೇಕಾರಿಕೆ ಕಸುಬು ಮಾಡುವ ಅನೇಕ ಜನರು ಅಸಂಘಟಿತ ನೇಕಾರರಾಗಿದ್ದು, ಈ ನೇಕಾರ ವರ್ಗದ ಜನರ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮತ್ತು ಈ ವರ್ಗದ ಜನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಸಕ್ಕರೆ ಅಭಿವೃದ್ಧಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

13. ವಿಷಯ: ಬಾಗಲಕೋಟೆ ಜಿಲ್ಲೆಯಲ್ಲಿರುವ ಏಕೈಕ ಸಹಕಾರಿ ಸಕ್ಕರೆ ಕಾರ್ಖಾನೆಯಾಗಿರುವ ಮುಧೋಳ ತಾಲ್ಲೂಕಿನ ರನ್ನ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಹಸ್ತಾಂತರಿಸದೆ ಪುನರಾರಂಭ ಮಾಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಸಕ್ಕರೆ ಅಭಿವೃದ್ಧಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

14. ವಿಷಯ: ರಾಜ್ಯದ ಗ್ರಾಮೀಣ ಭಾಗದಲ್ಲಿ ಪ್ರಥಮ ಚಿಕಿತ್ಸಕರು ಅಧಿಕೃತ ಪದವಿ ಪಡೆದ ನುರಿತ ವೈದ್ಯರ ಆಸ್ಪತ್ರೆಗಳಲ್ಲಿ ತೆಲಂಗಾಣ ಹಾಗೂ ಸೀಮಾಂದ್ರ ರಾಜ್ಯದ ಮಾದರಿಯಂತೆ ಸೂಕ್ತ ತರಬೇತಿ (ಎಲ್.ಎಂ.ಪಿ)ಯನ್ನು ನೀಡಿ ಇವರಿಗೆ ಮಾನ್ಯತೆಯನ್ನು ನೀಡಿ, ಇವರ ಸೇವೆಯನ್ನು ಮುಂದುವರೆಸುವ ಕುರಿತು.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

15. ವಿಷಯ: ಬುಡಕಟ್ಟು ಹಾಗೂ ವನವಾಸಿಗಳು ವಾಸಿಸುವ ಪ್ರದೇಶಗಳಲ್ಲಿ ಪಾರಂಪರಿಕ ದೇವಸ್ಥಾನಗಳಿಗೆ, ಮುಜರಾಯಿ ಇಲಾಖೆಯ ಅನುದಾನವನ್ನು ಬಳಸಲು ಇರುವ ನಿಯಮಗಳ ತೊಡಕುಗಳ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

16. ವಿಷಯ: ಗಡಿ ಜಿಲ್ಲೆಗಳು ಮತ್ತು ಗಡಿ ತಾಲ್ಲೂಕುಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ನೀಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ.ಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

17. ವಿಷಯ: ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುರತ್ಕಲ್ ಮಂಗಳೂರು ಬಳಿ ಅತಿವೇಗವಾಗಿ ಬೆಳೆಯುತ್ತಿದ್ದು, ಯು.ಜಿ.ಡಿ.ಯೋಜನೆಯನ್ನು ಬೇರೆಡೆಗೆ ವರ್ಗಾಯಿಸಬೇಕೆಂಬ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಿ.ಎಂ.ಫಾರೂಖ್ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

18. ವಿಷಯ: ಸಹಕಾರ ಸಂಘಗಳ ಕಾಯ್ದೆ ಕಲಂ 70 ಹಾಗೂ 71 ರಡಿಯ ಪ್ರಕರಣದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಪ್ರಕರಣದ ಹಾಗೂ ಆದೇಶ ಹೊರಡಿಸುವಲ್ಲಿ ಜಂಟಿ ನಿಬಂಧಕರ ಕಛೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅ.ದೇವೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಸಹಕಾರ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

19. ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಬೋಧಕ/ಬೋಧಕೇತರ ಸರ್ಕಾರಿ ನೌಕರರಿಗೆ ನೀಡಲಾಗುವ ಕೆ.ಜಿ.ಐ.ಡಿ ಇ.ಜಿ.ಐ.ಎಸ್. ಡಿ.ಸಿ.ಆರ್.ಜಿ. ಜ್ಯೋತಿ ಸಂಜೀವಿನಿ ಮುಂತಾದ ಸೌಲಭ್ಯಗಳನ್ನು ನೀಡದೆ ಇರುವುದರಿಂದ ಹಾಗೂ ಕರ್ನಾಟಕ ವಸತಿ ಶಿಕ್ಷಣ ನಿರ್ದೇಶನಾಲಯವನ್ನಾಗಿ ಮಾಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

20. ವಿಷಯ: ಅನುದಾನಿತ ಶಾಲಾ ಕಾಲೇಜುಗಳಲ್ಲಿ ದಿನಾಂಕ:01-04-2006ರ ನಂತರ ನೇಮಕಗೊಂಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗೆ ಹಾಲಿ ನೀಡುತ್ತಿರುವ ಎನ್.ಪಿ.ಎಸ್. ಯೋಜನೆಯಿಂದ ಇದುವರೆಗೂ ಯಾವೊಬ್ಬ ನೌಕರರಿಗೂ ಪ್ರಯೋಜನವಾಗುತ್ತಿಲ್ಲ. ಇವರೆಲ್ಲರೂ ಆರ್ಥಿಕ ತೊಂದರೆಗೊಳಗಾಗಿದ್ದಾರೆ. ಆದಕಾರಣ, ಸರ್ಕಾರಿ ನೌಕರರಿಗೆ ನೀಡುತ್ತಿರುವ ಮಾದರಿಯಲ್ಲಿ ಪಿಂಚಣಿ ಸೌಲಭ್ಯ ಮತ್ತು ಇತರೆ ಸೌಲಭ್ಯವನ್ನು ಸರ್ಕಾರವು ಭರಿಸದೇ ಇರುವುದರಿಂದ, ಉಂಟಾದ ಗಂಭೀರ ಸಮಸ್ಯೆ ಕುರಿತು.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

21. ವಿಷಯ: ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯವಿಲ್ಲದೇ ಇವರುಗಳು ದೀರ್ಘಕಾಲದಿಂದ ತುಂಬಾ ತೊಂದರೆಗೊಳಗಾಗಿದ್ದು, ಇವರನ್ನು ಜ್ಯೋತಿ ಸಂಜೀವಿನಿ ಯೋಜನೆಯ ವ್ಯಾಪ್ತಿಗೆ ತರದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

22. ವಿಷಯ: ಬೆಂಗಳೂರಿನಲ್ಲಿ ಹಲವಾರು ಜಂಕ್ಷನ್/ಸರ್ಕಲ್‌ಗಳಲ್ಲಿ ಭಿಕ್ಷುಕರ ಹಾವಳಿ ಹೆಚ್ಚಾಗಿದ್ದು, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಯಾವುದೇ ಇಲಾಖೆಯಿಂದ ಕ್ರಮ ಕೈಗೊಳ್ಳದಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

23. ವಿಷಯ: ಹೆಬ್ಬಾಳ ಪ್ಲೈ ಓವರ್ ಕೆಳಗಡೆ "ಮಂಗಳಮುಖಿಯರ" ಕಾಟ ಹೆಚ್ಚಾಗಿದ್ದು, ಇದನ್ನು ತಡೆಯಲು ವಿಫಲವಾಗಿರುವ ವ್ಯವಸ್ಥೆಯ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

24. ವಿಷಯ: ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜೆ.ಓ.ಸಿ. ಸಿಬ್ಬಂದಿಗಳನ್ನು 2011 ರಲ್ಲಿ ವಿಶೇಷ ವಿಧೇಯಕ ತಂದು, ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಿದ್ದು, ಈ ವಿಲೀನ ಪ್ರಕ್ರಿಯೆಯಲ್ಲಿ 5 ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿದ್ದ 530 ಜೆ.ಓ.ಸಿ ಸಿಬ್ಬಂದಿಗಳನ್ನು ಕೈಬಿಟ್ಟಿರುವುದನ್ನು ವಿಲೀನ ವಿಧೇಯಕವನ್ನು ತಿದುಪಡಿ ಮಾಡಿ, ಇದಕ್ಕೆ ಸೂಕ್ತ ತಿದ್ದುಪಡಿ ತರದೆ ಇರುವುದರಿಂದ ಉಂಟಾಗಿರುವ ಸಮಸ್ಯೆ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

25. ವಿಷಯ: ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಹಾಗೂ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಇಲ್ಲದೇ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

26. ವಿಷಯ: ರಾಜ್ಯದ ಕಾಫಿ ಬೆಳೆಗಾರರಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಕೇಂದ್ರ ಕಾಫಿ ಮಂಡಳಿಯಿಂದ ಕೃಷಿ ಯಾಂತ್ರೀಕರಣಕ್ಕೆ ದೊರೆಯುತ್ತಿರುವ ಸಹಾಯ ಧನ, ಪ್ರೋತ್ಸಾಹ ಧನ, ಸಾಲ ಹಾಗೂ ಇತರೇ ಸೌಲಭ್ಯಗಳು ಕಡಿತಗೊಂಡಿರುವುದರಿಂದ, ರಾಜ್ಯದ ಕಾಫಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

27. ವಿಷಯ: ಎನ್.ಪಿ.ಎಸ್. ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ರಾಜ್ಯ ಸರ್ಕಾರವು ನೇಮಕ ಮಾಡಿರುವ ಸಮಿತಿಯು ಕೈಗೊಂಡಿರುವ ಕಾರ್ಯ ಪ್ರಗತಿಗಳ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳು, ಡಿಪಿಎಆರ್, ಹಣಕಾಸು, ಗೃಹ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಗುಪ್ತಚರ (ಗೃಹ ಖಾತೆಯಿಂದ) ಸಂಪುಟ ವ್ಯವಹಾರ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

28. ವಿಷಯ: ಭಾರತ ದೇಶದ ಅತ್ಯಂತ ಪ್ರತಿಷ್ಠಿತ ಇಂಜಿನಿಯರಿಂಗ್ ಸಂಸ್ಥೆಯಾದ "ಇನ್ಸಿಟ್ಯೂಟ್ ಆಫ್ ಇಂಜಿನಿಯರ್" ಕರ್ನಾಟಕ ಈ ಸಂಸ್ಥೆಗೆ ಬೀಗ ಹಾಕಿರುವುದರಿಂದ, ಈ ಸಂಸ್ಥೆಯ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಹಾಗೂ ತಾಂತ್ರಿಕ ನೈಪುಣ್ಯತೆ ನೀಡುವ ಶೈಕ್ಷಣಿಕ ವ್ಯವಸ್ಥೆಗೆ ದಕ್ಕೆ ಉಂಟಾಗಿರುವ ಸಮಸ್ಯೆ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

29. ವಿಷಯ: ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗುತ್ತಿದ್ದು, ರೈತರು, ಕೂಲಿ ಕಾರ್ಮಿಕರು, ಸಾಮಾನ್ಯ ವರ್ಗದವರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇದರ ಬೆಲೆ ಇಳಿಕೆ ಮಾಡುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳು, ಡಿಪಿಎಆರ್, ಹಣಕಾಸು, ಗೃಹ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಗುಪ್ತಚರ (ಗೃಹ ಖಾತೆಯಿಂದ) ಸಂಪುಟ ವ್ಯವಹಾರ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

30. ವಿಷಯ: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ವರದಿಯನ್ವಯ ಕೋಟ್ಯಂತರ ರೂಪಾಯಿ ಮೊತ್ತದ ಅಲ್ಪಸಂಖ್ಯಾತರ ಆಸ್ತಿ ಕಬಳಿಕೆ ಆರೋಪ ಕೇಳಿ ಬಂದಿರುವುದರಿಂದ, ಸದರಿ ವರದಿಯನ್ನು ಸದನದಲ್ಲಿ ಮಂಡಿಸುವ ಮತ್ತು ಅಲ್ಪಸಂಖ್ಯಾತ ಮುಸಲ್ಮಾನರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

31. ವಿಷಯ: ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಸಂಗ್ರಹಿಸುವುದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯತೆ ವಹಿಸುತ್ತಿರುವ ಮತ್ತು ತೆರಿಗೆ ಆದಾಯ ಕುಂಠಿತವಾಗುತ್ತಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

32. ವಿಷಯ: ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಹೊರಗೆ ತೋಟ-ಗದ್ದೆಗಳಲ್ಲಿ ಗುಂಪು ಗುಂಪಾಗಿ ಮನೆ ಕಟ್ಟಿಕೊಂಡು ವಾಸಿಸುವ ಜನರಿಗೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವ ಇವರ ಮೂಲಭೂತ ಸಮಸ್ಯೆಗಳ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

